ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 39 | ಸೆಪ್ಟೆಂಬರ್ 21-27, 2020 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com

ಸಪ್ಟೆಂಬರ್ 17-22: ಕೊವಿಡ್-ಆರ್ಥಿಕ ವಿಫಲತೆ ವಿರುದ್ಧ ರಾಷ್ಟ್ರೀಯ ಪ್ರತಿಭಟನೆ



ಭಾರತದ ರೈತರಿಗೆ ಮಹಾಮೋಸ

ತ್ರಿವಳಿ ಮಸೂದೆಗಳ ತ್ರಿಶೂಲ ಇರಿತ



ಕೊರೊನ ಕಾಲದಲ್ಲಿ ಮತ್ತು ನಂತರ ಸಾರ್ವಜನಿಕ ಆರೋಗ್ಯ ವ್ಯವಸ್ಥೆ





ಪ್ರಜಾಪ್ರಭುತ್ವವಾದಿಗಳ ಬೇಟೆಗೆ ಮುಂದಾಗಿದ್ದಾರೆ ಮೋದಿ!



ಕಾರ್ಪೋರೇಟ್-ಪರ ಸರಕಾರದ ಸಾಮಾಜಿಕ ಭದ್ರತೆಯ ನಾಟಕ !

ಶಾಂತಿಯುತ ಪ್ರತಿಭಟನೆಗಳ ಅಪರಾಧೀಕರಣವನ್ನು ನಿಲ್ಲಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಗೃಹಮಂತ್ರಿ ಅಮಿತ್ ಷಾರವರ ಅಡಿಯಲ್ಲಿ ದಿಲ್ಲಿ ಪೋಲೀಸ್ ಎಂತಹ ಭಂಡತನದಿಂದ ವರ್ತಿಸುತ್ತಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಘಾತ ವ್ಯಕ್ತಪಡಿಸಿದೆ. ಫೆಬ್ರುವರಿಯಲ್ಲಿ ಈಶಾನ್ಯ ದಿಲ್ಲಿಯಲ್ಲಿ ನಡೆದ ಭೀಷಣ ಕೋಮುವಾದಿ ಹಿಂಸಾಚಾರಕ್ಕೆ ಸಂಬಂಧಪಟ್ಟಂತೆ ಅಮಿತ್ ಷಾ ಪ್ರಮುಖ ರಾಜಕೀಯ ಮುಖಂಡರನ್ನು, ಅಧ್ಯಯನ ಮತ್ತು ಸಾಂಸ್ಕೃತಿಕ ವಲಯದ ವರಿಷ್ಟರನ್ನು ಹಾಗೂ ಸಕ್ರಿಯ ಕಾರ್ಯಕರ್ತರನ್ನು ಸಿಲುಕಿಸಲು ಪ್ರಯತ್ನಿಸುತ್ತಿದ್ದಾರೆ. ಇಷ್ಟೊಂದು ಒರಟು ಪಕ್ಷಪಾತ ಮತ್ತು ಹಗೆಸಾಧನೆಯ ಕೃತ್ಯವನ್ನು ಎಷ್ಟು ಬಲವಾಗಿ ಖಂಡಿಸಿದರೂ ಕಡಿಮೆಯೇ ಎಂದು ಅದು ಹೇಳಿದೆ.

ಸಂಘಟಿತ ಕೋಮುವಾದಿ ಹಿಂಸಾಚಾರದ ಬಗ್ಗೆ ತನ್ನದೇ ಕಥನವನ್ನು ಕಟ್ಟುವಲ್ಲಿ ಬಿಜೆಪಿ–ಆರೆಸ್ಸೆಸ್ ದಿಲ್ಲಿ ಗಲಭೆಗಳು ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ)–ವಿರೋಧಿ ಪ್ರತಿಭಟನಾಕಾರರು ಹೂಡಿರುವ "ಆಳವಾಗಿ ಬೇರುಬಿಟ್ಟಿರುವ ಪಿತೂರಿ" ಎಂದು ಚಿತ್ರಿಸುವ ಪ್ರಯತ್ನದಲ್ಲಿದೆ ಎಂಬುದು ಅತ್ಯಂತ ಸ್ಪಷ್ಟವಾಗಿ ಕಾಣುತ್ತದೆ. ಇದರ ಇತ್ತೀಚಿನ ಭಾಗವಾಗಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಪ್ರಖ್ಯಾತ ಅರ್ಥಶಾಸ್ತ್ರಜ್ಞೆ ಜಯತಿ ಘೋಷ್, ದಿಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಪೂರ್ವಾನಂದ, ಸ್ವರಾಜ್ಯ ಅಭಿಯಾನ ಮುಖಂಡ ಯೋಗೇಂದ್ರ ಯಾದವ್ ಮತ್ತು ಡಾಕ್ಯುಮೆಂಟರಿ ಚಲನಚಿತ್ರಕಾರರಾಗಿರುವ ರಾಹುಲ್ ರಾಯ್ ಮತ್ತಿತರ ಪ್ರಮುಖ ವ್ಯಕ್ತಿಗಳ ಹೆಸರುಗಳನ್ನು ಒಂದು 'ಯೋಜನೆ'ಯ ಭಾಗವಾಗಿ ಪ್ರತಿಭಟನಾಕಾರರಿಗೆ ಉತ್ತೇಜನೆ ನೀಡಿದವರು ಎಂದು ದಿಲ್ಲಿ ಪೋಲೀಸ್ ಎಳೆದು ಹಾಕಿದ್ದಾರೆ.

ಈ ಪ್ರಮುಖ ವ್ಯಕ್ತಿಗಳ ಹೆಸರುಗಳು ದಿಲ್ಲಿ ಪೋಲೀಸ್ ಸಿಎಎ–ಎನ್‌ಆರ್‌ಸಿ ಪ್ರತಿಭಟನೆಗಳಲ್ಲಿ ವಹಿಸಿದರೆನ್ನಲಾದ ಪಾತ್ರಕ್ಕೆ ಸಂಬಂಧಿಸಿ ಸಲ್ಲಿಸಿರುವ ಎಫ್‌ಐಆರ್ 50/20 ರ ಪೂರಕ ಆರೋಪ ಪತ್ರದಲ್ಲಿ ಕಂಡು ಬಂದಿವೆ. ಇದು ಪ್ರಮುಖ ವಿರೋಧಿಗಳ ಮೇಲೆ ಆರೋಪ ಹೊರಿಸಿ ಅವರನ್ನು ರಾಕ್ಷಸರಾಗಿ ಬಿಂಬಿಸಲು ಪೋಲೀಸ್ ಮತ್ತು ಇತರ ಪ್ರಭುತ್ವ ಸಂಸ್ಥೆಗಳಾದ ಸಿ.ಬಿ.ಐ., ಎನ್.ಐ.ಎ, ಇ.ಡಿ. ಮುಂತಾದವುಗಳ ಅತ್ಯಂತ ನಗ್ನ ದುರುಪಯೋಗದ, ಇತ್ತೀಚೆಗೆ ಬೆಳೆಯುತ್ತಿರುವ ವಿಧಾನಕ್ಕೆ ಅನುಗುಣವಾಗಿಯೇ ಇದೆ. ಇದರಲ್ಲಿ ಎನ್‌ಎಸ್‌ಎ, ಯುಎಪಿಎ, ರಾಜದ್ರೋಹ ಕಾಯ್ದೆ ಎಂಬ ಕರಾಳ ಶಾಸನಗಳ ಅಂಶಗಳನ್ನು ಹೇರಿ, ಸಂವಿಧಾನದಲ್ಲಿ ಹೇಳಿರುವುದಕ್ಕೆ ತದ್ವಿರುದ್ಧವಾಗಿ ಅಧಿಕಾರಗಳ ಇಂತಹ ನಗ್ನ ದುರುಪಯೋಗವನ್ನು ಬಲವಾಗಿ ವಿರೋಧಿಸುವವರಿಗೆ ಕಿರುಕುಳ ಕೊಡಲು ಮತ್ತು ಜೈಲಿಗಟ್ಟಲು ಬಳಸುವುದು ಸೇರಿದೆ. ಭೀಮಾ–ಕೊರೆಗಾಂವ್ ಪ್ರಕರಣದಲ್ಲಿ ಎನ್.ಐ.ಎ. ಮನಬಂದಂತೆ ವರ್ತಿಸುತ್ತಿರುವುದು ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸುತ್ತಿರುವುದು ಮೋದಿ ಸರಕಾರ ಹಿಡಿದಿರುವ ದಾರಿಯನ್ನು ಎತ್ತಿ ತೋರಿಸುತ್ತಿದೆ. ಅದೇ ರೀತಿಯಲ್ಲಿ ಅಲಹಾಬಾದ್ ಹೈಕೋರ್ಟ್ ಡಾ. ಕಫೀಲ್ ಖಾನ್ ರವರ ಮೇಲೆ ಹಾಕಿದ್ದ ಎನ್‌ಎಸ್.ಎ. ಅಂಶಗಳನ್ನು ರದ್ದುಗೊಳಿಸಿರುವುದು ಹಾಗೂ ಅವರಿಗೆ ಜಾಮೀನು ನೀಡಿರುವುದು ಕೂಡ ಇದನ್ನು ಚಿತ್ರವತ್ತಾಗಿ ಎತ್ತಿ ತೋರಿದೆ.

ಒಟ್ಟಾರೆಯಾಗಿ, ಇದು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ಒಂದು ತೀವ್ರ ದಾಳಿಯ ರೂಪುರೇಷೆಯನ್ನು ಕೊಟ್ಟಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ದಿಲ್ಲಿ ಪೋಲೀಸ್ ತನ್ನ ರಾಜಕೀಯ ಯಜಮಾನರುಗಳ ಕಥನಗಳನ್ನು ಪುಷ್ಟೀಕರಿಸಲು ಕೈಗೊಂಡಿರುವ ಹೊಲಸು ಕ್ರಿಯೆ ಇದು ಎಂದು ಖಂಡಿಸಿದೆ, ಈ ರೀತಿಯಲ್ಲಿ ಶಾಂತಿಯುತ ರಾಜಕೀಯ ಪ್ರತಿಭಟನೆಗಳನ್ನು ಕ್ರಿಮಿನಲ್ ಅಪರಾಧ ಎಂದು ಬಿಂಬಿಸುವ ಕೃತ್ಯಗಳನ್ನು ಸರಕಾರ ನಿಲ್ಲಿಸಬೇಕು ಎಂದು ಒತ್ತಾಯಿಸಿದೆ. ಸುಳ್ಳು ಕೇಸುಗಳನ್ನು ಹಾಕಿ ಜೈಲಿಗೆ ಹಾಕಿರುವ ರಾಜಕೀಯ ಕೈದಿಗಳನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು ಎಂದೂ ಸಿಪಿಐ(ಎಂ) ಬಲವಾಗಿ ಆಗ್ರಹಿಸಿದೆ. ಪ್ರಜಾಪ್ರಭುತ್ವದ ಮೇಲೆ ಈ ಹೇಡಿತನದ ದಾಳಿಯನ್ನು ಖಂಡಿಸಬೇಕು ಎಂದು ದೇಶಾದ್ಯಂತ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ ಮತ್ತು ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಮೌಲ್ಯಗಳಿಗೆ ಬದ್ಧವಾಗಿರುವ ಎಲ್ಲ ಪಕ್ಷಗಳು, ಸಂಘಟನೆಗಳು ಮತ್ತು ವ್ಯಕ್ತಿಗಳಿಗೆ ಮನವಿ ಮಾಡಿಕೊಂಡಿದೆ.

ಯುಎಪಿಎ ಅಡಿಯಲ್ಲಿ ಬಂಧನಗಳು–ಸಿಪಿಐ(ಎಂ) ಖಂಡನೆ

"ಪಕ್ಷಪಾತಪೂರ್ಣ ಪೋಲೀಸ್ ತನಿಖೆಯ ಬದಲು ಸ್ವತಂತ್ರ ನ್ಯಾಯಾಂಗ ತನಿಖೆ ಅಗತ್ಯವಾಗಿದೆ"

ಉಮರ್ ಖಾಲಿದ್ ಅವರನ್ನು ಕರಾಳ ಯು.ಎ.ಪಿ.ಎ. ಅಡಿಯಲ್ಲಿ ಬಂಧಿಸಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಇದಕ್ಕೆ ಮೊದಲು ಯು.ಎ.ಪಿ.ಎ. ಅಡಿಯಲ್ಲಿ ನತಾಶಾ ನರ್ವಾಲ್, ದೇವಾಂಗನಾ ಕಲಿತಾ(ಜೆ.ಎನ್.ಯು.), ಇಷ್ರತ್ ಜಹಾನ್, ಕಾಂಗ್ರೆಸ್ ಪಕ್ಷದ ಒಬ್ಬ ಮಾಜಿ ಕೌನ್ಸಿಲರ್, ಜಾಮಿಯ ವಿದ್ಯಾರ್ಥಿಗಳು ಮೀರನ್ ಹೈದರ್, ಆರ್.ಜೆ.ಡಿ. ಯುವ ಮುಖಂಡರು, ಆಸಿಫ್ ತನ್ಹಾ, ಸಫೂರಾ ಝುಗರ್ ಮತ್ತು ಗುಲ್ಫಿಷಾ ಫಾತಿಮ ಹಾಗೂ ಶಿಫ್ರ್–ಉಲ್–ರಹ್ಮಾನ್ ಇವರುಗಳನ್ನು ಕೂಡ ಬಂಧಿಸಲಾಗಿತ್ತು.

ಕೇಂದ್ರ ಸರಕಾರ ದ್ವೇಷಭಾಷಣಗಳನ್ನು ಮಾಡಿ ಹಿಂಸಾಚಾರವನ್ನು ಪ್ರಚೋದಿಸಿದ ಉನ್ನತ ಬಿಜೆಪಿ ಮುಖಂಡರನ್ನು ರಕ್ಷಿಸುತ್ತಿದ್ದರೆ, ಸಿಎಎ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಯುವಜನಗಳ ಮೇಲೆ ಗುರಿಯಿಡಲಾಗುತ್ತಿದೆ, ಸಿಎಎ–ವಿರೋಧಿ ಪ್ರತಿಭಟನೆಗಳು ಮತ್ತು ಕೋಮು ಹಿಂಸಾಚಾರವನ್ನು ತಳಕು ಹಾಕುವ ದೇಶದ ಗೃಹ ಮಂತ್ರಾಲಯ ಮತ್ತು ದಿಲ್ಲಿ ಪೋಲೀಸ್ ನ ಅತ್ಯಂತ ಕಪೋಲಕಲ್ಪಿತ ಆವೃತ್ತಿಯನ್ನು ತೋರಿಸಿ ಬಂಧಿಸಲಾಗುತ್ತಿದೆ. ಕೇಂದ್ರ ಸರಕಾರ ಸಿಎಎ–ವಿರೋಧಿ ಕಾರ್ಯಕರ್ತರನ್ನು ಸ್ಪೆಷಲ್ ಬ್ರಾಂಚ್ ಪ್ರಶ್ನೆ ಕೇಳಲೆಂದು ಕರೆಸಿಕೊಂಡು ಅವರು ಗೃಹ ಮಂತ್ರಾಲಯ ಮತ್ತು ಪೋಲೀಸ್ ಗುರಿ ಮಾಡಿರುವವರನ್ನು ಸಿಲುಕಿಸಿ ಹಾಕುವಂತೆ ಬಲಾತ್ಕರಿಸುವ ಅಭ್ಯಾಸವನ್ನು ನಿಲ್ಲಿಸಬೇಕು.

ಯುಎಪಿಎ ಯನ್ನು ಸಾಮಾನ್ಯ ನ್ಯಾಯ ಪ್ರಕ್ರಿಯೆಯನ್ನು ತಡೆಗಟ್ಟಲು ಬಳಸಲಾಗುತ್ತಿದೆ. ಸಾಮಾನ್ಯ ಪ್ರಕ್ರಿಯೆಯ ಮೂಲಕ ಅವರು ಜಾಮೀನಿನಲ್ಲಿ ಹೊರಬರಬಹುದಿತ್ತು. ಏಕೆಂದರೆ ಹಲವಾರು ಕೆಳಗಣ ನ್ಯಾಯಾಲಯಗಳು ಹೇಳಿರುವಂತೆ ಅವರ ಯಾರ ವಿರುದ್ಧವೂ ಹಿಂಸಾಚಾರವನ್ನು ಪ್ರಚೋದಿಸುವ ಎಳ್ಳಷ್ಟೂ ಸಾಕ್ಷ್ಯ ಇರುವುದಿಲ್ಲ. ಈ ಬಂಧನಗಳು ಅಸಮ್ಮತಿ ವ್ಯಕ್ತಪಡಿಸುವ ಪ್ರಜಾಪ್ರಭುತ್ವ ಹಕ್ಕಿಗೆ ಇರುವ ಸಂವಿಧಾನಿಕ ಖಾತ್ರಿಯ ಮೇಲೆ ನಡೆಸಿರುವ ಒಂದು ಆಕ್ರಮಣವಾಗಿದೆ. ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ತಾವು ಸಿಎಎ–ಎನ್.ಆರ್.ಸಿ.ಯನ್ನು ಆರಂಭದಿಂದಲೂ ಸಂಸತ್ತಿನ ಒಳಗೂ, ಮತ್ತು ಹೊರಗೂ ವಿರೋಧಿಸಿಕೊಂಡೇ ಬರುತ್ತಿದ್ದು, ದೇಶಾದ್ಯಂತ ಹಲವಾರು ಪ್ರತಿಭಟನೆಗಳಲ್ಲಿ ತನ್ನ ಬಲವಾದ ವಿರೋಧವನ್ನು ಪುನರುಚ್ಚರಿಸುತ್ತಲೇ ಇದ್ದೇವೆ ಎಂದಿರುವ ಸಿಪಿಐ(ಎಂ) ಕೇಂದ್ರ ಸರಕಾರದ ದಮನವನ್ನು ಎದುರಿಸುತ್ತಿರುವ ಎಲ್ಲರೊಂದಿಗೂ ಸೌಹಾರ್ದವನ್ನು ವ್ಯಕ್ತಪಡಿಸಿದೆ, ದಿಲ್ಲಿ ಕೋಮುವಾದಿ ಹಿಂಸಾಚಾರದ ಪ್ರಕರಣದಲ್ಲಿ ಯುಎಪಿಎ ಅಡಿಯಲ್ಲಿ ಬಂಧಿಸಿದವರನ್ನೆಲ್ಲರನ್ನೂ ಬಿಡುಗಡೆ ಮಾಡಬೇಕು ಎಂದು ಅದು ಆಗ್ರಹಿಸಿದೆ.

ಇತ್ತಿಚಿನ ಬೆಳವಣಿಗೆಗಳು, ದಿಲ್ಲಿ ಪೋಲೀ??? ಕೇಂದ್ರ ಗೃಹ ಮಂತ್ರಾಲಯದ ನಿರ್ದೇಶನದ ಅಡಿಯಲ್ಲಿ ನಡೆಸಿರುವ ಪಕ್ಷಪಾತಪೂರ್ಣ ತನಿಖೆಗೆ ವಿರುದ್ಧವಾಗಿ, ಹಿಂಸಾಚಾರದ ಕಾರಣಗಳನ್ನು ತನಿಖೆ ಮಾಡಲು ಒಬ್ಬ ನಿವೃತ್ತ ನ್ಯಾಯಾಧೀಶರ ಅಡಿಯಲ್ಲಿ ಒಂದು ಸ್ವತಂತ್ರ ತನಿಖೆ ತುರ್ತಾಗಿ ಅಗತ್ಯವಾಗಿದೆ ಎಂಬುದನ್ನು ಸೂಚಿಸುತ್ತವೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ದಿಲ್ಲಿ ಹಿಂಸಾಚಾರದ ಬಗ್ಗೆ ದಿಲ್ಲಿ ಪೋಲೀಸ್ ತನಿಖೆ ವಿಶ್ವಾಸಯೋಗ್ಯವಾಗಿಲ್ಲ

ತನಿಖಾ ಆಯೋಗಗಳ ಕಾಯ್ದೆಯ ಅಡಿಯಲ್ಲಿ ನ್ಯಾಯಾಂಗ ತನಿಖೆ ನಡೆಸಬೇಕಾಗಿದೆ- ರಾಷ್ಟ್ರಪತಿಗಳಿಗೆ ಪ್ರತಿಪಕ್ಷಗಳ ಮನವಿ

ಕಾಂಗ್ರೆಸ್ ಪಕ್ಷದ ಖಜಾಂಚಿ ಅಹ್ಮದ್ ಪಟೇಲ್, ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ. ರಾಜ, ಡಿಎಂಕೆ ಮುಖಂಡರು ಮತ್ತು ಸಂಸತ್ ಸದಸ್ಯೆ ಕನ್ನಿಮೋಳಿ ಮತ್ತು ಆರ್‌ಜೆಡಿ ಮುಖಂಡ ಮತ್ತು ಸಂಸತ್ ಸದಸ್ಯ ಮನೋಜ ಝಾ ಇದ್ದ ಪ್ರತಿಪಕ್ಷಗಳ ನಿಯೋಗವೊಂದು ಸಪ್ಟಂಬರ್ 17ರಂದು ರಾಷ್ಟ್ರಪತಿಗಳನ್ನು ಭೇಟಿ ಮಾಡಿ ಈಶಾನ್ಯ ದಿಲಿಯಲ್ಲಿ ಫೆಬ್ರುವರಿ 23ರಿಂದ 26 ರವರೆಗೆ ನಡೆದ್ದ ಗಲಭೆಗಳ ತನಿಖೆ ಕುರಿತಂತೆ ಒಂದು ವಿವರವಾದ ಮನವಿ ಪತ್ರವನ್ನು ಸಲ್ಲಿಸಿದರು.

53 ಮಂದಿ ಪ್ರಾಣ ಕಳಕೊಂಡ ಕೋಮುವಾದಿ ಹಿಂಸಾಚಾರ, ಅದಕ್ಕೆ ಕೇಂದ್ರ ಮಂತ್ರಿಯೊಬ್ಬರೂ ಸೇರಿದಂತೆ ಆಳುವ ಪಕ್ಷದ ಹಿರಿಯ ಮುಖಂಡರುಗಳ ಪ್ರಚೋದನೆಯ ಕುರಿತಂತೆ ತನಿಖೆ ನಡೆಸುವ ಬದಲು ದಿಲ್ಲಿ ಪೋಲೀಸ್ ಕೇಂದ್ರ ಗೃಹ ಮಂತ್ರಿಗಳ ನಿರ್ದೇಶನದ ಅಡಿಯಲ್ಲಿ ಶಾಂತಿಯುತವಾಗಿದ್ದ ಸಿಎಎ/ಎನ್‌ಆರ್‌ಸಿ ವಿರೋಧಿ ಪ್ರತಿಭಟನೆಗಳನ್ನು ಈ ಹಿಂಸಾಚಾರದೊಂದಿಗೆ ತಳುಕು ಹಾಕುವ ಕತೆಯನ್ನು ಕಟ್ಟುತ್ತಿದ್ದಾರೆ ಎಂಬ ಸಂಗತಿಯನ್ನು ರಾಷ್ಟ್ರಪತಿಗಳಿಗೆ ಮನವರಿಕೆ ಮಾಡಿಸಿದ್ದಾರೆ. ಈ ಕಟ್ಟು ಕತೆಯಿಂದಾಗಿ ಹಲವಾರು ಮುಗ್ಧ ಕಾರ್ಯಕರ್ತರು, ಪ್ರಖ್ಯಾತ ಚಿಂತಕರು ಮತ್ತು ರಾಜಕೀಯ ಮುಖಂಡರ ಮೇಲೆ ಗುರಿಯಿಡಲಾಗುತ್ತಿದೆ. ದಿಲ್ಲಿ ಪೋಲಿಸ್ ಕೋಮುವಾದಿ ಹಿಂಸಾಚಾರ ನಡೆಸಿದವರನ್ನು ಗುರುತಿಸಿ ಶಿಕ್ಷಿಸುವ ಕೆಲಸದಿಂದ ಗಮನ ಬೇರೆಡೆಗೆ ಸೆಳೆಯಲಿಕ್ಕಾಗಿ ಈ ರೀತಿಯಲ್ಲಿ ಒಂದು ಪಿತೂರಿಯನ್ನು ಸೃಷ್ಟಿಸುತ್ತಿದ್ದಾರೆ. ಈ ಹಿಂಸಾಚಾರದಿಂದ ಪೀಡಿತರಾದವರನ್ನು ಬಂಧಿಸಲಾಗುತ್ತಿದೆ, ಅತ್ತ ಹಿಂಸಾಚಾರ ನಡೆಸಿದವರು ರಾಜಾರೋಷವಾಗಿ ತಿರುಗಾಡಲು ಬಿಡಲಾಗುತ್ತಿದೆ ಎಂದು ಈ ಮುಖಂಡರು ರಾಷ್ಟ್ರಪತಿಗಳಿಗೆ ಹೇಳಿದ್ದಾರೆ.

ರಾಷ್ಟ್ರಪತಿಗಳು ನಿಯೋಗದ ಮಾತುಗಳನ್ನು ಆಲಿಸಿ, ಮನವಿ ಪತ್ರವನ್ನು ಸ್ವೀಕರಿಸಿದರು ಹಾಗು ಅದನ್ನು ಪರೀಕ್ಷಿಸುವದಾಗಿ ಹೇಳಿದರು.

ಕೊವಿಡ್ ಪರಿಸ್ಥಿತಿಯಿಂದಾಗಿ ಐವರಿಗಿಂತ ಹೆಚ್ಚು ಮಂದಿಗೆ ರಾಷ್ಟ್ರಪತಿ ಭವನಕ್ಕೆ ಪ್ರವೇಶವಿರಲಿಲ್ಲ. ಆದ್ದರಿಂದ ಈ ಮನವಿ ಪತ್ರದಲ್ಲಿನ ಎಲ್ಲ ಅಂಶಗಳ ಬಗ್ಗೆಯೂ ಒಮ್ಮತವಿರುವ ಹಲವು ಪ್ರತಿಪಕ್ಷಗಳ ಮುಖಂಡರು ನಿಯೋಗದಲ್ಲಿ ಹೋಗಲು ಸಾಧ್ಯವಾಗಿಲ್ಲ.

ಕಾನೂನು ಮತ್ತು ವ್ಯವಸ್ಥೆಯ ಬಗ್ಗೆ ಸಾರ್ವಜನಿಕರಲ್ಲಿ ಮತ್ತೆ ವಿಶ್ವಾಸ ಮೂಡುವಂತಾಗಲು ಒಂದು ವಿಶ್ವಾಸಾರ್ಹ ಮತ್ತು ನಿಷ್ಪಕ್ಷಪಾತ ತನಿಖೆ ಅಗತ್ಯವಾಗಿದೆ. ಈ ತನಿಖೆ ದೇಶದಲ್ಲಿ ಭಿನ್ನಮತ ಮತ್ತು ಪ್ರತಿಭಟನೆಯ ವಿರುದ್ಧ ಮೈನಡುಗಿಸುವಂತಹ ಪರಿಣಾಮ ಉಂಟು ಮಾಡಲು ಜನಗಳನ್ನು ಗಾಳ ಹಾಕಿ ಹೆಕ್ಕುವ ಕ್ರಿಯೆಯಾಗಲು ಬಿಡಲಾಗದು. ಆದ್ದರಿಂದ ತನಿಖಾ ಅಯೋಗ ಕಾಯ್ದೆಯ ಅಡಿಯಲ್ಲಿ ಹಾಲಿ ಅಥವ ನಿವೃತ್ತ ನ್ಯಾಯಾಧೀಶರುಗಳ ನೇತೃತ್ವದಲ್ಲಿ ಒಂದು ತನಿಖೆಯನ್ನು ನಡೆಸಬೇಕು ಎಂದು ಭಾರತ ಸರಕಾರಕ್ಕೆ ಕರೆ ನೀಡಬೇಕು ಮನವಿ ಪತ್ರದಲ್ಲಿ ರಾಷ್ಟ್ರಪತಿಗಳನ್ನು ಆಗ್ರಹಿಸಲಾಗಿದೆ.

ಈಶಾನ್ಯ ದಿಲ್ಲಿಯಲ್ಲಿ ಮತ್ತೆ ಕಳವಳಕಾರೀ ಘಟನೆಗಳು–ಇವನ್ನು ನಿಲ್ಲಿಸುವಂತೆ ದಿಲ್ಲಿ ಪೋಲಿಸ್ ಆಯುಕ್ತರಿಗೆ ಬೃಂದಾ ಕಾರಟ್ ಪತ್ರ

ದಿಲ್ಲಿಯ ಶಿವವಿಹಾರ್‌ನಲ್ಲಿ ಕಳವಳಕಾರೀ ಘಟನೆಗಳು ನಡೆಯುತ್ತಿವೆ, ಇವುಗಳಿಂದ ಹಾನಿಕಾರಕಪರಿಣಾಮಗಳಾಗಬಹುದು ಎಂದು ಇದರತ್ತ ದಿಲ್ಲಿ ಪೋಲೀಸ್ ಆಯುಕ್ತರಾಗಿರುವ ಎಸ್.ಎನ್.ಶ್ರೀವಾಸ್ತವ ಅವರ ಗಮನ ಸೆಳೆಯುತ್ತ ಸಪ್ಟಂಬರ್ 17ರಂದು ಒಂದು ಪತ್ರವನ್ನು ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾ ಕಾರಟ್ ಬರೆದಿದ್ದಾರೆ.

ಜೈಶ್ರೀರಾಮ್, ಹರಹರ ಮಹದೇವ್ ಎಂದು ಘೋಷಣೆ ಕೂಗುತ್ತ ಒಂದಷ್ಟು ಯುವಜನರ ಗುಂಪುಗಳು ಈ ಪ್ರದೇಶದಲ್ಲಿ ಕತ್ತಲಾದ ಮೇಲೆ ಅಲೆದಾಡುತ್ತಿದ್ದಾರೆ. ಇದು ಯಾವುದೇ ಧಾರ್ಮಿಕ ಸಮಾರಂಭಕ್ಕೆ'ಸಂಬಂಧಪಟ್ಟದ್ದಲ್ಲ. ಇದು ಅಲ್ಪಸಂಖ್ಯಾತ ಸಮುದಾಯಗಳ ಮೇಲೆ ಹಲ್ಲೆಗಳು ನಡೆದ, ಅವರ ಮನೆಗಳನ್ನು ಸುಟ್ಟು ಹಾಕಿ. ಅವರ ಕುಟುಂಬಗಳು ಪರಿಹಾರ ಶಿಬಿರಗಳಲ್ಲಿ ಆಶ್ರಯ ಪಡೆಯಬೇಕಾಗಿ ಬಂದ ಒಂದು ಪ್ರದೇಶ ಎಂಬುದನ್ನು ಪೋಲಿಸ್ ಆಯುಕ್ತರಿಗೆ ನೆನಪಿಸಿರುವ ಈ ಪತ್ರ, ಈಗಷ್ಟೇ ಈ ಕುಟುಂಬಗಳು ತಮ್ಮ ನೆಗಳಿಗೆ ಹಿಂದಿರುಗುತ್ತಿದ್ದಾರೆ, ಹಲವರ ಮನೆಗಳ ರಿಪೇರಿಗಳೂ ಆಗಿಲ್ಲ. . ಇಂತಹ ಸಂದರ್ಭದಲ್ಲಿ ಪೋಲಿಸ್ ಅನುಮತಿಯಿಲ್ಲದೆ ಈ ರೀತಿ ಮೆರವಣಿಗೆಗಳನ್ನು ನಡೆಸುವುದು ಆಕ್ಷೇಪಣಾರ್ಹ, ಇದನ್ನು ತಕ್ಷಣವೇ ನಿಲ್ಲಿಸಬೇಕಾಗಿದೆ ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ತಾನು ಅಡಿಷನಲ್ ಕಮಿಷನರ್ ಆಫ್ ಪೋಲೀಸ್, ಅಲೋಕ್ ಕುಮಾರ್ ಅವರ ಬಳಿಯೂ ಮಾತಾಡಿರುವದಾಗಿಯೂ, ಅವರಿಗೆ ಈ ಆಕ್ಷೇಪಾರ್ಹ ಮೆರವಣಿಗೆಗಳ ವೀಡಿಯೋಗಳನ್ನು ಕೂಡ ಕಳಿಸಿರುವುದಾಗಿಯೂ ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ. ಈ ಬಗ್ಗೆ ತಮಗೆ ತಿಳಿಸಿದವರು ಈ ಕುರಿತಂತೆ ನೇರವಾಗಿ ಪೋಲೀಸರ ಬಳಿ ಹೋದರೆ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಇದನ್ನು ತನಗೆ ತಳಿಸಿದ್ದಾರೆ ಎಂಬ ಸಂಗತಿಯನ್ನೂ ಬೃಂದಾಕಾರಟ್ ತಮ್ಮ ಪತ್ರದಲ್ಲಿ ಪೋಲಿಸ್ ಕಮಿಷನರ್ ಗಮನಕ್ಕೆ ತರುತ್ತ, ಈ ಪ್ರದೇಶದಲ್ಲಿ ವಿಶ್ವಾಸ ಮೂಡಿಸುವ ಕ್ರಮಗಳು ತಕ್ಷಣದ ಅವಶ್ಯಕತೆ, ಇದಕ್ಕೆ ಮೊದಲ ಹೆಜ್ಜೆಯೆಂದರೆ ಇಂತಹ ಮೆರವಣಿಗೆಗಳು ನಿಲ್ಲುವಂತೆ ಖಾತ್ರಿ ಪಡಿಸುವುದು, ಈ ಬಗ್ಗೆ ಕ್ರಮ ಕಮಿಷನರ್ ಕ್ರಮ ಕೈಗೊಳ್ಳುವರೆಂದು ಆಶಿಸಿದ್ದಾರೆ.

ಸಂಪಾದಕೀಯ

ಪ್ರಜಾಪ್ರಭುತ್ವವಾದಿಗಳ ಬೇಟೆಗೆ ಮುಂದಾಗಿದ್ದಾರೆ ಮೋದಿ!

ನಮ್ಮ ದೇಶವು ಕರಾಳ ದಿನಗಳತ್ತ ಹೆಜ್ಜೆ ಹಾಕುತ್ತಿದೆ. ದೇಶದಲ್ಲಿ ಪ್ರಜಾಪ್ರಭುತ್ವವಾದಿ ಶಕ್ತಿಗಳ ಬೇಟೆ ಆರಂಭವಾಗಿದೆ. ನಾಗರಿಕರ ಸಂವಿಧಾನಾತ್ಮಕ ಹಕ್ಕುಗಳ ಪರವಾಗಿ ದ್ವನಿ ಎತ್ತುವವರನ್ನು ದೇಶದ್ರೋಹಿಗಳೆಂದು ಬಿಂಬಿಸಿ ಅವರ ತೇಜೋವದೆ ಮಾಡಲಾಗುತ್ತದೆ. ಸರಕಾರದ ವೈಫಲ್ಯವನ್ನು ಧೈರ್ಯವಾಗಿ ಬಯಲಿಗೆಳೆಯುವ ಜನಪರ ಚಿಂತಕರನ್ನು ಭೀಮಾ ಕೊರೆಗಾಂವ್ ಪ್ರಕರಣದಲ್ಲಿ ಮಾಡಿದಂತೆ ಅವರ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಿ ಸಾತಾಯಿಸಲಾಗುತ್ತದೆ.

ಅಂತಹ ಇತ್ತೀಚಿನ ಪ್ರಕರಣ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಇತರರನ್ನು ಸೇರಿಸಲಾದ ಪ್ರಕರಣವಾಗಿದೆ. ಕಳೆದ ಫೆಬ್ರವರಿಯಲ್ಲಿ ನಡೆದ ದೆಹಲಿ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಸಲ್ಲಿಸಿದ ಪೂರಕ ಚಾರ್ಜ್‌ಶೀಟ್‌ನಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಸ್ವರಾಜ್ ಅಭಿಯಾನದ ಮುಖಂಡ ಯೋಗೆಂದ್ರ ಯಾದವ್ ಅವರ ಹೆಸರುಗಳನ್ನು ಸೇರಿಸಿದ್ದಾರೆ. ಇವರಿಬ್ಬರ ಜತೆ ಖ್ಯಾತ ಅರ್ಥಶಾಸ್ತ್ರಜ್ಞೆ ಜಯತಿ ಘೋಷ್, ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮತ್ತು ಸಾಮಾಜಿಕ ಕಾರ್ಯಕರ್ತೆ ಅಪೂರ್ವಾನಂದ ಮತ್ತು ಸಾಕ್ಷಚಿತ್ರ ನಿರ್ಮಾಪಕ ರಾಹುಲ್ ರಾಯ್ ಅವರನ್ನು ಸಹ ಸಂಚುಕೋರರು ಎಂದು ಪೊಲೀಸರು ಹೆಸರಿಸಿದ್ದಾರೆ. ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿಸಿ ನಡೆದ ಪ್ರತಿಭಟನೆಗೆ ಇವರೆಲ್ಲರೂ ಕುಮ್ಮಕ್ಕು ನೀಡಿದ್ದಾರೆ ಎಂದು ಚಾರ್ಜ್‌ಶೀಟ್‌ನಲ್ಲಿ ಆರೋಪಿಸಲಾಗಿದೆ.

ಮೇಲಿನ ಆರೋಪ ಒಂದು ಅಪರಾಧವಲ್ಲ. ಶಿಕ್ಷಾರ್ಹ ಅಪರಾದವಂತೂ ಅಲ್ಲವೇ ಅಲ್ಲ. ಸರ್ಕಾರ ಜಾರಿಗೆ ತರಲು ಹೊರಟಿರುವ ಯಾವುದೇ ಕಾಯ್ದೆಯನ್ನು ಕುರಿತು ಶಾಸಕಾಂಗದ ಸಭೆಗಳಲ್ಲಿ ವಿವರವಾದ ಚರ್ಚೆಗೆ ಅವಕಾಶ ದೊರೆಯುವಂತಾಗಬೇಕು. ಮುಕ್ತ ಚರ್ಚೆ ಇಲ್ಲದೆ ಕಾಯ್ದೆಗಳನ್ನು ಅವಸರವಸರದಲ್ಲಿ ಸುಗ್ರೀವಾಜ್ಞೆಗಳನ್ನು ಜಾರಿಗೆ ತರುವುದು ಪ್ರಜಾಪ್ರಭುತ್ವವನ್ನು ಬಲಹೀನಗೊಳಿಸುತ್ತದೆ. ಶಾಸನ ಸಭೆಗಳಲ್ಲಿ ವಿವರವಾದ ಚರ್ಚೆ ನಡೆದು ಅದರ ಸಾಧಕ–ಬಾಧಕಗಳನ್ನು ಅರಿಯುವ ಹಕ್ಕು ಪ್ರಜೆಗಳಿಗೆ ಇದೆ. ಪ್ರಜೆಗಳಿಗೆ ವಿವರಿಸಿ ಹೇಳುವುದು ಪ್ರಜಾಪ್ರಭುತ್ವವಾದಿಗಳ ಕರ್ತವ್ಯವೂ ಆಗಿದೆ. ಸರ್ಕಾರ ಜಾರಿಗೆ ತರಲು ಹೊರಟಿರುವ ಮಸೂದೆಗಳು ಜನಹಿತಕ್ಕೆ ವಿರುದ್ಧವಾಗಿದ್ದರೆ ಅಂತಹ ಮಸೂದೆಗಳ ವಿರುದ್ಧ ಪ್ರಜಾಸತ್ತಾತ್ಮಕವಾಗಿ ಹೊರಾಡುವ ಹಕ್ಕು ಪ್ರಜೆಗಳಿಗಿದೆ ಇದೆ. ಅಂತಹ ಒಂದು ಸನ್ನಿವೇಶದಲ್ಲಿ ದೆಹಲಿ ಜನತೆ ಹೋರಾಟಕ್ಕೆ ಮುಂದಾದಾಗ ಅವರಿಗೆ ವಿಷಯದ ಬಗ್ಗೆ ಸರಿಯಾದ ವಿವರಣೆ ನೀಡುವುದು ದೇಶಪ್ರೇಮದ ಕಾಳಜಿಯಾಗಿರುತ್ತದೆ.

ಆದರೆ ದೆಹಲಿ ಪೊಲೀಸರ ನಿಷ್ಠೆ ದೆಹಲಿ ರಾಜ್ಯದ ಜನತೆಗಿಲ್ಲ. ಅವರು ಕೇಂದ್ರ ಗೃಹ ಮಂತ್ರಿಗಳ ನಿರ್ದೇಶನಕ್ಕೆ ಅನುಗುಣವಾಗಿ ಮಾತ್ರ ನಡೆಯುವರು. ಕೇಂದ್ರದ ಸೂಚನೆಗೆ ಅನುಗುಣವಾಗಿ ಅವರು ಹೋರಾಟಗಾರರನ್ನು ಸದೆಬಡಿಯುತ್ತಾರೆ. ಅವರ ಸೂಚನೆಯ ಮೇರೆಗೆ ಚಾರ್ಜ್‌ಶೀಟ್‌ನಲ್ಲಿ ತಮಗೆ ಬೇಕಾದಾಗ, ಸೇಡಿನ ಕ್ರಮವಾಗಿ ಹೆಸರುಗಳನ್ನು ಸೇರಿಸಿ ಅವರನ್ನು ದೈಹಿಕ ಹಾಗೂ ಮಾನಸಿಕ ಹಿಂಸೆಗೆ ಒಳಪಡಿಸುತ್ತಾರೆ.

ದೆಹಲಿ ಗಲಭೆ ವಿಷಯದಲ್ಲಿ ಸೀತಾರಾಮ್ ಮತ್ತಿತರರು ಗಲಭೆಗೆ ಪ್ರಚೋದನೆ ನೀಡಿರಲು ಸಾಧ್ಯವಿಲ್ಲ. ಶಾಂತಯುತವಾಗಿ ನಡೆದ ಸಭೆಯಲ್ಲಿ ಅವರು ಯಥಾಪ್ರಕಾರ ಮಾತನಾಡಿರುತ್ತಾರೆ. ಅವರ ಮಾತುಗಳು ಪರಿಣಾಮಕಾರಿಯಾಗಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಆದ್ದರಿಂದ ದೇಶದ ಉದ್ದಗಲಕ್ಕೂ ಅವರನ್ನು ಕರೆದು ಅವರ ಭಾಷಣಗಳನ್ನು ದೇಶದ ಜನಕೇಳುತ್ತಾರೆ. ಅವರು ರಾಜ್ಯ ಸಭಾ ಸದಸ್ಯರಾಗಿಯೂ ಯಶಸ್ವಿಯಾಗಿ ತಮ್ಮ ಜವಾಬ್ದಾರಿ ನಿರ್ವಹಿಸಿದ್ದಾರೆ. ವಿದೇಶಗಳಲ್ಲಿಯೂ ಅವರ ಭಾಷಣಗಳನ್ನು ಕೇಳುತ್ತಾರೆ. ಇದು ಮೋದಿ ಬಾಲಬಡುಕರಿಗೆ ಸಹಿಸಲಾಗುತ್ತಿಲ್ಲ. ಬಿಜೆಪಿ, ಆರೆಸ್ಸೆಸ್‌ನ ದ್ವೇಷ ರಾಜಕಾರಣವನ್ನು ನಿರ್ಭಿಡೆಯಿಂದ, ರಾಜಿಇಲ್ಲದೆ ವಿರೋಧಿಸುತ್ತಾ ಬಂದ ಹಿರಿಮೆ ಸಿಪಿಐ(ಎಂ) ಗೆ ಸಲ್ಲುತ್ತದೆ. ಕೊವೀಡ್–19 ರ ಸಂದರ್ಭದಲ್ಲೂ ಮೋದಿ ಸರ್ಕಾರದ ವೈಫಲ್ಯವನ್ನು ಸ್ವಷ್ಟವಾಗಿ ವಿರೋಧಿಸಿ ಬಡಜನರ ಬೇಡಿಕೆಗಳನ್ನು ಸರಕಾರದ ಮುಂದಿಟ್ಟು ಸಿಪಿಐ(ಎಂ) ಕಾರ್ಯಕರ್ತರು ಹೋರಾಡಿದ್ದಾರೆ ಹಾಗೂ ಸೋಂಕಿತರಿಗೆ ನೆರವು ನೀಡಿದ್ದಾರೆ.

ಸೀತಾರಾಮ್ ಯೆಚೂರಿ ಮತ್ತು ಇತರರ ಮೇಲೆ ಸುಳ್ಳು ಆರೋಪ ಹೊರಿಸಿ ಚಾರ್ಜ್ ಶೀಟಿನಲ್ಲಿ ಅವರ ಹೆಸರನ್ನು ಸೇರಿಸಿದ ಮಾತ್ರಕ್ಕೆ ಸಿಪಿಐ(ಎಂ) ಕಾರ್ಯಕರ್ತರ ಸಮರ್ಪಣಾ ಭಾವನೆಯನ್ನು ಕುಗಿಸಲಾಗದು. ಅವರು ಹೋರಾಡುತ್ತಾರೆ, ಪಕ್ಷಕ್ಕಾಗಿ, ಪಕ್ಷದ ಮುಖಂಡರಿಗಾಗಿ. ಅವರು ಹೋರಾಡುತ್ತಾರೆ ದೇಶಕ್ಕಾಗಿ, ದೇಶದ ಜನತೆಗಾಗಿ. ಯಾವುದೇ ಬೆದರಿಕೆಗೆ ಸೊಪ್ಪು ಹಾಕದೆ ಮುನ್ನಡೆಯುತ್ತಾರೆ.

ಶಾಂತಿಯುತ ಪ್ರತಿಭಟನೆಗಳ ಅಪರಾಧೀಕರಣ ತಡೆಯಲು ಹಾಗೂ ಪಿತೂರಿಯಿಂದ ಕೂಡಿದ ಗಣ್ಯರ ಮೊಕದ್ದಮೆಗಳನ್ನು ಹಿಂಪಡೆಯಲು ಕೇಂದ್ರ ಸರಕಾರಕ್ಕೆ ಆಗ್ರಹ–ಪ್ರತಿಭಟನೆಗೆ ಸಿಪಿಐಎಂ ಕರೆ

ಸಂವಿಧಾನದ ಮತ್ತು ಪ್ರಜಾಪ್ರಭುತ್ವದ ಸಂರಕ್ಷಣೆಗಾಗಿ ನಡೆದಿರುವ ಹೋರಾಟದ ಮುಂಚೂಣಿಯಲ್ಲಿರುವ ದೇಶದ ಗಣ್ಯ ನಾಯಕರ ಮೇಲೆ ಮೊಕದ್ದಮೆ ದಾಖಲಿಸಿ, ಜೈಲಿಗೆ ಕಳುಹಿಸುವ ಮತ್ತು ಆ ಮೂಲಕ ಪ್ರಜಾಪ್ರಭುತ್ವ ಚಳುವಳಿಯನ್ನು ಹಣಿಯುವ ದುಷ್ಕೃತ್ಯವನ್ನು ಕೇಂದ್ರ ಸರಕಾರ ಮುಂದುವರೆಸಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ)ದ ರಾಜ್ಯ ಸಮಿತಿಯು ಬಲವಾಗಿ ಖಂಡಿಸುತ್ತದೆ.

ಸಿಎಎ ಹಾಗೂ ಎನ್‌ಆರ್‌ಸಿ ವಿರುದ್ಧದ ಹೋರಾಟದ ಮೂಲಕ ಕಳೆದ ಫೆಬ್ರವರಿಯಲ್ಲಿ, ಈಶಾನ್ಯ ದೆಹಲಿಯಲ್ಲಿ ನಡೆದ ಭೀಷಣ ಕೋಮು ಗಲಬೆಗೆ ಪ್ರಚೋದನೆಯನ್ನು ನೀಡಿದ್ದಾರೆಂಬ ಹುಸಿ ಆರೋಪವನ್ನು ಹೊಸೆದು, ಕೇಂದ್ರ ಸರಕಾರದ ಗೃಹ ಮಂತ್ರಾಲಯದಡಿ ಕಾರ್ಯ ನಿರ್ವಹಿಸುವ ದೆಹಲಿ ಪೋಲೀಸರು, ದೇಶದ ಅಗ್ರಗಣ್ಯ ನಾಯಕರುಗಳು ಹಾಗೂ ಗೌರಾವಾನ್ವಿತರು, ಸಾಂಸ್ಕೃತಿಕ ವಲಯದ ವರಿಷ್ಠರುಗಳಾದ ಸಿಪಿಐಎಂ ಪಕ್ಷದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಗಳಾದ ಕಾಂ. ಸೀತಾರಾಂ ಎಚೂರಿ, ಪ್ರಖ್ಯಾತ ಆರ್ಥಿಕ ತಜ್ಞರಾದ ಡಾ.ಜಯತಿ ಘೋಷ್, ದೆಹಲಿ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀ ಅಪೂರ್ವಾನಂದ, ಸ್ವರಾಜ್ ಅಭಿಯಾನದ ಮುಖಂಡರಾದ ಶ್ರೀ ಯೋಗೇಂದ್ರ ಯಾದವ್, ಡಾಕ್ಯುಮೆಂಟರಿ ಚಲನಚಿತ್ರಕಾರರಾದ ಶ್ರೀ ರಾಹುಲ್ ರಾಯ್ ಮತ್ತಿತರೆ ಪ್ರಮುಖರ ಹೆಸರುಗಳನ್ನು ಒಂದು ಷಡ್ಯಂತ್ರದ ಭಾಗವಾಗಿ, ಸೇರ್ಪಡೆ ಮಾಡಿ, ಮೊಕದ್ದಮೆ ದಾಖಲಿಸಿ, ಆ ಮೂಲಕ ಈ ಗಣ್ಯರ ತೇಜೋವಧೆ ಮಾಡಲು ಯತ್ನಿಸಿರುವುದನ್ನು ಸಿಪಿಐಎಂ ಬಲವಾಗಿ ಪ್ರತಿರೋಧಿಸುತ್ತದೆ. ಇದು ಪ್ರಜಾಪ್ರಭುತ್ವವಾದಿಗಳ ವಿರುದ್ಧದ ತೀವ್ರ ಹಗೆ ಸಾಧನೆಯ ದುಷ್ಕೃತ್ಯ ಹಾಗೂ ಕೋಮುಗಲಭೆಗೆ ಕಾರಣರಾದ ನಿಜವಾದ ಅಪರಾಧಿಗಳನ್ನು ರಕ್ಷಿಸುವ ನೀಚತನವಾಗಿದೆ.

ಈ ಹಿಂದೆಯೂ, ಶ್ರೀ ಮೋದಿಯವರ ಕೇಂದ್ರ ಸರಕಾರ ತನ್ನ ಅನೇಕ ವಿರೋಧಿಗಳ ವಿರುದ್ದ ಎನ್.ಐ.ಎ, ಈ.ಡಿ, ಸಿ.ಬಿ.ಐಗಳನ್ನು ನಗ್ನವಾಗಿ ದುರ್ಬಳಕೆ ಮಾಡಲಾಗಿರುವದು ಎಲ್ಲರೂ ತಿಳಿದಿರುವ ವಿಚಾರವಾಗಿದೆ. ಅದೇ ರೀತಿ, ಎನ್‌ಎಸ್‌ಎ, ಯುಎಪಿಎ, ರಾಜದ್ರೋಹ ಕಾಯ್ದೆ ಎಂಬ ಕರಾಳ ಶಾಸನಗಳ ಅಂಶಗಳನ್ನು ಹೇರಿ, ಸಂವಿಧಾನದಲ್ಲಿ ಹೇಳಿರುವುದಕ್ಕೆ ವಿರುದ್ಧವಾಗಿ ಅವುಗಳನ್ನು ಬಳಸುವ, ಅಧಿಕಾರಗಳ ಇಂತಹ ನಗ್ನ ದುರುಪಯೋಗಗಳನ್ನು ಕಂಡಿದ್ದೇವೆ. ಇಂತಹ ಸಂವಿಧಾನ ವಿರೋಧಿಯಾದ ನಗ್ನ ಉಲ್ಲಂಘನೆಗಳ ವಿರುದ್ದ ಬಲವಾಗಿ ಪ್ರತಿರೋಧಿಸಿದ ಗಣ್ಯರಿಗೆ ಕಿರುಕುಳ ನೀಡಲು, ಜೈಲಿಗಟ್ಟಲು ದುರ್ಬಳಕೆ ಮಾಡಿರುವುದು ಗುಟ್ಟಾದ ವಿಚಾರವೇನಲ್ಲಾ.

ಭೀಮಾ ಕೊರೆಗಾಂವ್ ಪ್ರಕರಣದಲ್ಲಿ ಎನ್.ಐ.ಎ ಮನಬಂದಂತೆ ವರ್ತಿಸುತ್ತಿರುವುದು, ಅದರ ವ್ಯಾಪ್ತಿಯನ್ನು ವಿಸ್ತರಿಸುತ್ತಿರುವುದನ್ನು ನಾಗರೀಕರು ಗಮನಿಸಿದ್ದಾರೆ. ಈ ಎಲ್ಲವುಗಳು, ಕೇಂದ್ರ ಸರಕಾರ ಹಿಡಿದಿರುವ ಸರ್ವಾಧಿಕಾರಿ ದಾರಿಯನ್ನು ಮತ್ತು ಅದು ಅವನತಿಯೆಡೆ ಸಾಗುತ್ತಿರುವುದನ್ನು ಎತ್ತಿ ತೋರುತ್ತಿದೆ. ಈ ಎಲ್ಲ ದುಷ್ಕೃತ್ಯಗಳ ಮುಂದುವರಿಕೆಯ ಭಾಗವಾಗಿ ಇದೀಗ ಈ ಗಣ್ಯರ ಮೇಲೆ ಪ್ರಹಾರ ನಡೆಸಲು ಮುಂದಾಗಿದೆ.

ಒಟ್ಟಾರೆಯಾಗಿ, ಇದು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೇಲೆ ಒಂದು ತೀವ್ರ ದಾಳಿಯ ರೂಪವಾಗಿ ಕಂಡು ಬರುತ್ತಿದೆ. ಅದೇ ರೀತಿ, ತನ್ನ ರಾಜಕೀಯ ಯಜಮಾನರುಗಳನ್ನು ಸಂತೃಪ್ತಿ ಪಡಿಸಲು ದೆಹಲಿ ಪೋಲಿಸರು ನಡೆಸಿರುವ ಅಧಿಕಾರ ದುರುಪಯೋಗದ ದುರ್ನಡೆಯಾಗಿದೆ.

ಆದ್ದರಿಂದ ಕೇಂದ್ರ ಸರಕಾರ ಈ ಕೂಡಲೇ,

1) ಶಾಂತಿಯುತ ರಾಜಕೀಯ ಪ್ರತಿಭಟನೆಗಳನ್ನು ಕ್ರಿಮಿನಲ್ ಅಪರಾಧ ಎಂದು ಬಿಂಬಿಸುವ ಸಂವಿಧಾನ ವಿರೋಧಿಯಾದ ದುಷ್ಕೃತ್ಯವನ್ನು ಕೂಡಲೇ ನಿಲ್ಲಿಸಬೇಕು. ಅಧಿಕಾರ ದುರುಪಯೋಗಗಳನ್ನು ತಡೆಯಬೇಕು. ಗಣ್ಯರ ಮೇಲೆ ಹಾಕಿರುವ ಮೊಕದ್ದಮೆಗಳನ್ನು ಕೂಡಲೇ ವಾಪಾಸು ಪಡೆಯಬೇಕು.
2) ಸುಳ್ಳು ಮೊಕದ್ದಮೆಗಳನ್ನು ಹೂಡಿ ಜೈಲಿಗೆ ಕಳುಹಿಸಲಾಗಿರುವ ಎಲ್ಲಾ ರಾಜಕೀಯ ಕೈದಿಗಳನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು.

ಎಂದು ಸಿಪಿಐಎಂ ರಾಜ್ಯ ಸಮಿತಿ ಕೇಂದ್ರ ಸರಕಾರವನ್ನು ಬಲವಾಗಿ ಒತ್ತಾಯಿಸುತ್ತದೆ.

ಅದೇ ರೀತಿ, ಕೇಂದ್ರ ಸರಕಾರದ ಸಂವಿಧಾನ ವಿರೋದಿಯಾದ ಈ ದಬ್ಬಾಳಿಕೆಗಳನ್ನು ಮತ್ತು ದುರ್ನಡೆಗಳನ್ನು ನಾಳಿನ ದಿನ ರಾಜ್ಯದ ನಾಗರೀಕರು ರಾಜ್ಯದಾದ್ಯಂತ ತೀವ್ರವಾಗಿ ಪ್ರತಿರೋಧಿಸುವಂತೆ ಸಿಪಿಐಎಂ ಕರೆ ನೀಡುತ್ತದೆ.

ಯು. ಬಸವರಾಜ

ಕಾರ್ಯದರ್ಶಿ (14–09–2020)

ವರದಿ: ವಾ.ಉ.

ಕಾಯ್ದೆ ತಿದ್ದುಪಡಿಗಳ ಮೂಲಕ ಬಡವರ ಸಂಪತ್ತು ಮತ್ತು ಅಧಿಕಾರಕ್ಕೆ ಪೆಟ್ಟು : ಶಿವಸುಂದರ್

ಕೇಂದ್ರ ಸರಕಾರವು ಕೃಷಿ ಸಂಬಂಧಿತ 3 ಕಾಯ್ದೆಗಳನ್ನು ತಿದ್ದುಪಡಿ ಮಾಡಿ 3 ಸುಗ್ರೀವಾಜ್ಞೆಗಳನ್ನು ತಂದಿದೆ. ಸಂಸತ್ತು ಸಮಾವೇಶಗೊಳ್ಳಲು ಸಾಧ್ಯವಿಲ್ಲದಿದ್ದ ಸಂದರ್ಭದಲ್ಲೇ ಇವನ್ನಲ್ಲದೆ ಇನ್ನೂ ಅನೇಕ ಸುಗ್ರೀವಾಜ್ಞೆಗಳನ್ನು ತರಲಾಗಿದೆ. ಭಾರತದ ಪ್ರಜಾತಂತ್ರವೇ ಆ ಮೂಲಕ ಆಪತ್ತಿನಲ್ಲಿದೆ. ಅಗತ್ಯ ಸರಕುಗಳ ಕಾಯ್ದೆ, ಬೀಜ ಕಾಯ್ದೆ, ವಿದ್ಯುತ್ ಖಾಸಗೀಕರಣ ಮತ್ತು ಮೇಲ್ಪಾತಿಯವರಿಗೆ 10% ಮೀಸಲಾತಿಗಳ ಮೂಲಕ ಬಡವರ ಸಂಪತ್ತು ಮತ್ತು ಅಧಿಕಾರಕ್ಕೆ ಬಲವಾದ ಪೆಟ್ಟು ಕೊಡಲಾಗುತ್ತಿದೆ ಎಂಬುದಾಗಿ ಸಾಮಾಜಿಕ ಚಿಂತಕ ಶಿವಸುಂದರ್ ಹೇಳಿದರು.

ಸಪ್ಟೆಂಬರ್ 11 ರಂದು ಬಿಸಿರೋಡಿನಲ್ಲಿ ದ.ಕ. ಜಿಲ್ಲಾ ರೈತ ಕಾರ್ಮಿಕ ದಲಿತ ಮತ್ತು ಜನಪರ ಒಕ್ಕೂಟಗಳ ಆಶ್ರಯದಲ್ಲಿ ನಡೆದ ಕೃಷಿ ಸಂಬಂಧಿ ಕಾಯ್ದೆಗಳ ತಿದ್ದುಪಡಿ ಸಂಬಂಧ ಏರ್ಪಡಿಸಿದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಭಾರತವು ಸ್ವತಂತ್ರಗೊಂಡು ಜಾರಿಗೊಳಿಸಿದ್ದ ಕೃಷಿ ಕೈಗಾರಿಕೆಗಳ ಸಂಬಂಧವಾದ ಕಾಯಿದೆಗಳು ಅತ್ಯಂತ ಜನಪರವಾಗಿರದಿದ್ದರೂ, 1991ರವರೆಗೆ ಜನರಲ್ಲಿ ಕೊಳ್ಳುವ ಶಕ್ತಿಯನ್ನು ನೀಡಬೇಕು ಎಂಬ ಆಶಯವನ್ನಾದರೂ ಹೊಂದಿದ್ದವು. ಆದರೆ 1991ರ ಬಳಿಕದ ಕೇಂದ್ರ ಸರಕಾರಗಳು ಅನುಸರಿಸುತ್ತಿರುವ ನವ ಉದಾರವಾದಿ ನೀತಿಗಳು ಜನರ ಬದಲು ಬಂಡವಾಳಶಾಹಿಗಳಿಗೆ ಅದರಲ್ಲೂ ವಿದೇಶೀ ಕಾರ್ಪರೇಟ್‌ಗಳಿಗೆ ದೇಶದ ಆರ್ಥಿಕತೆಯನ್ನು ಒಪ್ಪಿಸಲು ತವಕದಲ್ಲಿರುವಂತೆ ವರ್ತಿಸುತ್ತಿವೆ. 1955 ರಿಂದ ಚಲಾವಣೆಗೆ ಬಂದ ಅಗತ್ಯ ವಸ್ತುಗಳ ಕಾಯ್ದೆಯ ತಿದ್ದುಪಡಿಗಳಿಂದಾಗಿ ಕೃಷಿಯ ಸಂಗ್ರಹ, ಮಾರಾಟ, ಸಾಗಾಟದಲ್ಲಿ ವಿದೇಶೀ ಬಂಡವಾಳಕ್ಕೆ ಆಹ್ವಾನ ನೀಡಲಾಗುತ್ತಿದೆ. ಬೀಜ ಕಾಯ್ದೆ ತಿದ್ದುಪಡಿಗಳಿಂದಾಗಿ, ಪ್ರತಿ ಸರ್ತಿ ಬೀಜ ಕೊಳ್ಳುವಾಗಲೂ ಒಪ್ಪಂದ ಮಾಡಿಕೊಂಡ ವಿದೇಶೀ ಕಂಪೆನಿಗಳಿಂದಲೇ ಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿ ಮಾಡಿದೆ. ಕೃಷಿಗೆ ಸಾಲ ಹೆಸರಲ್ಲಿ ಕಂಪೆನಿಗಳಿಗೆ ಸಾಲ ಕೊಡಲಾಗುವುದು. ಕೇಂದ್ರದಲ್ಲಿ ಕೃಷಿ ಸಂಬಂಧಿ 3 ಸುಗ್ರೀವಾಜ್ಞೆಗಳನ್ನು ಜಾರಿಗೊಳಿಸುವ ಪೂರ್ವದಲ್ಲೇ ಕರ್ನಾಟಕ ರಾಜ್ಯ ಸರಕಾರವು ವಿದ್ಯುಚ್ಛಕ್ತಿ ಕಾಯ್ದೆಗೆ ತಿದ್ದುಪಡಿ ತಂದು ಬಡವರಿಗೆ ರೈತರಿಗೆ ರಿಯಾಯತಿ ದರದಲ್ಲಿ ಕೊಡುತ್ತಿದ್ದ ವಿದ್ಯುತ್ ಶಕ್ತಿ ಇನ್ನು ಮುಂದೆ ಅಗ್ಗವಾಗಿ ದೊರೆಯಲಾರದು.

ಕೇಂದ್ರದಲ್ಲಿ ಸದ್ಯ ಅಧಿಕಾರದಲ್ಲಿರುವ ಸರಕಾರ ರೈತ ವಿರೋಧಿ ಮಾತ್ರವೇ ಅಲ್ಲ, ಅದು ಫ್ಯಾಸಿಸ್ಟ್ ಆಳ್ವಿಕೆಯೂ ಆಗಿದೆ ಎಂದು ಶಿವಸುಂದರ್ ವಿವರಿಸಿದರು.

ಭೂಸುಧಾರಣಾ ಕಾಯಿದೆಗೆ ತಿದ್ದುಪಡಿ ಬಗ್ಗೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಎಪಿಎಂಸಿ ಕಾಯ್ದೆಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸುಗ್ರೀವಾಜ್ಞೆ ಮೂಲಕ ತಂದಿರುವ ತಿದ್ದುಪಡಿಗಳ ಬಗ್ಗೆ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಾರುತಿ ಮಾನ್ಪಡೆ ಅವರು ವಿಚಾರ ಮಂಡಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರುಸೇನೆ, ಸಿಐಟಿಯು, ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ಮತ್ತು ಕೆಲವು ದ.ಕ.ಜಿಲ್ಲಾ ಮಟ್ಟದ ಸರಕಾರೇತರ ಸಂಘಟನೆಗಳು ಒಟ್ಟಾಗಿ ದ.ಕ.ಜಿಲ್ಲಾ ಜನಪರ ಸಂಘಟನೆಗಳ ಒಕ್ಕೂಟವನ್ನು ಕಳೆದ ಆಗಸ್ಟ್ ತಿಂಗಳಲ್ಲಿ ರಚಿಸಿಕೊಂಡು ಮುಂದೆ ಈ ಒಕ್ಕೂಟದ ಆಶ್ರಯದಲ್ಲಿ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮುಂದಾಗಿವೆ. ಇದರ ಭಾಗವಾಗಿ ಈ ವಿಚಾರ ಸಂಕಿರಣವಾಗಿ ನಡೆಸಲಾಗಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಅಧ್ಯಕ್ಷ ಕೆ. ಕೃಷ್ಣಪ್ಪ ಸಾಲ್ಯಾನ್, ಕಾರ್ಯದರ್ಶಿ ಯಾದವ ಶೆಟ್ಟಿ, ಜಿಲ್ಲಾ ಸಮಿತಿ ಸದಸ್ಯ ರಾಮಣ್ಣ ವಿಟ್ಲ, ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ದ.ಕ. ಜಿಲ್ಲಾಧ್ಯಕ್ಷ ಓಸ್ವಾಲ್ಡ್ ಪ್ರಕಾಶ್ ಫೆರ್ನಾಂಡೀಸ್, ಸಿಐಟಿಯು ದ.ಕ. ಜಿಲ್ಲಾಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ, ಮುಖಂಡ ಜಾನಿ ಸಂಪಾಜೆ, ಪ್ರಧಾನ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ದಸಂಸ ರಾಜ್ಯ ಸಂಘಟನಾ ಸಂಚಾಲಕರಾದ ಎಂ.ದೇವದಾಸ್, ದ.ಕ.ಜಿಲ್ಲಾ ಅಧ್ಯಕ್ಷ ರಘು ಎಕ್ಕಾರು, ಡಿವೈಎಫ್ಐ ಬಂಟ್ವಾಳ ತಾಲೂಕು ಅಧ್ಯಕ್ಷ ಸುರೇಂದ್ರ ಕೋಟ್ಯಾನ್, ಕಾರ್ಯದರ್ಶಿ ತುಳಸೀದಾಸ್ ವಿಟ್ಲ, ಮಾನವ ಬಂಧುತ್ವ ವೇದಿಕೆಯ ರಾಜ ಚೆಂಡ್ತಿಮಾರ್, ಕರಾವಳಿ ಕರ್ನಾಟಕ ಜನಾಭಿವೃದ್ಧಿ ವೇದಿಕೆಯ ಶಬೀರ್ ಅಹಮ್ಮದ್ ವಿಚಾರ ಸಂಕಿರಣವನ್ನು ಯಶಸ್ವಿಗೊಳಿಸುವಲ್ಲಿ ದುಡಿದಿದ್ದರು.

ಡಿಎಚ್‌ಎಸ್‌ನಿಂದ ಪಡುಮಾರ್ನಾಡು ಗ್ರಾಮ ಪಂಚಾಯತಿ ಕಚೇರಿಗೆ ಮುತ್ತಿಗೆ:

ಮೂಡಬಿದ್ರಿ ತಾಲೂಕಿನ ಪಡುಮಾರ್ನಾಡು ಗ್ರಾಮದಲ್ಲಿ ಅನೇಕ ದಲಿತರಿಗೆ ಮನೆ ನಿವೇಶನ ಇರುವುದಿಲ್ಲ. ಮನೆ ನಿವೇಶನದ ಹಕ್ಕುಪತ್ರ ಇಲ್ಲದಿರುವುದರಿಂದ ಆರ್‌ಟಿಸಿ ಮನೆ ನಂಬ್ರ ಇಲ್ಲವೆಂಬ ಕಾರಣ ಹೇಳಿ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಉದ್ಯೋಗವೂ ಸಿಗುವುದಿಲ್ಲ. ಅಲ್ಲದೆ ಕೆಲವರು ಮನೆ ಹೊಂದಿದ್ದರೂ ದಾಖಲೆ ಪತ್ರಗಳು ಸರಿಯಾಗಿ ಇಲ್ಲದಿರುವುದರಿಂದ ಶೌಚಾಲಯಗಳೂ ಲಭ್ಯವಾಗಿರುವುದಿಲ್ಲ. ಇಲ್ಲಿನ ದಲಿತರು ಸಾಮಾಜಿಕವಾಗಿ ಮಾತ್ರವಲ್ಲ ಆರ್ಥಿಕವಾಗಿಯೂ ವಂಚಿತರಾಗಿದ್ದಾರೆ. ಸರಿಯಾದ ನೀರಿನ ಪೂರೈಕೆ ಪಂಚಾಯತ್ ಕಡೆಯಿಂದ ನಡೆಯುತ್ತಿಲ್ಲವಾದರೂ, ಬಿಲ್ಲು ಪಾವತಿಸುವಂತೆ ಒತ್ತಾಯ ಮಾಡಲಾಗುತ್ತಿದೆ. ಕಳೆದ 10 ವರ್ಷಗಳಿಂದ ಪಂಚಾಯತ್ ವ್ಯಾಪ್ತಿಯಲ್ಲಿ ಎಸ್‌ಸಿ-ಎಸ್‌ಟಿ ಅನುದಾನವೂ ವಿನಿಯೋಗ ಆಗುತ್ತಿಲ್ಲ.

ಪಡುಮಾರ್ನಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ದಲಿತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಪ್ಟೆಂಬರ್ 14 ರಂದು ಮೂಡಬಿದ್ರಿ ದಲಿತ ಹಕ್ಕುಗಳ ಸಮಿತಿ ನೇತೃತ್ವದಲ್ಲಿ ಪಂಚಾಯತ್ ಕಚೇರಿಗೆ ಮುತ್ತಿಗೆ ಹಾಕಿ ಧರಣಿ ನಡೆಸಲಾಯಿತು. ಪ್ರತಿಭಟನಾಕಾರರನ್ನುದ್ದೇಶಿಸಿ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ಡಿಎಚ್‌ಎಸ್ ಸಂಚಾಲಕರಾದ ಶಂಕರ ವಾಲ್ಪಾಡಿ, ಮುಖಂಡರಾದ ಕೃಷ್ಣಪ್ಪ ಕೊಣಾಜೆ, ಪ್ರಭಾಕರ, ಪ್ರಾಂತ ರೈತ ಸಂಘದ ಮೂಡಬಿದ್ರಿ ತಾಲೂಕು ಅಧ್ಯಕ್ಷ ಸುಂದರ ಶೆಟ್ಟಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಹೆಮ್ಮಾಡಿಯಲ್ಲಿ ಕಾರ್ಮಿಕರಿಗೆ ಪರಿಹಾರ ನೀಡುವಂತೆ ಆಗ್ರಹಿಸಿ ಸಿಪಿಐ(ಎಂ)ನಿಂದ ಪ್ರತಿಭಟನೆ:

ಕಾರ್ಮಿಕರು, ರೈತರು ಮತ್ತು ಕೃಷಿಕಾರ್ಮಿಕರಿಗೆ ಕೋವಿಡ್ ಸಂದರ್ಭದಲ್ಲಿ ಕೈಯಲ್ಲಿ ಹಣವಿಲ್ಲ, ಸರಿಯಾಗಿ ಕೆಲಸ ಸಿಗುತ್ತಿಲ್ಲ, ಆಹಾರ ಸಾಕಷ್ಟು ಲಭ್ಯವಿಲ್ಲ. ಈ ಕಾರಣದಿಂದ ಕೋವಿಡ್ ಪರಿಹಾರವನ್ನು ಶೀಘ್ರವೇ ವಿತರಿಸಬೇಕು ಎಂದು ಆಗ್ರಹಿಸಿ ಹಾಗೂ ಮತ್ತಿತರ ಗ್ರಾಮದ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಘಟಕದ ನೇತೃತ್ವದಲ್ಲಿ ಬೈಂದೂರು ತಾಲೂಕು ಹೆಮ್ಮಾಡಿಯಲ್ಲಿ ಗ್ರಾ.ಪಂ.ಕಚೇರಿಯ ಮುಂದೆ ಸಪ್ಟೆಂಬರ್ 15 ರಂದು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ಆದಾಯ ತೆರಿಗೆ ಪಾವತಿದಾರರಲ್ಲದ ನಾಗರಿಕರಿಗೆ ಮುಂದಿನ ಆರು ತಿಂಗಳುಗಳವರೆಗೆ ಕುಟುಂಬಕ್ಕೆ ಮಾಸಿಕ ರೂ.7500/- ಪರಿಹಾರ ನೀಡಬೇಕು, ಕುಟುಂಬದ ಪ್ರತಿ ಸದಸ್ಯನಿಗೂ ತಲಾ 10 ಕೆ.ಜಿ.ಆಹಾರ ಧಾನ್ಯ ಒದಗಿಸಬೇಕು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ 200 ದಿನ ಉದ್ಯೋಗವನ್ನು ಹೆಚ್ಚಿಸಿದ ಸಂಭಾವನೆಯೊಂದಿಗೆ ನೀಡಬೇಕು ಎಂದು ಆಗ್ರಹಿಸಿ ಸಿಪಿಐ(ಎಂ) ರಾಷ್ಟ್ರಾದ್ಯಂತ ನಡೆಸುತ್ತಿರುವ ಪ್ರತಿಭಟನಾ ಆಂದೋಲನದ ಭಾಗವಾಗಿ ಈ ಪ್ರದರ್ಶನವನ್ನು ನಡೆಸಲಾಗಿತ್ತು.

ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಸಿಪಿಐ(ಎಂ) ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡಿದರು. ಹೆಮ್ಮಾಡಿ-ಭರತಬೆಟ್ಟು ರಸ್ತೆ ದುರಸ್ತಿ ನಡೆಸಬೇಕು, ಬಹುಗ್ರಾಮ ಕುಡಿಯುವ ನೀರಿನ ಯೋಜನೆಯನ್ನು ಜಾರಿಗೊಳಿಸಬೇಕು, ಹೆದ್ದಾರಿ ಹರಿಯುವ ಚರಂಡಿ ನೀರು ತಡೆ ಕಾಮಗಾರಿ ನಡೆಸಬೇಕು ಎಂದೂ ಈ ಸಂದರ್ಭದಲ್ಲಿ ಗ್ರಾ.ಪಂಚಾಯತಿಗೆ ಮನವಿ ಸಲ್ಲಿಸಲಾಯಿತು.

ಖಾಸಗಿ ಆಸ್ಪತ್ರೆಗಳು ಬಡವರ ಪಾಲಿಗೆ ಮರಣ ಶಾಸನವಾಗಿದೆ – ಮುನೀರ್ ಕಾಟಿಪಳ್ಳ



ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಿಸದೆ ಸರಕಾರಿ ಆಸ್ಪತ್ರೆಗಳನ್ನು ಬಲಪಡಿಸದ ಸರಕಾರಗಳು ಕೊರೊನಾ ಸಂಕಷ್ಟದ ಸಮಯದಲ್ಲಿ ಬೆತ್ತಲಾಗಿದೆ. ಖಾಸಗಿ ಆಸ್ಪತ್ರೆಗಳು ಬಡವರ ಪಾಲಿಗೆ ಮರಣ ಶಾಸನವಾಗಿದೆ ಎಂದು ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ಕಾವೂರಿನಲ್ಲಿ ಡಿವೈಎಫ್ಐ ಕಾವೂರು ವಲಯ ಸಮಿತಿ ವತಿಯಿಂದ ನಡೆದ ಪ್ರತಿಭಟನೆ ಉದ್ದೇಶಿಸಿ ಮಾತನಾಡಿದರು. ಖಾಸಗಿ ಆಸ್ಪತ್ರೆಗಳು ಸರಕಾರ ನಿಗದಿಪಡಿಸಿಗಿಂತ ಹೆಚ್ಚಿನ ದರ ಲೂಟಿ ಮಾಡುತ್ತಿದ್ದಾರೆ. ದರಪಟ್ಟಿ ಡಿವೈಎಫ್ಐ ಪ್ರಾರಂಭದಿಂದಲೂ ವಿರೋಧಿಸುತ್ತಾ ಬಂದಿದೆ. ಕಳೆದ ಹತ್ತು ವರ್ಷಗಳಿಂದ ಖಾಸಗಿ ಆಸ್ಪತ್ರೆ ನಿಯಂತ್ರಿಸಿ ಸರಕಾರಿ ಆರೋಗ್ಯ ವ್ಯವಸ್ಥೆ ಬಲಪಡಿಸಿ ಎಂಬ ಹೋರಾಟ ನಡೆಸುತ್ತಾ ಬಂದಿದ್ದರೂ ರಾಜಕಾರಣಿಗಳ ಖಾಸಗಿ ಪರ ನೀತಿಗಳಿಂದಾಗಿ ಖಾಸಗಿ ಆಸ್ಪತ್ರೆಗಳ ಏಕಸ್ವಾಮ್ಯ ನಡೆಯುತ್ತಿದೆ. ಕಳೆದ ಕೆಲವು ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ 3 ಲಕ್ಷದಿಂದ 30 ಲಕ್ಷದವರೆಗೆ ಆಸ್ಪತ್ರೆ ಬಿಲ್‌ಗಳು ಹರಿದಾಡುತ್ತಿವೆ. ಇಷ್ಟು ಮೊತ್ತ ಪಾವತಿಸಿದರೂ ಜೀವ ಉಳಿಸಲಾಗದ ಖಾಸಗಿ ಆಸ್ಪತ್ರೆಗಳು ಹಣಕ್ಕಾಗಿ ಹೆಣ ಕೊಡದೆ ಇರುವ ಸಾಕಷ್ಟು ಪ್ರಕರಣಗಳು ವರದಿಯಾಗುತ್ತಿದೆ.

ಸರಕಾರಿ ಆರೋಗ್ಯ ವ್ಯವಸ್ಥೆ ಬಲಪಡಿಸಬೇಕು ಇದಕ್ಕಾಗಿ ಜಿಲ್ಲೆಯಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪಿಸಬೇಕೆಂದು ಒತ್ತಾಯಿಸಿದರು. ಜಿಲ್ಲೆಯಲ್ಲಿ ಏಳು ಖಾಸಗಿ ಮೆಡಿಕಲ್ ಕಾಲೇಜುಗಳಿವೆ ಆದರೆ ವೆನ್‌ಲಾಕ್ ಆಸ್ಪತ್ರೆಗೆ ಒಂದು ಸರಕಾರಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಸರಕಾರಕ್ಕೆ ಯಾಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು. ಜಿಲ್ಲೆಯ ಜನಪ್ರತಿನಿಧಿಗಳು ಆಧಾರ್ ತೋರಿಸಿದರೆ ಉಚಿತ ಚಿಕಿತ್ಸೆ ಎಂದು ಹೇಳುತ್ತಿದ್ದಾರೆ. ಜಿಲ್ಲೆಯ ಉಸ್ತುವಾರಿ ಸಚಿವರ ಈ ಮಾತಿಗೆ ಬೆಲೆ ಇಲ್ಲದಂತಾಗಿದೆ. ಆದರೂ ಖಾಸಗಿ ಆಸ್ಪತ್ರೆಗಳ ಲೂಟಿಯ ವಿರುದ್ಧ ಮಾತನಾಡದೆ ಜಿಲ್ಲೆಯ ಜನಪ್ರತಿನಿದಿಗಳು , ಬಿಜೆಪಿ ಖಾಸಗಿ ಲಾಬಿಗೆ ಮಣಿದಿದೆ ಎಂದು ಆರೋಪಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಪಂಜಿಮೊಗರು ವಾರ್ಡ್ ಮಾಜಿ ಕಾರ್ಪೊರೇಟರ್ ದಯಾನಂದ ಶೆಟ್ಟಿ ಮಾತನಾಡಿ ಕೊರೊನಾ ಸಂಕಷ್ಟದಲ್ಲಿ ಜನಸಾಮಾನ್ಯರ ಬದುಕು ದುಸ್ತರವಾಗುತ್ತಿದೆ. ಬಿಜೆಪಿ ಸರಕಾರ ಇದನ್ನು ನಿಭಾಯಿಸುವಲ್ಲಿ ವಿಫಲವಾಗಿದೆ. ಜಾತಿ ಧರ್ಮದ ವಿಚಾರದಲ್ಲಿ ಬೀದಿಗೆ ಇಳಿಯುವವರು ಕನಿಷ್ಠ ಹತ್ತು ನಿಮಿಷ ಖಾಸಗಿ ಆಸ್ಪತ್ರೆಗಳ ವಿರುದ್ಧ ಮಾತನಾಡುತ್ತಿಲ್ಲ. ಜನಸಾಮಾನ್ಯರ ಗೋಳು ಕೇಳುವವರಿಲ್ಲ ಎಂದು ಆಕ್ರೋಷ ವ್ಯಕ್ತಪಡಿಸಿದರು.

ಪ್ರತಿಭಟನಾ ಸಭೆಯ ನೇತೃತ್ವವನ್ನು ಡಿವೈಎಫ್ಐ ಮುಖಂಡರಾದ ಶ್ರೀನಾಥ್, ಪ್ರವೀಣ್, ಸುನಂದ, ಸೌಮ್ಯ, ಆಶಾ, ಪ್ರಮೀಳಾ, ಬಶೀರ್, ನೌಶಾದ್, ಖಲೀಲ್, ಚರಣ್ ವಹಿಸಿದ್ದರು. ಸಂತೋಷ್ ಸ್ವಾಗತಿಸಿ ನವೀನ್ ಕೊಂಚಾಡಿ ವಂದಿಸಿದರು. ■

ಉಪ್ಪುಂದ: ಮೀನುಗಾರರ ಮತ್ತು ಮೀನು ಕಾರ್ಮಿಕರ ಬೃಹತ್ ಸಮಾವೇಶ



ಅಖಿಲ ಭಾರತ ಮೀನುಗಾರರ ಮತ್ತು ಮೀನು ಕಾರ್ಮಿಕರ ಒಕ್ಕೂಟಕ್ಕೆ ಸಂಯೋಜಿಸಲ್ಪಟ್ಟ, ಉಡುಪಿ ಜಿಲ್ಲಾ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಂಘ (ಸಿಐಟಿಯು) ಇವರ ಆಶ್ರಯದಲ್ಲಿ ಬೈಂದೂರು ತಾಲೂಕು ಉಪ್ಪುಂದ ಪ್ರದೇಶದ ಮೀನುಗಾರರ ಮತ್ತು ಮೀನು ಕಾರ್ಮಿಕರ ಬೃಹತ್ ಸಮಾವೇಶವು ದಿನಾಂಕ 17 ಸೆಪ್ಟೆಂಬರ್ 2020 ರಂದು ಉಪ್ಪುಂದ ಕಾಸನಾಡಿ ದೈವಸ್ಥಾನ ವಠಾರದಲ್ಲಿ ಯಶಸ್ವಿಯಾಗಿ ಜರಗಿತು.

ಉಡುಪಿ ಜಿಲ್ಲಾ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಂಘದ (ಸಿಐಟಿಯು) ಜಿಲ್ಲಾಧ್ಯಕ್ಷ ಕೆ. ಶಂಕರ್ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ, ಮೀನುಗಾರರಿಗೆ ಹಾಗೂ ಮೀನು ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯ ಭಾಗವಾಗಿ ಕಲ್ಯಾಣ ಮಂಡಳಿಯೊಂದನ್ನು ರಚಿಸಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್ ಕೋಣಿ ಸಭೆಯನ್ನುದ್ದೇಶಿಸಿ ಮಾತನಾಡಿ, ಮೀನುಗಾರರಿಗೆ ಹಾಗೂ ಮೀನು ಕಾರ್ಮಿಕರಿಗೆ 60 ವರ್ಷ ಪ್ರಾಯದ ನಂತರ ತಿಂಗಳಿಗೆ ರೂ. 6000 ಪಿಂಚಣಿ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಮೀನುಗಾರರ ಮತ್ತು ಮೀನು ಕಾರ್ಮಿಕರ ವಿವಿಧ 12 ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ 01 ಸೆಪ್ಟೆಂಬರ್ 2020 ರಂದು ಉಡುಪಿ, ಮಣಿಪಾಲದ ಜಿಲ್ಲಾಧಿಕಾರಿ ಕಚೇರಿ ಎದುರು ಜರಗುವ ಪ್ರತಿಭಟನೆ, ಮನವಿ ಅರ್ಪಣೆ ಹೋರಾಟ ಕಾರ್ಯಕ್ರಮ ಯಶಸ್ವಿಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಉಪ್ಪುಂದ ಮೀನುಗಾರರ ಮತ್ತು ಮೀನು ಕಾರ್ಮಿಕರ ಸಂಘದ ನೂತನ ಕಾರ್ಯಕಾರಿ ಸಮಿತಿಗೆ ರಾಮ ಖಾರ್ವಿ ಉಪ್ಪುಂದ (ಅಧ್ಯಕ್ಷ), ವಿಠಲ್ ಖಾರ್ವಿ ಉಪ್ಪುಂದ (ಕಾರ್ಯದರ್ಶಿ), ಜ್ಯೋತಿ ಮೊಗವೀರ (ಕೋಶಾಧಿಕಾರಿ) ಇವರನ್ನೊಳಗೊಂಡ ಒಟ್ಟು 10 ಮಂದಿ ಸದಸ್ಯರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ(ರಿ), ಸಿಐಟಿಯು ಉಪಾಧ್ಯಕ್ಷರಾದ ಮಾಧವ ದೇವಾಡಿಗ ಉಪ್ಪುಂದ, ಶ್ರೀಧರ್ ದೇವಾಡಿಗ ಉಪ್ಪುಂದ, ವೇದಿಕೆಯಲ್ಲಿದ್ದ ಸ್ಥಳೀಯ ಮೀನುಗಾರರ ಹಿರಿಯ ಮುಖಂಡರಾದ ಬಾಬು ಖಾರ್ವಿ ಉಪ್ಪುಂದ ಸಭೆಯ ಅಧ್ಯಕ್ಷತೆ ವಹಿಸಿದ್ದರು. ನೂತನ ಕಾರ್ಯದರ್ಶಿ ವಿಠಲ್ ಖಾರ್ವಿ ವಂದಿಸಿದರು.

ವರದಿ: ವೆಂಕಟೇಶ್ ಕೋಣಿ

ಖಾಸಗಿ ಆಸ್ಪತ್ರೆ ನಿಯಂತ್ರಿಸಲು ಆಗ್ರಹಿಸಿ ಅಣಕು ಹೆಣಗಳನ್ನಿಟ್ಟು ಡಿವೈಎಫ್ಐನಿಂದ ಡಿಎಚ್ಓ ಕಚೇರಿ ಮುಂದೆ ಧರಣಿ:

ಕೊರೋನಾ ರೋಗಿಗಳನ್ನು ಚಿಕಿತ್ಸೆ ಹೆಸರಲ್ಲಿ ವಂಚಿಸಿರುವ ಖಾಸಗೀ ಆಸ್ಪತ್ರೆಗಳ ವಿರುದ್ಧ ಕ್ರಮಕೈಗೊಳ್ಳಿ, ವೆನ್‌ಲಾಕ್ ಹಾಗೂ ಸರಕಾರೀ ಆಸ್ಪತ್ರೆಗಳನ್ನು ಬಲಪಡಿಸಿ, ಹಾಗೂ ಅಲ್ಲಿನ ಅವ್ಯವಸ್ಥೆಯನ್ನು ನಿವಾರಿಸಿ, ಎಲ್ಲಾ ಕೊರೋನಾ ಸೋಂಕಿತರಿಗೂ ಸಮಾನ ಗುಣಮಟ್ಟದ ಉಚಿತ ಚಿಕಿತ್ಸೆಯನ್ನು ನೀಡಿರಿ ಹಾಗೂ ಪ್ರತಿ ಜಿಲ್ಲೆಗೂ ಒಂದು ಸರಕಾರಿ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿ ಎಂದು ರಾಜ್ಯ ಸರಕಾರವನ್ನು ಆಗ್ರಹಿಸಿ ಸಪ್ಟೆಂಬರ್ 17 ರಂದು ಮಂಗಳೂರಿನಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿ ಮುಂಭಾಗದಲ್ಲಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಕಳೆದ ಒಂದು ತಿಂಗಳಿನಿಂದಲೂ ದ.ಕ. ಜಿಲ್ಲೆಯ ಡಿವೈಎಫ್ಐನ ಘಟಕಗಳು ತಂತಮ್ಮ ಊರುಗಳಲ್ಲಿ ನಡೆಸುತ್ತಿದ್ದ ಪ್ರತಿಭಟನಾ ಪ್ರದರ್ಶನಗಳ ಮುಂದುವರಿದ ಭಾಗವಾಗಿ ಜಿಲ್ಲಾ ಕೇಂದ್ರದಲ್ಲಿ ಈ ಪ್ರತಿಭಟನಾ ಧರಣಿಯನ್ನು ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಹಮ್ಮಿಕೊಂಡಿತ್ತು.

ಅಣಕು ಹೆಣಗಳ ಮೇಲೆ ಕೆಲವು ಲಕ್ಷ ರೂಪಾಯಿಗಳ ಮೊಬಲಗನ್ನು ದಾಖಲಿಸಿ, ಹೆಣ ಬಿಡಿಸಿಕೊಳ್ಳಲು ಸದ್ರಿ ಮೊತ್ತ ಪಾವತಿ ಮಾಡಿ ಎಂದು ಖಾಸಗಿ ಆಸ್ಪತ್ರೆಗಳು ಬಲಪಡಿಸುವಂತಹ ಕೃತ್ಯಗಳನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಿದಾಗ ಸಾರ್ವಜನಿಕರು ವಿಶೇಷ ಕುತೂಹಲದಿಂದ ಪ್ರದರ್ಶನದ ವೀಕ್ಷಣೆ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದ ಡಿವೈಎಫ್ಐ ದ.ಕ.ಜಿಲ್ಲಾದ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿ, ದ.ಕ.ಜಿಲ್ಲೆಯ ಖಾಸಗಿ ಆಸ್ಪತ್ರೆಗಳು ಕೊರೋನಾ ಸೋಂಕಿತರ ಚಿಕಿತ್ಸೆಗೆ ದುಬಾರಿ ದರ ವಿಧಿಸುತ್ತಿವೆ; ಸರಕಾರದ ಆದೇಶದ ಹೊರತಾಗಿಯೂ ಖಾಸಗಿ ಆಸ್ಪತ್ರೆಗಳು ರೋಗಿಗಳ ಕಡೆಯವರಿಂದ ಅಧಿಕ ಹಣ ವಸೂಲಿ ಮಾಡುತ್ತಿವೆ; ಬಿಲ್ ಮೊತ್ತ ಪಾವತಿಸಲು ಸಾಧ್ಯವಾಗದ ರೋಗಿಗಳನ್ನು ಅಕ್ರಮ ಬಂಧನದಲ್ಲಿಡುವುದು, ಮೃತದೇಹ ಬಿಟ್ಟುಕೊಡದಿರುವುದು ಸೇರಿದಂತೆ ನಿರಂತರವಾಗಿ ನಿಯಮ ಉಲ್ಲಂಘಿಸುತ್ತಿವೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಜಿಲ್ಲಾ ಮುಖಂಡರಾದ ನಿತಿನ್ ಕುತ್ತಾರ್, ಆಶಾ ಬೋಳೂರು, ಮನೋಜ್ ವಾಮಂಜೂರು, ಅಶ್ರಫ್ ಕೆಸಿರೋಡ್, ಸುನಿಲ್ ತೇವುಲ, ನವೀನ್ ಕೊಂಚಾಡಿ ಮುಂತಾದವರು ಉಪಸ್ಥಿತರಿದ್ದರು.

ಸರ್ಕಾರಿ ಹಾಸ್ಟೇಲ್ & ವಸತಿ ಶಾಲೆಗಳಲ್ಲಿ ಹೊರ ಸಂಪನ್ಮೂಲದಿಂದ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಹೊರಗುತ್ತಿಗೆ ನೌಕರರ ಬಾಕಿ ವೇತನ 2020 ರಿಂದ ನೀಡಲು ಮತ್ತು ಸೇವಾ ಭದ್ರತೆ ಒದಗಿಸಲು ಆಗ್ರಹಿಸಿ ಪ್ರತಿಭಟನಾ ಧರಣಿ



ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೇಲ್ & ವಸತಿ ಶಾಲಾ ನೌಕರರ ಸಂಘ ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಸಂಘಟನೆಯು ಈ ಪ್ರತಿಭಟನೆ ಮೂಲಕ ಒತ್ತಾಯಿಸುವದೇನೆಂದರೇ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೊರಾರ್ಜಿ ದೇಸಾಯಿ, ರಾಣಿ ಚನ್ನಮ್ಮ.. ಅಂಬೇಡ್ಕರ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ. ಪ್ರಥಮ ದರ್ಜೆ ಸಹಾಯಕರು. ಹೊರಗುತ್ತಿಗೆ ಶಿಕ್ಷಕರು. ಅಡುಗೆಯವರು. ಅಡುಗೆ ಸಹಾಯಕರು. ಕಾವಲುಗಾರರು, ಸ್ವಚ್ಚತಾ ಸಿಬ್ಬಂದಿಗಳು ಹಾಗೂ ಗ್ರೂಪ್ ಡಿ ಸಿಬ್ಬಂದಿಗಳು ವೇತನ ಇಲ್ಲದೇ ಜೀವನ ನಡೆಸಲು ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಕೊರೊನಾ ಸಂಕಷ್ಟದಿಂದ ಏಪ್ರೀಲ್ ನಿಂದ ಇಲ್ಲಿಯವರೆಗೂ ಹಾಸ್ಟೇಲ್ ಮುಚ್ಚಲಾಗಿದ್ದು. ಆ ತಿಂಗಳುಗಳ ವೇತನವನ್ನು ನೀಡಿರುವುದಿಲ್ಲಾ ಮತ್ತು ಆರ್ಥಿಕ ಇಲಾಖೆ ಆದೇಶ ದಂತೆ ಬಾಕಿ ವಿರುವ ಲಾಕ್ ಡೌನ್ ಕಾಲದಲ್ಲಿನ ವೇತನ ನೀಡಬೇಕೆಂದು ಆದೇಶ ವಿದ್ದರು. ವೇತನ ಮಾಡಿರುವುದಿಲ್ಲಾ, ಮತ್ತು ಸರಕಾರಿ ಖಾಯಂ ನೌಕರರು ಬಂದ ಹಾಸ್ಟೇಲ್ ಗಳಲ್ಲಿ ಅನೇಕ ಸಿಬ್ಬಂದಿಗಳು ಕೆಲಸ ನಿರಾಕರಿಸಲ್ಪಟ್ಟಿದ್ದಾರೆ. ಅಂತ ಸಿಬ್ಬಂದಿಗಳಿಗೆ ಕೆಲಸ ನಿಯೋಜನೆ ಮಾಡಲು ಆಗಿರುವುದಿಲ್ಲಾ,


ಹಾಗೂ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಎಸ್.ಸಿ ಎಸ್.ಟಿ ಹಾಸ್ಟೇಲ್ ಗಳಲ್ಲಿ ಕೆಲಸ ಮಾಡಿದ ಸಿಬ್ಬಂದಿಗಳಿಗೆ ಸುಮಾರು 17 ತಿಂಗಳ ವೇತನ ಮಾಡಿರುವುದಿಲ್ಲಾ ಅನೇಕ ಸಿಬ್ಬಂದಿಗಳು ದಲಿತ ಹಿಂದೂಳಿದ ವರ್ಗಕ್ಕೆ ಸೇರಿದ್ದು ವೇತನ ವಿಲ್ಲದೇ ಕುಟುಂಬ ನಿರ್ವಹಣೆ ಕಷ್ಟಕರವಾಗಿದೆ. ಕುಟುಂಬ ನಿರ್ವಹಣೆಗೆ ಸಾಲ ಮಾಡಿ ಜೀವನ ನಡೆಸುತ್ತಿದ್ದಾರೆ. ಮತ್ತು 2020 ಮಾರ್ಚ, ಏಪ್ರೀಲ್ ತಿಂಗಳಲ್ಲಿ ಕೋವಿಡ್ 19 ಸಂದರ್ಭದಲ್ಲಿ ಜೀವನದ ಹಂಗೂ ತೊರೆದು ಓಣಿಗಳಲ್ಲಿ ಹಾಲು ಹಂಚಿದ್ದವೇವೆ ಕ್ವಾರಂಟೈನ್ ಕೇಂದ್ರಗಳಲ್ಲಿ ರೋಗಿಗಳಿಗೆ ಊಟ ಬಡಿಸಿದ್ದೇವೆ, ಕೋವಿಡ್ ಕಾಲದಲ್ಲಿ ಕೆಲಸ ಮಾಡಿದರೂ ಸಂಬಳ ನೀಡಿರುವುದಿಲ್ಲ ಇದಕ್ಕೆ ಯಾರು ಹೊಣೆ? ಹಾಗಾಗಿ ವೇತನವಿಲ್ಲದೇ ಕುಟುಂಬ ನಿರ್ವಹಣೆ ಮಾಡಲು ತುಂಬಾ ಕಷ್ಟವಾಗುತ್ತಿದ್ದು ಸರಕಾರ ನಮ್ಮ ಬಾಕಿ ವೇತನವನ್ನು ಬಿಡುಗಡೆ ಮಾಡಬೇಕು ಎಲ್ಲಾ ನೌಕರರಿಗೂ ಸೇವಾಭದ್ರತೆ ನೀಡಿ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹ.

ಬೇಡಿಕೆಗಳು

1. ಮೊರಾರ್ಜಿ ದೇಸಾಯಿ, ರಾಣಿ ಚನ್ನಮ್ಮ, ಅಂಬೇಡ್ಕರ ವಸತಿ ಶಾಲೆಗಳಲ್ಲಿ ಹೊರಸಂಪನ್ಮೂಲ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಥಮ ದರ್ಜೆ ಸಹಾಯಕರು ಮತ್ತು ಶಿಕ್ಷಕರ ವೇತನ ನೀಡಬೇಕು ಹಾಗೂ ಕರ್ತವ್ಯಕ್ಕೆ ಹಾಜರಾಗಲು ಸೂಚಿಸಬೇಕು.
2. ಕೋವಿಡ್ 19 ಸಂದರ್ಭದಲ್ಲಿ ಕ್ವಾರಂಟೈನ್ ಕೇಂದ್ರಗಳಲ್ಲಿ ಕೆಲಸ ಮಾಡಿದ ಸಿಬ್ಬಂದಿಗಳಿಗೆ ವೇತನವನ್ನು ಈ ಕೂಡಲೇ ಬಿಡುಗಡೆ ಮಾಡಬೇಕು
3. ಕೋವಿಡ್ 19 ಏಪ್ರೀಲ್ ತಿಂಗಳದಿಂದ ಇಲ್ಲಿಯವರೆಗೆ ಎಲ್ಲಾ ಸಿಬ್ಬಂದಿಗಳ ಬಾಕಿ ಇರುವ ವೇತನ ಮುಂಜೂರು ಮಾಡಬೇಕು.
4. ಎಲ್ಲಾ ಹೊರಸಂಪನ್ಮೂಲ ನೌಕರರಿಗೆ ಸೇವಾ ಭದ್ರತೆ ನೀಡಬೇಕು.
5. ಬಿ.ಸಿ.ಎಂ ಇಲಾಖೆಯಲ್ಲಿ ಹೆಚ್ಚವರಿ ಸಿಬ್ಬಂದಿಗಳೆಂದು ಕೆಲಸದಿಂದ ತೆಗೆದು ಹಾಕಿದವರನ್ನು ಮರಳಿ ಕೆಲಸಕ್ಕೆ ತಗೆದುಕೊಳ್ಳಬೇಕು
6. ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ಮೆಟ್ರೀಕ್ ಪೂರ್ವ ಮತ್ತು ಮೆಟ್ರೀಕ್ ನಂತರ ಹಾಸ್ಟೇಲ್ ಸಿಬ್ಬಂದಿಗಳಿಗೆ ಲಾಕ್ ಡೌನ್ ಸಂದರ್ಭದಲ್ಲಿನ ಬಾಕಿ ವೇತನ ಪಾವತಿ ಮಾಡಬೇಕು.



ಬಳ್ಳಾರಿ ಜಿಲ್ಲಾ ಹಡಗಲಿ ತಾಲೂಕು ಹೊಳಲು ಗ್ರಾಮದಲ್ಲಿ ರೈತ ಮಹಿಳೆ ರೈತ ಪರ ಹೋರಾಟಗಾರ್ತಿ ಜ್ಯೋತಿ ಕನಕಮ್ಮನವರ್ ಮೇಲೆ ಕ್ಷುಲ್ಲಕ ಕಾರಣಕ್ಕೆ ದೌರ್ಜನ್ಯ ಮಾಡಿ ಸಾಮೂಹಿಕವಾಗಿ ಅತ್ಯಾಚಾರ ಮಾಡಲು ಪ್ರಯತ್ನ ಪಟ್ಟು ವಿಷ ಕುಡಿಸಿ ಕೊಲೆ ಮಾಡಲು ಪ್ರಯತ್ನ ಮಾಡಿದ ದುಷ್ಕರ್ಮಿಗಳ ಮೇಲೆ ಕೇಸ್ ದಾಖಲಿಸಿ ಕೂಡಲೇ ಬಂಧಿಸಬೇಕು. ಈ ಘಟನೆಯನ್ನು ಉನ್ನತ ತನಿಖೆ ನಡೆಸಿ ಶಿಕ್ಷೆಗೊಳಪಡಿಸಲು ಹಾಗೂ ದೌರ್ಜನ್ಯಕ್ಕೊಳಗಾದ ಮಹಿಳಾ ಕುಟುಂಬಕ್ಕೆ ರಕ್ಷಣೆ ನೀಡಲು ಒತ್ತಾಯಿಸಿ. 18 ಸೆಪ್ಟೆಂಬರ್ 2020 ರಂದು ದಲಿತ ಮಹಿಳಾ ಹಕ್ಕುಗಳ ಸಮಿತಿ ಮತ್ತು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಂಟಿ ಯಾಗಿ ಮಾನ್ಯಶ್ರೀ ಜಿಲ್ಲಾಧಿಕಾರಿ ಗಳಿಗೆ ಮಾನ್ಯ ತಹಸಿಲ್ದಾರ ಮೂಲಕ ಮನವಿ ಪತ್ರ ಕೊಡಲಾಯಿತು. ಇದರ ನೇತೃತ್ವವನ್ನು ಬಿ.ಮಾಳಮ್ಮ ಸಂಚಾಲಕರು, ದಲಿದ ಹಕ್ಕುಗಳ ಸಮಿತಿ, ಬಿ. ಮೈಲಮ್ಮ. ಅದ್ಯಕ್ಷರು. ದೇ. ಮ.ವಿ.ಸಂಘ ಪಿ. ಚಾಂದಬಿ ಕಾರ್ಯದರ್ಶಿ. ದೇ. ಮ.ವಿ.ಸಂಘ. ಹಾಗೂ. ಎಸ್. ಜಗನ್ನಾಥ ಸಿಐಟಿಯು ಕಾರ್ಯದರ್ಶಿ ಮತ್ತು ಜಿ. ಗೋಣಿ ಬಸಪ್ಪ ಜಿಲ್ಲಾ ಅದ್ಯಕ್ಷರು ರಾ.ರೈ.ಸಂಘ. ಬಿ. ಸಿದ್ದನಗೌಡ. ಅದ್ಯಕ್ಷರು ರಾ.ರೈ.ಸಂಘ. ಈ ಸಂದರ್ಭದಲ್ಲಿ. ದೌರ್ಜನ್ಯಕ್ಕೊಳಗಾದ ಜ್ಯೋತಿ ಕನಕಮ್ಮನವರ್ ಹಾಜರಾಗಿದ್ದರು.



ಸಂಘಟಿತ ವಲಯದಲ್ಲಿ ಕಾರ್ಮಿಕರು ಮತ್ತು ಉದ್ಯಮಿಗಳ ವಂತಿಗೆಯ ಮೂಲಕ ನಡೆಯುವ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳಿವೆ. ಇದೇ ಮಾದರಿಯಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೂ ವಂತಿಗೆ ಆಧರಿಸಿದ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳನ್ನು ಇಂದು ಸರ್ಕಾರ ಜಾರಿಗೊಳಿಸುತ್ತಿದೆ. ಇಲ್ಲಿದೆ, ನಿಜವಾದ ಸಾಮಾಜಿಕ ಭದ್ರತೆ ಸಮಸ್ಯೆ. ಅಟಲ್ ಪಿಂಚಣಿ ಯೋಜನೆ ಇದಕ್ಕೆ ಒಂದು ಅಪ್ಪಟ ನಿದರ್ಶನ.
ಹಳೆಯದಕ್ಕೂ ಮತ್ತು ಸಾಮಾಜಿಕ ಭದ್ರತೆ ಕೋಡ್ಸ್‌ನಲ್ಲಿನ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳಿಗೂ ಮೂಲಭೂತ ಭಿನ್ನತೆಯೇನಿಲ್ಲ. ವಾಸ್ತವವಾಗಿ ಕೋಡ್ಸ್‌ನಲ್ಲಿ ಸಾಮಾಜಿಕ ಭದ್ರತೆಯನ್ನು ಅತ್ಯಂತ ಸಡಿಲಗೊಳಿಸಲಾಗಿದೆ ಮತ್ತು ಸರ್ಕಾರಕ್ಕೆ ಅನುಕೂಲವಾಗುವಂತೆ, ದುಡಿಯುವ ವರ್ಗಕ್ಕೆ ಅನ್ಯಾಯವಾಗುವಂತಿದೆ. ಇಲ್ಲಿರುವ ಕಾರ್ಯಕ್ರಮಗಳಲ್ಲಿ ಬಹಳಷ್ಟು ಕಾರ್ಮಿಕರ ವಂತಿಗೆ ಪ್ರಣೀತವಾಗಿವೆ.

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

ಸಾಮಾಜಿಕ ಭದ್ರತೆ ವಂತಿಗೆ ಆಧಾರಿತವಾಗಿರಬಾರದು

ಅಭಿವೃದ್ಧಿ ಕುರಿತ ಚರ್ಚೆಗಳಲ್ಲಿ 'ಸಾಮಾಜಿಕ' ಎನ್ನುವುದನ್ನು ಆರ್ಥಿಕತೆಗೆ ವಿರುದ್ಧವಾದುದು ಎಂಬ ಭಾವನೆ ಸರ್ಕಾರದಲ್ಲಿ ಮತ್ತು ಸ್ವಲ್ಪಮಟ್ಟಿಗೆ ತಜ್ಞರ ವಲಯದಲ್ಲಿಯೂ ಇದೆ.(ಇದರ ಬಗ್ಗೆ ಹೆಚ್ಚಿನ ವಿವರಗಳಿಗೆ ಜೀನ್ ಡ್ರೀಜ್ ಅವರ 'ಸೆನ್ಸ್ ಅಂಡ್‌ಸೊಲಿಡಾರಿಟಿ', ಈ. ಎಫ್. ಶುಮಾಕರ್ ಅವರ 'ಸ್ಮಾಲ್ ಈಸ್ ಬ್ಯೂಟಿಫುಲ್' ಕೃತಿಗಳನ್ನು ನೋಡಿ). ಸಾಮಾಜಿಕ ಎಂಬುದು ಆರ್ಥಿಕತೆಯನ್ನು ಒಳಗೊಂಡಿರುತ್ತದೆ. ಈ ಮಾತು ಆರ್ಥಿಕತೆಗೆ ಅನ್ವಯ ಮಾಡಿ ಹೇಳಲು ಸಾಧ್ಯವಿಲ್ಲ. ಲಾಗಾಯ್ತಿನಿಂದ ಸಾಮಾಜಿಕ ಎನ್ನುವುದನ್ನು ಒಂದು ರೀತಿಯ ಭಾವನಾತ್ಮಕ ಸಂಗತಿಯೆಂದೂ, ಅದರ ಸೂಚಿಗಳನ್ನು ಪರಿಮಾಣಾತ್ಮಕವಾಗಿ ಮಾಪನ ಮಾಡಲು ಬರುವುದಿಲ್ಲವೆಂದೂ(ಅಂದರೆ ಅದಕ್ಕೆ ಖಚಿತತೆ ಎಂಬುದು ಇರುವುದಿಲ್ಲ ಎಂಬ ಅರ್ಥದಲ್ಲಿ), ಸಾಮಾಜಿಕ ಸಂಗತಿಗಳಿಗೆ ಆದ್ಯತೆ ನೀಡಿದರೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಕುಂಠಿತಗೊಳ್ಳುತ್ತದೆಎಂದೂ, ಅದರ ಮೇಲಿನಹೂಡಿಕೆ ಅನುತ್ಪಾದಕವೆಂದೂ ಭಾವಿಸಲಾಗಿದೆ. ಶಿಕ್ಷಣ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಪೌಷ್ಟಿಕತೆ, ಸಾಮಾಜಿಕ ಭದ್ರತೆ, ಅಂಗನವಾಡಿ ಮುಂತಾದವುಗಳನ್ನು ಸಾಮಾಜಿಕ ಸಂಗತಿಗಳೆಂದು ಗುರುತಿಸುವ ಕ್ರಮವಿದೆ. ಇತ್ತೀಚಿಗಿನವರೆಗೆ ಇವುಗಳನ್ನು ಕುರಿತ ಚರ್ಚೆಗಳಿಗೆ ಅಭಿವೃದ್ಧಿ ಸಿದ್ಧಾಂತಗಳಲ್ಲಿ, ಅಭಿವೃದ್ಧಿ ನೀತಿಗಳಲ್ಲಿ ಮತ್ತು ಅಭಿವೃದ್ಧಿ ಪಠ್ಯಗಳಲ್ಲಿ ಸ್ಥಾನವೇ ಇರಲಿಲ್ಲ. ಈ ಬಗೆಯ ಚಿಂತನೆಯಿಂದ ಮತ್ತು ಅಭಿವೃದ್ಧಿ ನಿರ್ವಹಣೆಯಿಂದ ಆರ್ಥಿಕತೆಗೆ ನಷ್ಟವುಂಟಾಗುತ್ತದೆ. ಕೊವಿಡ್ 19 ದುರಂತದ ಸಂದರ್ಭದಲ್ಲಿ ಉಂಟಾಗುರುತ್ತಿರುವ ಹಾನಿ–ಹಾಹಾಕಾರಗಳ ಹಿನ್ನೆಲೆಯಲ್ಲಿ ಸಾಮಾಜಿಕ ಅಭಿವೃದ್ಧಿಯ ಮಹತ್ವವು ನಮ್ಮ ಅರಿವಿಗೆ ಬರುತ್ತಿದೆ.

ಸಾಮಾಜಿಕ ಭದ್ರತೆ

ಸಾಮಾಜಿಕ ಭದ್ರತೆಯನ್ನು ಸರ್ಕಾರದ ಸಂಪನ್ಮೂಲದ ಮೇಲಿನ ಹೊರೆ, ಇದು ಕಮ್ಯುನಿಷ್ಟರ ಕಾರ್ಯಕ್ರಮ, ಕಾರ್ಮಿಕ ಸಂಘಟನೆಗಳ ಹುನ್ನಾರ, ಇದಕ್ಕೆ ಬಂಡವಾಳವನ್ನು ವಿನಿಯೋಗಿಸುವುದರಿಂದ ಹೂಡಿಕೆಗೆ ಹೊಡೆತ ಬೀಳುತ್ತದೆ, ದುಡಿಮೆಗಾರರು ಸೋಮಾರಿಗಳಾಗುತ್ತಾರೆ (ಅನ್ನಭಾಗ್ಯ ಯೋಜನೆಗೆ ಬಂದ ಅಸಮರ್ಥನೀಯ ಟೀಕೆ) ಎನ್ನುವ ವಾದಗಳಿವೆ. ಎಲ್ಲ ದೇಶಗಳಲ್ಲಿಯೂ ಸಾಮಾಜಿಕ ಭದ್ರತೆಯ ಬಗ್ಗೆ ಇಂತಹ ನಂಬಿಕೆಗಳಿವೆ. ಆದರೆ ಸಮಾಜದಲ್ಲಿನ ದುಡಿಯುವ ವರ್ಗದ ಹಿತಾಸಕ್ತಿಗಳನ್ನು ಸಂರಕ್ಷಿಸದಿದ್ದರೆ ಅವರ ದುಡಿಯುವ ಸಾಮರ್ಥ್ಯವು ಕುಸಿಯುತ್ತದೆ. ನಮ್ಮ ಸಮಾಜದ ಸಂದರ್ಭದಲ್ಲಿ ಒಟ್ಟು ದುಡಿಯುವ ವರ್ಗದಲ್ಲಿ ಶೇ. 10 ರಷ್ಟು ಮಾತ್ರ ಸಂಘಟಿತ ಅಧಿಕೃತ ಸಾಮಾಜಿಕ ಭದ್ರತೆಯ ರಕ್ಷಣೆ ಪಡೆಯುತ್ತಿದ್ದಾರೆ. ಉಳಿದ ಶೇ. 90 ರಷ್ಟು ದುಡಿಯುವ ವರ್ಗವು ಸಾಮಾಜಿಕ ಅಭದ್ರತೆಯಲ್ಲಿ ಬದುಕು ದೂಡುತ್ತಿದೆ.

ದುಡಿಯುವ ವರ್ಗವು ಆರೋಗ್ಯ, ವೃತ್ತಿ ತರಬೇತಿ, ಮಕ್ಕಳ ಪೋಷಣೆ–ಶಿಕ್ಷಣ ಮುಂತಾದ ಜವಾಬ್ದಾರಿಯನ್ನು ಎದುರಿಸುತ್ತಿರುತ್ತಾರೆ. ಈ ಬಗೆಯ ಗಂಡಾಂತರಗಳು ಅವರ ದುಡಿಯುವ ಸಾಮರ್ಥ್ಯ ಮೇಲೆ ದುಷ್ಪರಿಣಾಮ ಬೀರುತ್ತವೆ. ದುಡಿಮೆಗಾರರ ದುಡಿಮೆ ಸಾಮರ್ಥ್ಯಕ್ಕೆ ಧಕ್ಕೆಯುಂಟಾದರೆ ಅವರು ತಮ್ಮ ವರಮಾನವನ್ನು ಅದಕ್ಕೆ ವಿನಿಯೋಗಿಸಬೇಕಾಗುತ್ತದೆ. ಈ ದುಡಿಮೆಗಾರರ ವರಮಾನ ನಷ್ಟವನ್ನು ಸಾಮಾಜಿಕ ಭದ್ರತೆಯ ಮೂಲಕ ಭರಿಸಬೇಕು. ಇದನ್ನು ದುಡಿಯುವ ವರ್ಗದ ವರಮಾನ ಉಳಿಸುವ ಕಾರ್ಯಕ್ರಮವಾಗಿ ಪರಿಭಾವಿಸಬೇಕು. ಇದರಿಂದ ದುಡಿಮೆಗಾರರ ಕಾಣಿಕೆಯು ಆರ್ಥಿಕತೆಗೆ ದೊರೆಯುತ್ತದೆ. ನಮ್ಮ ಸಮಾಜದ ಸಂದರ್ಭದಲ್ಲಿ ನೂರಾರು ಬಗೆಯ ಅಸಂಘಟಿತ ದುಡಿಮೆಗಳಿವೆ ಮತ್ತು ಅವುಗಳನ್ನು ಅವಲಂಬಿಸಿರುವ ಲಕ್ಷಾಂತರ ದುಡಿಮೆಗಾರರಿದ್ದಾರೆ. ಸ್ವಯಂ ಉದ್ಯೋಗಿಗಳಿದ್ದಾರೆ, ಬೀದಿಬದಿ ವ್ಯಾಪಾರಿಗಳಿದ್ದಾರೆ. ತಲೆಯ ಮೇಲೆ ಹೊತ್ತು, ತಳ್ಳುವ ಗಾಡಿಯ ಸಣ್ಣ ವ್ಯಾಪಾರಸ್ಥರಿದ್ದಾರೆ. ಅಂಗಡಿ–ಮುಂಗಟ್ಟುಗಳಲ್ಲಿ, ಕಟ್ಟಡ ನಿರ್ಮಾಣದಲ್ಲಿ ದುಡಿಮೆಯಲ್ಲಿ ನಿರತರಾದ ಮಹಿಳೆ–ಪುರುಷ ಕಾರ್ಮಿಕ ವರ್ಗವಿದೆ. ದಿನಗೂಲಿ ಕೆಲಸಗಾರರಿದ್ದಾರೆ. ಕೃಷಿಯಲ್ಲಿದ್ದಾರೆ, ನಗರಗಳಲ್ಲಿದ್ದಾರೆ, ಕಾರ್ಖಾನೆಗಳಲ್ಲಿದ್ದಾರೆ, ಸೇವಾ ವಲಯಗಳಲ್ಲಿದ್ದಾರೆ. ಇವರಾರಿಗೂ ಹಳೆ ಪದ್ಧತಿಯಲ್ಲಾಗಲಿ ಅಥವಾ ಹೊಸ ಸೋಶಿಯಲ್ ಸೆಕ್ಯುರಿಟಿ ಕೋಡ್ಸ್‌ನಲ್ಲಾಗಲಿ ವ್ಯವಸ್ಥಿತವಾದ ಸಾಮಾಜಿಕ ಭದ್ರತೆಯಿಲ್ಲ.

ಇವರೆಲ್ಲರಿಗೂ ಸಾಮಾಜಿಕ ಭದ್ರತೆಯ ಹತ್ತಾರು ಕಾರ್ಯಕ್ರಮಗಳೇನೋ ಇವೆ. ಆದರೆ ಅವುಗಳ ವ್ಯಾಪ್ತಿ, ಅವುಗಳಿಗೆ ಅರ್ಹತೆ, ಅನುಕೂಲ ಪಡೆಯುವ ವಿಧಾನ ಮುಂತಾದ ಅನುಷ್ಠಾನ–ಸಂಬಂಧಿ ಸಮಸ್ಯೆಗಳಿವೆ. ಸಾಮಾಜಿಕ ಭದ್ರತೆಯನ್ನು ಸರ್ಕಾರವು ಚಾರಿಟಿ–ದಾನ/ದತ್ತಿ ಎಂದು ತಿಳಿದುಕೊಂಡಿದೆಯೇ ವಿನಾ ದುಡಿಮೆಗಾರರ ಹಕ್ಕು ಎಂದು ಭಾವಿಸಿಲ್ಲ. ಇದೊಂದು ಆರ್ಥಿಕ ಕಾರ್ಯಕ್ರಮ ಎಂದೂ ಭಾವಿಸಿಲ್ಲ. ಇದರ ಮೇಲಿನ ಬಂಡವಾಳ ಹೂಡಿಕೆಯು ಉತ್ಪಾದಕ ಹೂಡಿಕೆ ಎಂಬ ಭಾವನೆ ಸರ್ಕಾರಮಟ್ಟದಲ್ಲಿಲ್ಲ. ಸಂಘಟಿತ ವಲಯದಲ್ಲಿರುವ ಕಾರ್ಮಿಕರು ಮಾತ್ರ ಅಭಿವೃದ್ಧಿಗೆ ಕಾಣಿಕೆ ನೀಡುತ್ತಿದ್ದಾರೆ; ಅಸಂಘಟಿತ ವಲಯದವರು ಸಮಾಜ–ಸರ್ಕಾರಕ್ಕೆ ಭಾರ ಎಂಬ ಭಾವನೆ ವ್ಯಾಪಕವಾಗಿದೆ. ಆದರೆ ಅಭಿವೃದ್ಧಿಯ ಚಕ್ರ ಓಡುತ್ತಿರುವುದು ಅಸಂಘಟಿತ ವಲಯದ ದುಡಿಮೆಗಾರರಿಂದ ಎನ್ನುವ ಅರಿವು ಸರ್ಕಾರಕ್ಕಿಲ್ಲ – ಉಳ್ಳವರ ಸಮಾಜಕ್ಕೂ ಇಲ್ಲ. ಗುತ್ತಿಗೆ, ಹೊರಗುತ್ತಿಗೆ ಕಾರ್ಮಿಕ ಪದ್ಧತಿಯ ಹಿನ್ನೆಲೆಯಲ್ಲಿ ಇದನ್ನು ಅರ್ಥ ಮಾಡಿಕೊಳ್ಳಬೇಕು.

ನಮ್ಮ ಸಮಾಜದಲ್ಲಿ ಸಂಘಟಿತ ದುಡಿಮೆಗಾರರು ಮತ್ತು ಅಸಂಘಟಿತ ದುಡಿಮೆಗಾರರು ಎಂಬ ಎರಡು ವಲಯಗಳಿವೆ. ಸಂಘಟಿತ ವಲಯದ ಕಾರ್ಮಿಕರುಒಂದಲ್ಲ ಒಂದು ವಿಧದ ಸಾಮಾಜಿಕ ಭದ್ರತೆಯ ಅನುಕೂಲಗಳನ್ನು ಅಷ್ಟೋಇಷ್ಟೋ ಪಡೆಯುತ್ತಿದ್ದಾರೆ. ಆದರೆ ಅಸಂಘಟಿತ ಎಂಬ ಬೃಹತ್ ವಲಯದಲ್ಲಿ ಎಲ್ಲರನ್ನು ಒಳಗೊಳ್ಳುವಂತಹ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳಿಲ್ಲ. ಕರ್ನಾಟಕದಲ್ಲಿ ವೃದ್ಧಾಪ್ಯ ಪಿಂಚಣಿ, ವಿಧವಾ ಪಿಂಚಣಿ, ವಿಕಲ ಚೇತನ ಪಿಂಚಣಿ ಮತ್ತು ಹಿರಿಯ ನಾಗರಿಕರಿಗೆ ಸಂಧ್ಯಾಸುರಕ್ಷಾ ಪಿಂಚಣಿ ಮುಂತಾದ ಸಾಮಾಜಿಕ ಭದ್ರತೆ ಯೋಜನೆಗಳಲ್ಲಿ ಸುಮಾರು 65 ಲಕ್ಷ ಜನರು ವೇತನ ಪಡೆಯುತ್ತಿದ್ದಾರೆ.ಈ ನಾಲ್ಕು ಯೋಜನೆಗಳಿಗೆ 2018–19ರಲ್ಲಿ ನೀಡಿದ್ದ ಅನುದಾನ ರೂ. 5164.27 ಕೋಟಿ. ಆದರೆ 2091–202ರಲ್ಲಿ ನೀಡಿದ್ದ ಅನುದಾನ ರೂ. 4182.25 ಕೋಟಿ(ಕರ್ನಾಟಕ ಆರ್ಥಿಕ ಸಮೀಕ್ಷೆ 2019–2020). ಇಲ್ಲಿನ ಕಡಿತ ರೂ. 882.02 ಕೋಟಿ. ಇದು ಏನನ್ನು ಸೂಚಿಸುತ್ತದೆ ಎಂಬುದನ್ನು ವಿವರಿಸುವ ಅಗತ್ಯವಿಲ್ಲ.

ಸಂಘಟಿತ ವಲಯದಲ್ಲಿ ಕಾರ್ಮಿಕರು ಮತ್ತು ಉದ್ಯಮಿಗಳ ವಂತಿಗೆಯ ಮೂಲಕ ನಡೆಯುವ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳಿವೆ. ಇದೇ ಮಾದರಿಯಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೂ ವಂತಿಗೆ ಆಧರಿಸಿದ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳನ್ನು ಇಂದು ಸರ್ಕಾರ ಜಾರಿಗೊಳಿಸುತ್ತಿದೆ. ಇಲ್ಲಿದೆ, ನಿಜವಾದ ಸಾಮಾಜಿಕ ಭದ್ರತೆ ಸಮಸ್ಯೆ. ಅಟಲ್ ಪಿಂಚಣಿ ಯೋಜನೆ ಇದಕ್ಕೆಒಂದು ಅಪ್ಪಟ ನಿದರ್ಶನ. ಇದು ಅಸಂಘಟಿತ ವಲಯದ ದುಡಿಮೆಗಾರರಿಗೆ ಅವರವರ ವಂತಿಗೆಯ ಆಧಾರದಲ್ಲಿ 60 ವರ್ಷದ ನಂತರ ಪಿಂಚಣಿ ನೀಡಲಾಗುತ್ತದೆ. ಅಂದರೆ ದುಡಿಮೆಗಾರರ ವಂತಿಗೆಯ ಮೇಲೆ ಪಿಂಚಣಿ ನೀಡುವ ಕಾರ್ಯಕ್ರಮ ಇದಾಗಿದೆ. ಅಸಂಘಟಿತ ವಲಯದಲ್ಲಿನ ದುಡಿಮೆಗಾರರಿಗೆ ನಿಶ್ಚಿತ ಕೂಲಿ ಇರುವುದಿಲ್ಲ. ಉದ್ಯೋಗ ಭದ್ರತೆಯಿರುವುದಿಲ್ಲ. ಈ ಕಾರ್ಯಕ್ರಮದಲ್ಲಿ ಕಾರ್ಮಿಕರು ಮಾಸಿಕವಾಗಿ ವಂತಿಗೆನೀಡಬೇಕು. ಒಂದು ವೇಳೆ ಕೆಲಸ ಹೋದರೆ, ಕೆಲಸದಿಂದ ತೆಗೆದು ಹಾಕಿದರೆ, ಕುಟುಂಬದಲ್ಲಿ ತೀವ್ರ ಆರೋಗ್ಯ ಸಮಸ್ಯೆಯುಂಟಾದರೆ ವಂತಿಗೆ ಕಟ್ಟುವುದು ಸಾಧ್ಯವಾಗುವುದಿಲ್ಲ. ಲಕ್ಷಾಂತರ ವಲಸೆ ಕಾರ್ಮಿಕರು ಕೊವಿಡ್ ದುರಂತದಲ್ಲಿ ಕೆಲಸ ಕಳೆದುಕೊಂಡರು. ಇವರು ವಂತಿಗೆ ಹೇಗೆ ಕಟ್ಟುವುದು? ಹೊಟ್ಟೆಗೆ ಕೂಳಿಲ್ಲದಿದ್ದಾಗ ವಂತಿಗೆ ನೀಡುವುದು ಹೇಗೆ? ಇದಕ್ಕೆ ಸಾಕ್ಷಿಯಾಗಿ ಕೊವಿಡ್ ಪೂರ್ವದಲ್ಲಿಯೇ ನಿರುದ್ಯೋಗವು ಕಳೆದ 45 ವರ್ಷಗಳಲ್ಲಿಯೇ ಅತ್ಯಧಿಕ ಎಂದು ಸರ್ಕಾರದ ವರದಿಯೇ ಹೇಳಿತ್ತು. ಈಗ ಕೊವಿಡ್ ದುರಂತದಲ್ಲಿ ಇದು ಮತ್ತಷ್ಟು ಉಲ್ಬಣಗೊಂಡಿರಲು ಸಾಕು. ಇವರ ಸಂಖ್ಯೆ 20–30 ಕೋಟಿಯಾಗುತ್ತದೆ. ದೇಶದಲ್ಲಿನ ಒಟ್ಟು ಕಾರ್ಮಿಕರ ಅಂದಾಜು ಸಂಖ್ಯೆ 45 ರಿಂದ 50 ಕೋಟಿ. ಹೆರಿಗೆ ಭತ್ಯೆಯ ಅನುಕೂಲಗಳ ಬಗ್ಗೆ ಕಾರ್ಯಕ್ರಮವಿದೆ. ಆದರೆ ಮನೆವಾರ್ತೆ ದುಡಿಮೆಗಾರರನ್ನು ಸಕಾರವು ಗುರುತಿಸೇ ಇಲ್ಲ.

ಕೊವಿಡ್ ದುರಂತದ ಲಾಕ್‌ಡೌನ್ ಸಂದರ್ಭದಲ್ಲಿ ವಲಸೆ ಕಾರ್ಮಿಕರ ದುಃಖ–ದುಮ್ಮಾನಗಳ ಬಗ್ಗೆ, ಸಾವು–ನೋವುಗಳ ಬಗ್ಗೆ ಕೇಂದ್ರದ ಬಳಿ ಮಾಹಿತಿಯೇ ಇಲ್ಲ ಎಂದು ರಾಜಾರೋಷವಾಗಿ ಹೇಳುತ್ತಿರುವಾಗ ಇನ್ನು ಇವರ ಉದ್ಯೋಗ ಭದ್ರತೆ, ವರಮಾನ ಭರವಸೆ, ಆರೋಗ್ಯ ಸೇವೆ, ಮಕ್ಕಳ ಶಿಕ್ಷಣಗಳ ಬಗ್ಗೆ ಅದು ಯೋಚಿಸುತ್ತಿಲ್ಲ ಎಂದು ಖಾರವಾಗಿ ಹೇಳಬೇಕಾಗಿದೆ.

ಸಾಮಾಜಿಕ ಭದ್ರತೆ ಕೋಡ್ಸ್

ಹಳೆಯ ಕಾರ್ಮಿಕ ಕಾನೂನುಗಳನ್ನು ಪಲ್ಲಟಗೊಳಿಸಿ ಲೇಬರ್ ಕೋಡ್ಸ್ ಜಾರಿಗೆ ತಂದಿದೆ. ಇದರಲ್ಲಿ ಒಂದು ಸಾಮಾಜಿಕ ಭದ್ರತೆ ಕೋಡ್ಸ್. ಹಳೆಯದಕ್ಕೂ ಮತ್ತು ಕೋಡ್ಸ್‌ನಲ್ಲಿನ ಸಾಮಾಜಿಕ ಭದ್ರತೆ ಕಾರ್ಯಕ್ರಮಗಳಿಗೆ ಮೂಲಭೂತ ಭಿನ್ನತೆಯೇನಿಲ್ಲ. ವಾಸ್ತವವಾಗಿ ಕೋಡ್ಸ್‌ನಲ್ಲಿ ಸಾಮಾಜಿಕಭದ್ರತೆಯನ್ನು ಅತ್ಯಂತ ಸಡಿಲಗೊಳಿಸಲಾಗಿದೆ ಮತ್ತು ಸರ್ಕಾರಕ್ಕೆ ಅನುಕೂಲವಾಗುವಂತೆ, ದುಡಿಯುವ ವರ್ಗಕ್ಕೆ ಅನ್ಯಾಯವಾಗುವಂತಿದೆ. ನ್ಯಾಶನಲ್ ಲೇಬರ್ ಕಮೀಷನ್ 'ಎಲ್ಲರನ್ನು ಒಳಗೊಳ್ಳುವಂತೆ' ಸಾಮಾಜಿಕ ಭದ್ರತೆ ಕಾರ್ಯಕ್ರಮ ರೂಪಿಸಬೇಕು ಎಂದು ಶಿಫಾರಸ್ಸು ಮಾಡಿದೆ. ಆದರೆ ಕೋಡ್ಸ್‌ನಲ್ಲಿ ಇಂತಹ ಗುಣವಿಲ್ಲ. ಇಲ್ಲಿರುವ ಕಾರ್ಯಕ್ರಮಗಳಲ್ಲಿ ಬಹಳಷ್ಟು ಕಾರ್ಮಿಕರ ವಂತಿಗೆ ಪ್ರಣೀತವಾಗಿವೆ. ಹೇಳಿ–ಕೇಳಿ ಇದು 'ಸಂಪೂರ್ಣ ಖಾಸಗೀಕರಣದ ಕಾಲ', 'ಕಾರ್ಪೋರೇಟ್ ವಲಯದ ವೈಭವೀಕರಣದ ಕಾಲ'. 'ಬಂಡವಳಿಗರನ್ನು ಅನುಮಾನದಿಂದ ನೋಡಬಾರದು–ಅವಮಾನ ಮಾಡಬಾರದು' ಎನ್ನುವ ಕಾಲ. ವಿಶ್ವದಾದ್ಯಂತ ಹೋರಾಟದ ಮೂಲಕ ಗಳಿಸಿಕೊಂಡಿದ್ದ 'ಎಂಟು ಗಂಟೆಗಳ ದುಡಿಮೆಯ ದಿನ'ದ ಕಾನೂನನ್ನು ಧ್ವಂಸ ಮಾಡಲಾಗುತ್ತಿದೆ. ಕಾರ್ಮಿಕ ವಿರೋಧವು ಕೇಂದ್ರದ 'ನೀತಿ'ಯೇ ಆಗಿಬಿಟ್ಟಿದೆ. ಆದ್ದರಿಂದ ಸಾಮಾಜಿಕ ಭದ್ರತೆಯನ್ನು ಲೇಬರ್ ಕೋಡ್ಸ್, ಆರ್ಥಿಕ ಸ್ಥಿತಿಗತಿ, ದುಡಿಮೆಯ ಬಗ್ಗೆ ಸರ್ಕಾರದ ಧೋರಣೆಗಳ ಚೌಕಟ್ಟಿನಲ್ಲಿ ನೋಡಬೇಕು. ಇದನ್ನು ಪ್ರತ್ಯೇಕವಾಗಿ ನೋಡಲು ಬರುವುದಿಲ್ಲ.

ಮನರೇಗಾದಂತಹ ಕಾರ್ಯಕ್ರಮದ ಬಗ್ಗೆ ಇಂದಿನ ಸರ್ಕಾರಕ್ಕೆಸಹಾನುಭೂತಿಯಿಲ್ಲ. ಆದರೆ ಇಂದು ಬಡ ಕೂಲಿಕಾರರನ್ನು, ಕೊವಿಡ್ ದುರಂತದಲ್ಲಿನ ವಲಸೆ ಕಾರ್ಮಿಕರನ್ನು ಸಂರಕ್ಷಿಸಿದ್ದರೆ ಇದು ಮನರೇಗ ಕಾರ್ಯಕ್ರಮ. ಈ ಬಗೆಯ ಕಾರ್ಯಕ್ರಮವನ್ನು ನಗರ ಪ್ರದೇಶಗಳಲ್ಲಿಯೂ ಚಾಲೂ ಮಾಡುವಂತೆ ಅನೇಕ ಅಧ್ಯಯನಗಳು ಕಳೆದ ನಾಲ್ಕಾರು ವರ್ಷಗಳಿಂದ ಸಲಹೆ ಮಾಡುತ್ತಿವೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ 2018–19ರಲ್ಲಿನ ಅನುದಾನ ರೂ. 61,815 ಕೋಟಿಯಾದರೆ 2019–2020ರಲ್ಲಿನ ಬಜೆಟ್ಟಿನಲ್ಲಿ ನೀಡಿದ್ದು ಕೇವಲ ರೂ. 60,000 ಕೋಟಿ. ಪರಿಷ್ಕೃತ ಬಜೆಟ್ ಅನುದಾನ ರೂ. 71,001 ಕೋಟಿ. ಆದರೆ 2020–21ರಲ್ಲಿ ನೀಡಿರುವ ಅನುದಾನ ಕೇವಲ ರೂ. 61,500 ಕೋಟಿ(ಕೊವಿಡ್ ದುರಂತದಲ್ಲಿನ ವಿಶೇಷ ಪ್ಯಾಕೇಜಿನಲ್ಲಿ ಇದಕ್ಕೆ ಒಂದಷ್ಟು ಅನುದಾನ ಹೆಚ್ಚು ಬಿಡುಗಡೆ ಮಾಡಲಾಗಿದೆ ಎಂಬುದು ಬೇರೆ). ಸಾಮಾಜಿಕ ಭದ್ರತೆಯ ಬಗ್ಗೆ, ಬೆವರು, ಕಣ್ಣೀರು, ರಕ್ತ ಹರಿಸಿ ಹಗಲು–ರಾತ್ರಿಯೆನ್ನದೆ ದುಡಿಯುವ ವರ್ಗದ ಬಗ್ಗೆ ಸರ್ಕಾರಕ್ಕೆ ಎಷ್ಟು ಕಾಳಜಿಯಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂತಹ ದುಡಿಮೆಯ ನೀತಿಯ ಹಿನ್ನೆಲೆಯಲ್ಲಿ ಜಿಡಿಪಿಯು (ಕೊವಿಡ್ ಪೂರ್ವವನ್ನು ಗಮನದಲ್ಲಿಟ್ಟುಕೊಂಡು)ಕುಸಿಯದೆ ಇರಲು ಹೇಗೆ ಸಾಧ್ಯ? ಕೇಂದ್ರವು ಬಂಡವಳಿಗರ ಬಗ್ಗೆ, ಉದ್ದಿಮೆಗಾರರ ಬಗ್ಗೆ, ಕಾರ್ಪೋರೇಟ್ ವಲಯದ ಬಗ್ಗೆ ಕಾಳಜಿ ವಹಿಸಿದಷ್ಟು, ಮಾತನಾಡಿದಷ್ಟು ದುಡಿಯುವ ವರ್ಗದ ಬಗ್ಗೆ, ಕೂಲಿಕಾರರ ಬಗ್ಗೆ, ಬಡವರ ಬಗ್ಗೆ, ಉದ್ಯೋಗ ಭದ್ರತೆಯ ಬಗ್ಗೆ, ಕನಿಷ್ಠ ವರಮಾನ ಭರವಸೆ ಬಗ್ಗೆ ರವಷ್ಟೂ ಮಾತನಾಡುತ್ತಿಲ್ಲ. ದುಡಿಮೆಯನ್ನು ಅಸಹ್ಯ, ಮೈಲಿಗೆ ಎಂದು ಭಾವಿಸುವ ಪುರೋಹಿತಶಾಹಿ ಆಡಳಿತದಿಂದ ಸಾಮಾಜಿಕ ಭದ್ರತೆಯನ್ನು ಬಯಸುವುದು ಸಾಧ್ಯವಿಲ್ಲ. ●







ಭಾರತದ ರೈತರಿಗೆ ಮಹಾಮೋಸ ತ್ರಿವಳಿ ಮಸೂದೆಗಳ ತ್ರಿಶೂಲ ಇರಿತ

ಪ್ರಕಾಶ ಕಾರಟ್

ಮೋದಿ ಸರಕಾರ ಜೂನ್‌ತಿಂಗಳಲ್ಲಿ ಹೊರಡಿಸಿದ ಮೂರು ಸುಗ್ರೀವಾಜ್ಞೆಗಳು ಕೃಷಿಯ ಕಾರ್ಪೊರೇಟೀಕರಣವನ್ನು ಉತ್ತೇಜಿಸುವ, ಭಾರತೀಯ ಕೃಷಿಯನ್ನು ಜಾಗತಿಕ ಮಾರುಕಟ್ಟೆಯೊಂದಿಗೆ ಸಮಗ್ರೀಕರಿಸಲು ಅನುಕೂಲ ಮಾಡಿ ಕೊಡುವ ಮತ್ತು ಸರಕಾರದಿಂದ ಖರೀದಿ ಮತ್ತು ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಉದ್ದೇಶ ಹೊಂದಿರುವ ಒಂದು ತ್ರಿಶೂಲ. ಕೊವಿಡ್ ಕಾಲ ಮೋದಿ ಸರಕಾರಕ್ಕೆ ರೈತ-ವಿರೋಧಿ, ಕಾರ್ಮಿಕ-ವಿರೋಧಿ ಶಾಸನಗಳನ್ನು ತೂರಿಸಿ ಬಿಡಲು ಒಂದು ಸುವರ್ಣಾವಕಾಶ ಅಗಿಬಿಟ್ಟಿದೆ.



ಜೂನ್ ತಿಂಗಳಲ್ಲಿ ಕೃಷಿ ಮತ್ತು ಮಾರಾಟಕ್ಕೆ ಸಂಬಂಧಪಟ್ಟಂತೆ ಮೂರು ಸುಗ್ರೀವಾಜ್ಞೆಗಳನ್ನು ಹೊರಡಿಸಿದಂದಿನಿಂದ ರೈತ ಸಂಘಟನೆಗಳು ಮತ್ತು ರೈತರು ತಮ್ಮ ಹಕ್ಕುಗಳ ಮೇಲಿನ ತೀವ್ರ ದಾಳಿಗಳ ವಿರುದ್ಧ ಪ್ರತಿಭಟಿಸುತ್ತಿದ್ದಾರೆ. ಸಂಸದ್ ಅಧಿವೇಶನದ ಮುನ್ನಾದಿನ ಹರ್ಯಾಣ, ಪಂಜಾಬ್ ಮತ್ತು ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲಿ ದೊಡ್ಡ ಪ್ರತಿಭಟನೆಗಳು ನಡೆದಿವೆ.

ಈ ವಿರೋಧವನ್ನೂ ಲೆಕ್ಕಿಸದೆ ಸರಕಾರ ಈ ಮೂರು ಸುಗ್ರೀವಾಜ್ಞೆಗಳ ಜಾಗದಲ್ಲಿ ಮೂರು ಮಸೂದೆಗಳನ್ನು ಸಂಸತ್ತಿನ ಪ್ರಸಕ್ತ ಮಳೆಗಾಲದ ಅಧಿವೇಶನದಲ್ಲಿ ತಕ್ಷಣ ಅಂಗೀಕರಿಸಬೇಕೆಂದು ಮಂಡಿಸಿದೆ.

ಈ ಮೂರು ಸುಗ್ರೀವಾಜ್ಞೆಗಳು ಆಹಾರಧಾನ್ಯಗಳು ಮತ್ತು ಇತರ ಕೃಷಿ ಸರಕುಗಳನ್ನು ಆವಶ್ಯಕ ಸರಕುಗಳ ಪಟ್ಟಿಯಿಂದ ತೆಗೆಯುತ್ತವೆ, ಮತ್ತು ದಾಸ್ತಾನು ಮಿತಿಗಳನ್ನು ಏರಿಸಿವೆ; ರಾಜ್ಯಗಳ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ(ಎಪಿಎಂಸಿ)ಗಳನ್ನು ಬದಿಗೊತ್ತಿವೆ ಮತ್ತು ಕೃಷಿ ಉತ್ಪನ್ನಗಳ ಮುಕ್ತ ಅಂತರ-ರಾಜ್ಯ ಸಾಗಾಣಿಕೆಗೆ ಅವಕಾಶ ಮಾಡಿಕೊಟ್ಟಿವೆ; ಗುತ್ತಿಗೆ ಕೃಷಿಗೆ ಅನುಕೂಲ ಮಾಡಿಕೊಡುವ ಕಾನೂನು ಚೌಕಟ್ಟನ್ನು ಒದಗಿಸಿವೆ. ಒಟ್ಟಾಗಿ, ಇವು ದೊಡ್ಡ ವ್ಯಾಪಾರಿಗಳಿಂದ, ಕೃಷಿವ್ಯವಹಾರಸ್ಥರಿಂದ ಮತ್ತು ಕಾರ್ಪೊರೇಟ್‌ಗಳಿಂದ ರೈತರ ಶೋಷಣೆಯ ಸನ್ನದ್ದು.

ಈ ತ್ರಿವಳಿ ಸುಗ್ರೀವಾಜ್ಞೆಗಳು ಕೃಷಿಯ ಕಾರ್ಪೊರೇಟೀಕರಣವನ್ನು ಉತ್ತೇಜಿಸುವ, ಭಾರತೀಯ ಕೃಷಿಯನ್ನು ಜಾಗತಿಕ ಮಾರುಕಟ್ಟೆಯೊಂದಿಗೆ ಸಮಗ್ರೀಕರಿಸಲು ಅನುಕೂಲ ಮಾಡಿ ಕೊಡುವ ಮತ್ತು ಸರಕಾರದಿಂದ ಖರೀದಿ/ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಉದ್ದೇಶ ಹೊಂದಿರುವ ಒಂದು ತ್ರಿಶೂಲ. ಇದು ಆಹಾರ ಭದ್ರತೆಯ ಶಕ್ತಿಗುಂದಿಸುತ್ತುದೆ.

ಆವಶ್ಯಕ ಸರಕುಗಳ ಕಾಯ್ದೆಗೆ ತರುವ ತಿದ್ದುಪಡಿ ಧಾನ್ಯಗಳು, ಬೇಳೆ ಕಾಳುಗಳು, ಖಾದ್ಯ ತೈಲಗಳು, ಈರುಳ್ಳಿಗಳು, ಆಲೂಗಡ್ಡೆಗಳನ್ನು ಆವಶ್ಯಕ ಸರಕುಗಳ ಮತ್ತು ದಾಸ್ತಾನುಮಿತಿಗಳ ಪಟ್ಟಿಯಿಂದ ತೆಗೆಯುತ್ತದೆ. ವಿಪರೀತ ಬೆಲೆಯೇರಿಕೆ, ಯುದ್ಧ ಅಥವ ಇತರ ಅಸಾಮಾನ್ಯ ಪರಿಸ್ಥಿತಿಗಳಲ್ಲಿ ಮಾತ್ರವೇ ಮಿತಿಗಳನ್ನು ಹಾಕಬಹುದು. ಈ ತಿದ್ದುಪಡಿ ದೊಡ್ಡ ವ್ಯಾಪಾರಸ್ಥರು, ಕಾರ್ಪೊರೇಟ್‌ಗಳು, ಇವನ್ನೆಲ್ಲ ಒಟ್ಟುಗೂಡಿಸುವವರು ಮತ್ತು ಸಂಸ್ಕರಿಸುವವರು ಅನಗತ್ಯವಾಗಿ ದಾಸ್ತಾನು ಮಾಡಲು, ಕಳ್ಳ ದಾಸ್ತಾನಿಗೆ ಸೌಕರ್ಯ ಒದಗಿಸುತ್ತದಷ್ಟೇ. ಇದನ್ನು 'ವಾಯಿದಾ ವ್ಯಾಪಾರ' (ಫ್ಯೂಚರ್ಸ್ ಟ್ರೇಡಿಂಗ್) ದಲ್ಲಿ ಸಟ್ಟಾಕೋರತನಕ್ಕೆ ಬಳಸಲಾಗುತ್ತದೆ. ಇದರ ಇನ್ನೊಂದು ಮಗ್ಗುಲು ಎಂದರೆ ಬಳಕೆದಾರರ ಮಟ್ಟಿಗೆ ಈ ಸರಕುಗಳಬೆಲೆಯೇರಿಕೆ.

ಎರಡನೇ ಸುಗ್ರೀವಾಜ್ಞೆ/ ಶಾಸನ ಎಪಿಎಂಸಿಗಳನ್ನು ಬದಿಗೆ ತಳ್ಳಲಿಕ್ಕಾಗಿಯೇ ಬರುತ್ತಿದೆ. ವ್ಯಾಪಾರಿಗಳು ಮತ್ತು ಕಂಪನಿಗಳು ರೈತರಿಂದ ನೇರವಾಗಿ ಅಥವ ಎಪಿಎಂಸಿ ಯಾರ್ಡುಗಳ ಹೊರಗೆ ಖರೀದಿಸಬಹುದು. ಸಂಬಂಧಪಟ್ಟ ರಾಜ್ಯ ಸರಕಾರ ಈ ವ್ಯವಹಾರಗಳ ಮೇಲೆ ಯಾವುದೇ ತೆರಿಗೆ ಹಾಕುವಂತಿಲ್ಲ. ಗುತ್ತಿಗೆ ಬೇಸಾಯಕ್ಕೆ ಉತ್ತೇಜನೆ ನೀಡುವುದರೊಂದಿಗೆ, ಇದರ ಪರಿಣಾಮವೆಂದರೆ, ರೈತರು ತಮ್ಮ ಉತ್ಪನ್ನಗಳನ್ನು ಕೃಷಿ ವ್ಯಾಪಾರ ಕಂಪನಿಗಳು ಮತ್ತು ದೊಡ್ಡ ವ್ಯಾಪಾರಸ್ಥರು ನಿರ್ದೇಶಿಸಿದ ಬೆಲೆಗಳಲ್ಲಿಯೇ ಮಾರಬೇಕಾಗುತ್ತದೆ. ಯಾವುದನ್ನು ಸರಕಾರ "ರೈತರಿಗೆ ಸ್ವಾತಂತ್ರ್ಯ" ಎಂದು ಟಾಂಟಾಂ ಮಾಡುತ್ತಿದೆಯೋ ಅದು ವಾಸ್ತವವಾಗಿ ರೈತರು ಯಾವ ಬೆಲೆಗಳಲ್ಲಿ ಮಾರಬೇಕು ಎಂಬುದನ್ನು ನಿರ್ದೇಶಿಸಲು ದೊಡ್ಡ ವ್ಯಾಪಾರಸ್ಥರಿಗೆ-ಕಾರ್ಪೊರೇಟ್‌ಗಳಿಗೆ ಸಿಗುವ ಸ್ವಾತಂತ್ರ್ಯವಷ್ಟೇ .

ಎಪಿಎಂಸಿಗಳ ಕಾರ್ಯನಿರ್ವಹಣೆ ಮತ್ತು ಅವಶ್ಯಕ ಸರಕುಗಳ ಕಾಯ್ದೆಯಲ್ಲಿ ಸಮಸ್ಯೆಗಳಿವೆ, ನಿಜ. ಆದರೆ ಅವನ್ನು ರಾಜ್ಯಸರಕಾರಗಳ ಮೂಲಕ ನಿಭಾಯಿಸುವ ಬದಲು, ಕೃಷಿಯು ರಾಜ್ಯ ಪಟ್ಟಿಯಲ್ಲಿರುವ ವಿಷಯವಾದರೂ, ಅವನ್ನು ಬದಿಗೊತ್ತಿ, ಮೋದಿ ಸರಕಾರ ಕೃಷಿ ವ್ಯಾಪಾರಿಗಳು, ಕಾರ್ಪೊರೇಟ್‌ಗಳು ಮತ್ತು ದೊಡ್ಡ ವ್ಯಾಪಾರಸ್ಥರ ಹಿತಾಸಕ್ತಿಗಳನ್ನು ಪ್ರೋತ್ಸಾಹಿಸುವ ಸರ್ವಪ್ರಯತ್ನ ನಡೆಸಲು ಮುಂದಾಗಿದೆ. ಎಪಿಎಂಸಿ ಗಳಿಗೆ ಸಂಬಂಧಪಟ್ಟ ಮಸೂದೆ ಕೇಂದ್ರೀಯ ಶಾಸನದ ವ್ಯಾಪ್ತಿಯ ಹೊರಗಿದೆ, ಏಕೆಂದರೆ ಅದು ಕೇವಲ ರಾಜ್ಯಪಟ್ಟಿಯಲ್ಲಿರುವ ವಿಷಯ. ಆದರೂ ಸರಕಾರ ಈ ಶಾಸನವನ್ನು ಮುಂದೊತ್ತುತ್ತಿದೆ.

ಇದೀಗ ಒಂದು ಸಿದ್ಧಮಾದರಿಯಾಗಿರುವಂತೆ, ಬಿಜೆಪಿ ರಾಜ್ಯ ಸರಕಾರಗಳಿಗೆ ಎಪಿಎಂಸಿಯ ರಾಜ್ಯ ಕಾಯ್ದೆಗಳಿಗೆ ತಿದ್ದುಪಡಿ ಮಾಡಲು ಹೇಳಲಾಯಿತು. ಉತ್ತರಪ್ರದೇಶ, ಹರ್ಯಾಣ, ಮಧ್ಯಪ್ರದೇಶ ಮತ್ತು ಗುಜರಾತ ಈಗಾಗಲೇ ಇದನ್ನು ಮಾಡಿವೆ. ಕಾರ್ಮಿಕ ಕಾನೂನುಗಳನ್ನು ಕೂಡ ಹೀಗೆಯೇ ರಾಜ್ಯ ಮಟ್ಟದ ಸುಗ್ರೀವಾಜ್ಞೆಗಳು ಮತ್ತು ಕ್ರಮಗಳ ಮೂಲಕ ಬದಲಿಸಲಾಯಿತು ಅಥವ ರದ್ದು ಮಾಡಲಾಯಿತು.

ಮೋದಿ ಸರಕಾರ 'ಆತ್ಮನಿರ್ಭರ್ ಭಾರತ್' ಅಭಿಯಾನದ ವೇಷ ತೊಡಿಸಿ ವಿವಿಧ ನವ-ಉದಾರವಾದಿ ಕ್ರಮಗಳನ್ನು ಮುಂದೊತ್ತುತ್ತಿದೆ. ಕೃಷಿ ಮತ್ತು ಗ್ರಾಮೀಣ ಮೂಲರಚನೆಯ ಆಶ್ರಯದಲ್ಲಿ ಪ್ರಕಟಿಸಿರುವ ಕ್ರಮಗಳು ಯಾವವೂ ವಾಸ್ತವವಾಗಿ ರೈತರಿಗೆ ಹೆಚ್ಚೇನೂ ಕೊಟ್ಟಿಲ್ಲ. ಗದ್ದೆಮಟ್ಟದ ಮೂಲರಚನೆ ನಿಧಿ, ಪ್ರಧಾನ ಮಂತ್ರಿ ಮತ್ಸ್ಯಸಂಪದಾ ಯೋಜನಾ, ಪಶುಸಂಗೋಪನಾ ಮೂಲರಚನೆ ಅಭಿವೃದ್ಧಿ ನಿಧಿ, ಇತ್ಯಾದಿಗಳೆಲ್ಲವೂ ವಾಸ್ತವವಾಗಿ ಈಗಾಗಲೇ ಇರುವ ಅಥವ 2019-20 ಮತ್ತು 2020-21ರ ಬಜೆಟುಗಳಲ್ಲಿ ಈ ಮೊದಲೇ ಪ್ರಕಟಿಸಿರುವ ಸ್ಕೀಮುಗಳ ನವಪೊಟ್ಟಣಗಳಷ್ಟೇ. ಇವಕ್ಕೆ ತಗಲುವ ಹೆಚ್ಚುವರಿ ವೆಚ್ಚ ಕೇವಲ 5000 ಕೋಟಿ ರೂ.

ನಾವೀಗ ಒಂದು ಅರೆಬರೆಗೊಳಿಸಿರುವ ಸಂಸತ್ತು ಕೆಲಸ ಮಾಡುತ್ತಿರುವುದನ್ನು ನೋಡುತ್ತಿದ್ದೇವೆ. ಸರಕಾರ ಈ ಯಾವುದೇ ಮಸೂದೆಯನ್ನು ಸಂಬಂಧಿತ ಸ್ಥಾಯೀ ಸಮಿತಿಗಳಿಗೆ ವಿವರವಾದ ಚರ್ಚೆಗೆ ಕಳಿಸಲು ನಿರಾಕರಿಸಿದೆ. ಚರ್ಚೆಗೆ ಸಮಯವನ್ನು ತೀವ್ರವಾಗಿ ಕಡಿತಮಾಡಲಾಗಿದೆ, ಶಾಸನಗಳನ್ನು ಬಲವಂತದಿಂದ ಪಾಸು ಮಾಡಿಸಿಕೊಳ್ಳಲಾಗುತ್ತಿದೆ. ಕೊವಿಡ್ ಮಹಾಸೋಂಕು ಮೋದಿ ಸರಕಾರಕ್ಕೆ ರೈತ-ವಿರೋಧಿ, ಕಾರ್ಮಿಕ-ವಿರೋಧಿ ಶಾಸನಗಳನ್ನು ಯಾವುದೇ ರೀತಿಯ ಸರಿಯಾದ ಸಂಸದೀಯ ತಪಾಸಣೆ ಅಥವ ಚರ್ಚೆಯಿಲ್ಲದೇ ತೂರಿಸಿ ಬಿಡಲು ಒಂದು ಸುವರ್ಣಾವಕಾಶ ಅಗಿಬಿಟ್ಟಿದೆ.

ಪ್ರಮುಖ ರಾಜಕೀಯ ವಿರೋಧಿಗಳನ್ನು ಸಿಲುಕಿಸುವ ದಿಲ್ಲಿ ಪೋಲೀಸ್ ಹುನ್ನಾರ ಮೋದಿ ಮತ್ತು ಬಿಜೆಪಿಯ ನಿಜವಾದ ಮುಖ, ತಂತ್ರ ಮತ್ತು ಮಂತ್ರ-ಯೆಚುರಿ

ದಿಲ್ಲಿ ಪೋಲೀಸ್ ದಿಲ್ಲಿ ಗಲಭೆಗಳನ್ನು ಕುರಿತಂತೆ ಹಾಕಿರುವ ಪೂರಕ ಆರೋಪ ಪತ್ರದಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಸ್ವರಾಜ್ಯ ಅಭಿಯಾನದ ಮುಖ್ಯಸ್ಥರಾದ ಯೋಗೇಂದ್ರ ಯಾದವ್, ಪ್ರಖ್ಯಾತ ಅರ್ಥಶಾಸ್ತ್ರಜ್ಞೆ ಪ್ರೊ. ಜಯತಿ ಘೋಷ್, ದಿಲ್ಲಿ ವಿಶ್ವವಿದ್ಯಾಲಯದ ಪ್ರೊ. ಅಪೂರ್ವಾನಂದ ಮತ್ತು ಪ್ರಖ್ಯಾತ ಡಾಕ್ಯುಮೆಂಟರಿ ತಯಾರಕ ರಾಹುಲ್ ರಾಯ್ ಅವರನ್ನು ಸಹ-ಪಿತೂರಿಗಾರರೆಂದು ಹೆಸರಿಸಿರುವುದಾಗಿ ಪಿಟಿಐ ಸಪ್ಟಂಬರ್ 12ರಂದು ವರದಿ ಮಾಡಿದೆ.

ಇದಕ್ಕೆ ಪ್ರತಿಕ್ರಿಯಿಸುತ್ತ ಸೀತಾರಾಮ್ ಯೆಚುರಿ ಇದು ಮೋದಿ ಮತ್ತು ಬಿಜೆಪಿಯ ನಿಜವಾದ "ನಡೆ, ಚಾರಿತ್ರ್ಯ, ಮುಖ" (ಚಾಲ್, ಚರಿತ್ರ್, ಚೆಹರಾ)ವನ್ನು ಬಯಲಿಗೆ ತಂದಿದೆ ಎಂದು ವರ್ಣಿಸಿದ್ದಾರೆ.

ದಿಲ್ಲಿ ಪೋಲೀಸ್ ಬಿಜೆಪಿ ಕೇಂದ್ರ ಸರಕಾರ ಮತ್ತು ಗೃಹ ಮಂತ್ರಾಲಯದ ಅಡಿಯಲ್ಲಿ ಕೆಲಸ ಮಾಡುತ್ತಿದೆ. ಅದರ ನ್ಯಾಯಬಾಹಿರ, ಕಾನೂನುಬಾಹಿರ ಕ್ರಿಯೆಗಳು ಬಿಜೆಪಿ ಮುಖಂಡತ್ವದ ರಾಜಕೀಯದ ನೇರ ಫಲಿತಾಂಶಗಳು. ಅವರಿಗೆ ಮುಖ್ಯಧಾರೆಯ ರಾಜಕೀಯ ಪಕ್ಷಗಳ ನ್ಯಾಯಪೂರ್ಣ, ಶಾಂತಿಯುತ ಪ್ರತಿಭಟನೆಗಳೆಂದರೆ .ಭಯ, ಆದ್ದರಿಂದ ಪ್ರತಿಪಕ್ಷಗಳ ಮೇಲೆ ಗುರಿಯಿಡಲು ಪ್ರಭುತ್ವ ಶಕ್ತಿಯ ದುರುಪಯೋಗ ಮಾಡುತ್ತಿದ್ದಾರೆ ಎಂದು ಯೆಚುರಿ ಟೀಕಿಸಿದ್ದಾರೆ.

ಬಿಜೆಪಿ ಸರಕಾರಕ್ಕೆ ಪ್ರಶ್ನೆಗಳೆಂದರೆ ಭಯ, ಅದು ಸಂಸತ್ತಿನಲ್ಲಿ ಇರಬಹುದು, ಅಥವ ಮಾಹಿತಿ ಹಕ್ಕು ಕಾಯ್ದೆ(ಆರ್.ಟಿ.ಐ.)ಯ ಮೂಲಕ ಮಾಧ್ಯಮಗಳಲ್ಲಿ ರಬಹುದು. ಪ್ರಧಾನ ಮಂತ್ರಿಗಳಿಗೆ ಪತ್ರಿಕಾ ಗೋಷ್ಠಿ ನಡೆಸಲಾಗಲೀ, ತನ್ನ ಖಾಸಗಿ ನಿಧಿಯ ಬಗ್ಗೆ ಆರ್.ಟಿ.ಐ. ಪ್ರಶ್ನೆಗಳಿಗೆ ಉತ್ತರಿಸಲಾಗಲೀ ಅಥವ ತನ್ನ ಪದವಿ ಪ್ರಮಾಣ ಪತ್ರವನ್ನಾಗಲೀ ತೋರಿಸಲು ಸಾಧ್ಯವಿಲ್ಲ. ಇಂತಹ ಪ್ರಭುತ್ವ ಶಕ್ತಿಯ ನಗ್ನ ದುರುಪಯೋಗದಿಂದ ರಾಜಕೀಯ ವಿರೋಧದ ಬಾಯಿ ಮುಚ್ಚಿಸಬಹುದು ಎಂದು ಅವರು ಯೋಚಿಸಿದಂತಿದೆ. ನಾವು ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಡಿದ್ದೇವೆ, ಇದನ್ನೂ ಸೋಲಿಸುತ್ತೇವೆ ಎಂದು ಯೆಚುರಿ ಎಚ್ಚರಿಸಿದ್ದಾರೆ.

ಬಿಜೆಪಿಯ ಕಾನೂನುಬಾಹಿರ ಬೆದರಿಕೆಗಳು ಸಿ.ಎ.ಎ. ಯಂತಹ ತಾರತಮ್ಯದ ಕಾನೂನುಗಳನ್ನು ಜನರು ವಿರೋಧಿಸದಂತೆ ತಡೆಯಲಾರವು. ಭಾರತೀಯರು, ಅವರ ಜಾತಿ, ಮತ, ಬಣ್ಣ, ಪಂಥ, ಪ್ರದೇಶ, ಲಿಂಗ ಮತ್ತು ರಾಜಕೀಯ ಸಂಯೋಜನೆಗಳು ಏನೇ ಇರಲಿ, ಎಲ್ಲರೂ ಸಮಾನರು ಎಂದು ಎತ್ತಿ ಹಿಡಿಯುವುದು ನಮ್ಮ ಹಕ್ಕು ಮಾತ್ರವೇ ಅಲ್ಲ, ನಮ್ಮ ಕರ್ತವ್ಯ ಕೂಡ. ನಾವು ಅದನ್ನು ಖಂಡಿತವಾಗಿಯೂ ಚಲಾಯಿಸುತ್ತೇವೆ.


ದಿಲ್ಲಿಯಲ್ಲಿ 56 ಜನಗಳ ಸಾವಿಗೆ ಕಾರಣವಾದ ಹಿಂಸಾಚಾರವನ್ನು ಪ್ರಚೋದಿಸಿ ದವರ ದ್ವೇಷ ಭಾಷಣದ ವೀಡಿಯೋಗಳು ಎಲ್ಲರ ಮುಂದಿವೆ. ಜೆಎನ್‌ಯು ನಲ್ಲಿ ಹಿಂಸಾಚಾರೀ ಮಂದೆಗಳಿಗೆ ನೇತೃತ್ವ ನೀಡಿದವರ ವೀಡಿಯೋ ಕೂಡ. ಬಿಜೆಪಿ ಸರಕಾರ ಮತ್ತು ಅದರ ಅಡಿಯಲ್ಲಿರುವ ದಿಲ್ಲಿ ಪೋಲೀಸ್ ಅವನ್ನು ನೋಡಲಾರರು, ಏಕೆಂದರೆ ಅವರು ಪ್ರಜಾಪ್ರಭುತ್ವವನ್ನು ನಾಶಮಾಡಲು ಕಟಿಬದ್ಧರಾಗಿದ್ದಾರೆ, ಯಾವುದೇ ರೀತಿಯಲ್ಲಾದರೂ ವಿರೋಧವನ್ನು ಮೆಟ್ಟಿ ಹಾಕುವ ಆದೇಶಕ್ಕೆ ಒಳಗಾಗಿದ್ದಾರೆ.

ಇದೀಗ ಮೋದಿ ಮತ್ತು ಬಿಜೆಪಿಯ ನಿಜವಾದ ಮುಖ, ತಂತ್ರ ಮತ್ತು ಮಂತ್ರ. ಅದರ ವಿರುದ್ಧ ಪ್ರತಿಭಟನೆಗಳು ನಡೆಯುತ್ತವೆ ಎಂದು ಸೀತಾರಾಮ್ ಯೆಚುರಿ ಹೇಳಿದ್ದಾರೆ.



ಸರ್ಕಾರಗಳ ನೀತಿಗಳು ಹಾಗೂ ಆರೋಗ್ಯ ವ್ಯವಸ್ಥೆಯ ಖಾಸಗೀಕರಣ

ಡಾ. ಅನಿಲ್ ಕುಮಾರ್ .ಎ



ಸ್ವಾತಂತ್ರ್ಯೋತ್ತರ ಭಾರತದಲ್ಲಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಸ್ತಿತ್ವಕ್ಕೆ ಬಂದಂತಹ ಸರ್ಕಾರಗಳು ರೂಪಿಸಿದ ನಿಯಮಗಳು ಹಾಗೂ ಜಾರಿ ಮಾಡಿದಂತಹ ನೀತಿಗಳ ಪರಿಣಾಮವಾಗಿ ಇಂದು ಭಾರತದಲ್ಲಿ ಜನರ ಆರೋಗ್ಯವನ್ನು ಕಾಪಾಡುವುದು ಕಷ್ಟವಾಗಿದೆ. ಅದರಲ್ಲೂ ಬಡವರಿಗೆ ಆರೋಗ್ಯ ವ್ಯವಸ್ಥೆಯೇ ಇಲ್ಲದಂತಾಗಿದೆ ಇಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಆರೋಗ್ಯ ವ್ಯವಸ್ಥೆಯ ಖಾಸಗೀಕರಣದಿಂದ.

ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಲ್ ಲ್ಯೂಕ್ಸೆ. ಯವರು ರಾಷ್ಟ್ರೀಯ ಯೋಜನಾ ಆಯೋಗಕ್ಕೆ ನೀಡಿದಂತಹ ಆರೋಗ್ಯ ವ್ಯವಸ್ಥೆಯ ನಿರ್ಮಾಣದ ಬಗ್ಗೆಯ ವರದಿಯಲ್ಲಿ ಆರೋಗ್ಯ ವ್ಯವಸ್ಥೆಯು ಸರ್ಕಾರದ ಜವಾಬ್ದಾರಿ ಹಾಗೂ ಆರೋಗ್ಯವು ಎಲ್ಲಾ ಜನರಿಗೆ ಲಭ್ಯವಿರಬೇಕು ಎಂದು ಉಲ್ಲೇಖಿಸಿದ್ದಾರೆ. ಸ್ವಾತಂತ್ರ್ಯ ನಂತರ ಸಂವಿಧಾನದಲ್ಲಿ ಜನರ ಆರೋಗ್ಯ ವ್ಯವಸ್ಥೆಯನ್ನು ಎಲ್ಲರಿಗೂ ಎಟುಕುವಂತೆ ನಿರ್ಮಾಣ ಮಾಡುವುದು ಕಲ್ಯಾಣ ರಾಜ್ಯದ ಒಂದು ಜವಾಬ್ದಾರಿ ಎಂದು ಉಲ್ಲೇಖಿಸಿದ್ದಾರೆ. ಆದರೆ ಸರ್ಕಾರಗಳು ತಂದಂತಹ ನೀತಿಗಳ ಪರಿಣಾಮವಾಗಿ ಇಂದು 85% ರಷ್ಟು ಆರೋಗ್ಯ ವ್ಯವಸ್ಥೆಯು ಖಾಸಗೀಕರಣ ಗೊಂಡಿದೆ.

ಸ್ವಾತಂತ್ರ ನಂತರ ಮೊದಲ 35 ವರ್ಷಗಳು

ಈ ವರ್ಷಗಳಲ್ಲಿ ಭಾರತದಲ್ಲಿ ಆರೋಗ್ಯ ವ್ಯವಸ್ಥೆಯ ನಿರ್ಮಾಣದ ಬಗ್ಗೆ ನಿಯಮಗಳನ್ನು ಜಾರಿ ಮಾಡಲಾಯಿತು. ಭಾರತದ ಸಂವಿಧಾನದಲ್ಲಿ ಜನರ ಆರೋಗ್ಯದ ಜವಾಬ್ದಾರಿಯೂ ಸರ್ಕಾರದ್ದು ಎಂದು ಉಲ್ಲೇಖಿಸಿದರು ನಮ್ಮ ಪಂಚವಾರ್ಷಿಕ ಯೋಜನೆಗಳ ಅಡಿಯಲ್ಲಿ ಇದೇ ಅಭಿಪ್ರಾಯ ಹಾಗೂ ಕಣ್ಣೋಟವೂ ವ್ಯಕ್ತವಾಗಿದ್ದರೂ ವಾಸ್ತವದಲ್ಲಿ ಆರೋಗ್ಯ, ಶಿಕ್ಷಣ, ಗೃಹ ನಿರ್ಮಾಣ ಇತ್ಯಾದಿಗಳಿಗೆ ಕನಿಷ್ಠ ಹಣಕಾಸು ಒದಗಿಸಿದರು. ಇದರ ಪರಿಣಾಮವಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಿಷ್ಟವಾಗಿ ನಿರ್ಮಾಣಗೊಳ್ಳದ ಕಾರಣ ಖಾಸಗಿ ಆರೋಗ್ಯ ವ್ಯವಸ್ಥೆ ವೃದ್ಧಿ ಗೊಂಡಿತು. ಸರ್ಕಾರಿ ವೆಚ್ಚದಲ್ಲಿ ನಿರ್ಮಾಣಗೊಂಡ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಂದ ತರಬೇತಿ ಪಡೆದಂತಹ ವೈದ್ಯರು ಹಾಗೂ ಇತರೆ ವೈದ್ಯಕೀಯ ಸಿಬ್ಬಂದಿ ಖಾಸಗಿ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡರು. 1978 ರಲ್ಲಿ ಪ್ರಾಥಮಿಕ ಆರೋಗ್ಯ ಸೇವೆಯ ಕುರಿತಾದ ಅಂತರ್ರಾಷ್ಟ್ರೀಯ ಸಮ್ಮೇಳನವು ಆಗಿನ ಸೋವಿಯೆಟ್ ಒಕ್ಕೂಟದ ಕಝುಕ್ ಗಣರಾಜ್ಯದ ಅಲ್ಮ ಆಟ ದಲ್ಲಿ ನಡೆಯಿತು ಈ ಸಮ್ಮೇಳನದಲ್ಲಿ '2000 ದೊಳಗೆ ಎಲ್ಲರಿಗೂ ಆರೋಗ್ಯ' ಎನ್ನುವ ನಿರ್ಣಯವನ್ನು ಅಂಗೀಕರಿಸಿದರು. ಭಾರತದಲ್ಲಿ ಇದನ್ನು ಅನುಷ್ಠಾನಕ್ಕೆ ತರಲು ಭಾರತ ಸರ್ಕಾರ ಯೋಜನೆಗಳನ್ನು ರೂಪಿಸಿದೆ. ಇದರ ಭಾಗವಾಗಿ ನಮಗೆ ಮೊಟ್ಟಮೊದಲನೆಯ ರಾಷ್ಟೀಯ ಆರೋಗ್ಯ ನೀತಿ 1983 ರಲ್ಲಿ ಅನುಷ್ಠಾನಕ್ಕೆ ಬಂದಿತು.

1980 ರಿಂದ ಉದಾರೀಕರಣದ ಪೂರ್ವದ ಕಾಲ

ಈ ಅವಧಿಯಲ್ಲಿ ಎಲ್ಲರಿಗೂ ಆರೋಗ್ಯವನ್ನು ಕಲ್ಪಿಸುವ ಸಲುವಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನಿರ್ಮಾಣದಲ್ಲಿ ಹೆಚ್ಚು ವೆಚ್ಚವನ್ನು ಸರ್ಕಾರಗಳು ಮಾಡಿದವು. ಪ್ರಾಥಮಿಕ ಆರೋಗ್ಯ ಘಟಕಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಾರ್ವಜನಿಕ ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು ಹಾಗೂ ಸ್ಪೆಷಾಲಿಟಿ ಆಸ್ಪತ್ರೆಗಳು – ಇವುಗಳ ನಿರ್ಮಾಣದಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಲಾಗುತ್ತದೆ. ಆದರೆ ಅಂತರ್ರಾಷ್ಟ್ರೀಯ ಆರ್ಥಿಕ ಪರಿಸ್ಥಿತಿ ಹಾಗೂ ದೇಶದ ಆರ್ಥಿಕ ಬಿಕ್ಕಟ್ಟು ಙಒಈ ಮತ್ತು ಘಂಡಿಟಜ ಃಚಿಟಿಞ ಗಳಲ್ಲಿ ಪಡೆದ ಸಾಲಗಳ ಪರಿಣಾಮವಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಹೆಚ್ಚು ಹಣವನ್ನು ಖರ್ಚು ಮಾಡಲು ಸಾಧ್ಯವಾಗದೆ ಉದಾರವಾದಿ ನೀತಿಗಳನ್ನು ಆರೋಗ್ಯ ಕ್ಷೇತ್ರದಲ್ಲೂ ಅಳವಡಿಸಲಾಗುತ್ತದೆ.

1990 ನಂತರದ ವರ್ಷಗಳು

ಈ ಅವಧಿಯಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನಿರ್ಮಾಣದಲ್ಲಿ ಸರ್ಕಾರಗಳು ಹಣವನ್ನು ಖರ್ಚು ಮಾಡುವುದನ್ನು ಕಡಿಮೆ ಮಾಡುವಂತೆ ನಿಯಂತ್ರಿಸಲಾಗುತ್ತದೆ. ಅಂತರ್ರಾಷ್ಟ್ರೀಯ ಸಂಸ್ಥೆಗಳು ನಮ್ಮ ದೇಶದ ಮೇಲೆ ಹೇರಿರುವ ಸ್ಟ್ರಕ್ಚರ್ ಅಡ್ಜಸ್ಟ್‌ಮೆಂಟ್ ಪ್ರೋಗ್ರಾಂ (ಸ್ಯಾಪ್)ನ ಭಾಗವಾಗಿ ಸರ್ಕಾರಗಳು ಸಾರ್ವಜನಿಕ ಕ್ಷೇತ್ರಗಳಲ್ಲಿ ವೆಚ್ಚವನ್ನು ಕಡಿಮೆ ಮಾಡಿದವು. ಇದರಿಂದ ಜನ ಸಾಮಾನ್ಯರು ಆರೋಗ್ಯ ಸೇವೆಗಳಿಗೆ ಹಣವನ್ನು ವೆಚ್ಚ ಮಾಡುವಂತೆ ಮಾಡಿದವು ಇದರೊಂದಿಗೆ ಆರೋಗ್ಯ ವಲಯದಲ್ಲಿ ವಿಶ್ವ ಬ್ಯಾಂಕ್ ಹೂಡಿಕೆ ಮಾಡಿತು. ಆರೋಗ್ಯ ಆರೈಕೆಯಲ್ಲಿ ಹೂಡಿಕೆಯು ಲಾಭದಾಯಕವಾಗಿರಬೇಕು. ದೇಶ ಅಭಿವೃದ್ಧಿಯಾದರೆ ಒಂದಷ್ಟು ಜನರು ತಮ್ಮ ಆರೋಗ್ಯಕ್ಕಾಗಿ ಖರ್ಚು ಮಾಡುವಂತಾಗುತ್ತಾರೆ. ಹಾಗಾಗಿ ಸರ್ಕಾರಗಳು ಆರೋಗ್ಯದ ಪೂರ್ತಿ ಜವಾಬ್ದಾರಿಯನ್ನು ತೆಗೆದುಕೊಳ್ಳಬಾರದು, ಎನ್ನುವುದು ವಿಶ್ವ ಬ್ಯಾಂಕ್ ನ ವಾದವಾಗಿತ್ತು. ಈ ವಾದಕ್ಕೆ ಮಣಿದ ಸರ್ಕಾರಗಳು ಆಸ್ಪತ್ರೆಗಳಲ್ಲಿ ಬಳಕೆ ಶುಲ್ಕ ಎಂದು ವಿವಿಧ ಚಿಕಿತ್ಸಾ ವಿಧಾನಗಳಿಗೆ ಶುಲ್ಕವನ್ನು ವಸೂಲು ಮಾಡುವಂತೆ, ಜನ ಸಾಮಾನ್ಯರು ಆರೋಗ್ಯ ವಿಮಾ ಯೋಜನೆಗಳನ್ನು ಖರೀದಿಸುವಂತೆ ಪ್ರೋತ್ಸಾಹಿಸಿದವು. ಖಾಸಗಿ ಆಸ್ಪತ್ರೆಗಳು ಹಾಗೂ ಸಂಸ್ಥೆಗಳಿಗೆ ಉಚಿತವಾಗಿ ಭೂಮಿ, ಕಡಿಮೆ ದರದಲ್ಲಿ ಸಾಲ ಹಾಗೂ ವೈದ್ಯಕೀಯ ಉಪಕರಣಗಳ ಶುಲ್ಕ ರಹಿತ ಆಮದು ವ್ಯವಸ್ಥೆ – ಮುಂತಾದ ಅನೇಕ ಸವಲತ್ತುಗಳನ್ನು ಕೊಟ್ಟು ಖಾಸಗಿ ಆಸ್ಪತ್ರೆಗಳ ನಿರ್ಮಾಣಕ್ಕೆ ಸರ್ಕಾರಗಳು ಸಹಾಯ ಮಾಡಿದವು.

2000 ನಂತರದ ವರ್ಷಗಳು

ಜನರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ತಮ್ಮ ಜೇಬಿನಿಂದ ಹೆಚ್ಚು ಹಣ ಖರ್ಚು ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಇದರಿಂದ ಬಡವರು ಮತ್ತು ಜನಸಾಮಾನ್ಯರು ಇರುವ ಆರೋಗ್ಯ ವ್ಯವಸ್ಥೆಯನ್ನು ಬಳಸಿಕೊಳ್ಳಲಾಗದೆ ಕಾಯಿಲೆಗಳಿಗೆ ತುತ್ತಾಗ ಬೇಕಾಯಿತು. ಇಂತಹ ಸಂದರ್ಭದಲ್ಲಿ ರಾಷ್ಟ್ರೀಯ ಆರೋಗ್ಯ ನೀತಿ 2000 ಜಾರಿಗೆ ಬಂತು. ಆದರೆ ಖಾಸಗೀಕರಣವನ್ನು ಮೊಟಕುಗೊಳಿಸುವಲ್ಲಿ ಇದು ವಿಫಲವಾಯಿತು. ಸರ್ಕಾರವು ಆರೋಗ್ಯ ಕ್ಷೇತ್ರಕ್ಕೆ ಜಿಡಿಪಿಯಲ್ಲಿ ಕೇವಲ 1 % ಖರ್ಚು ಮಾಡುತ್ತಿತ್ತು. ಆದ್ದರಿಂದ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಬಲಿಷ್ಠ ವಾಗಲಿಲ್ಲ. 2004 ರಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ ಜಾರಿಗೆ ಬಂದು ಸರ್ಕಾರದ ಆರೋಗ್ಯ ಕ್ಷೇತ್ರದ ವೆಚ್ಚ 1.5% ಆಯಿತು ಇದರಿಂದ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಸ್ವಲ್ಪ ಬದಲಾವಣೆ ಕಂಡು ಬಂತು. ಗ್ರಾಮೀಣ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳು ಹಾಗೂ ಆಶಾ ಕಾರ್ಯಕರ್ತರ ರಚನೆಯಾಗಿ ಗ್ರಾಮೀಣ ಜನರ ಆರೋಗ್ಯವನ್ನು ಕಾಪಾಡುವಲ್ಲಿ ಕಾರ್ಯಕ್ರಮಗಳು ರೂಪಗೊಂಡವು. ಆದರೂ ಜನಸಾಮಾನ್ಯರು ಆರೋಗ್ಯಕ್ಕಾಗಿ ಮಾಡುವ ಖರ್ಚು ಕಡಿಮೆಯಾಗಲಿಲ್ಲ. ನಂತರ ಸರ್ಕಾರಗಳು ತಮ್ಮ ಧೋರಣೆಯನ್ನು ಬದಲಿಸಿದವು. ಎಲ್ಲರಿಗೂ ಆರೋಗ್ಯ ಎನ್ನುವ ಧೋರಣೆಯಿಂದ ಎಲ್ಲರಿಗೂ ಆರೋಗ್ಯ ವಿಮೆ ಎಂದು ಬದಲಾಯಿತು. ಸರ್ಕಾರಗಳು ತೆರಿಗೆ ಹಣದಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ನಿರ್ಮಿಸುವ ಬದಲಿಗೆ ಆರೋಗ್ಯ ವಿಮೆ ಕಡೆಗೆ ಹಣವನ್ನು ವೆಚ್ಚ ಮಾಡಿದರು ಇದರಿಂದ ಸರ್ಕಾರದ ಹಣವು ವ್ಯವಸ್ಥಿತವಾಗಿ ಖಾಸಗೀ ಕಂಪನಿಗಳ ಹಾಗೂ ವ್ಯಕ್ತಿಗಳ ಪಾಲಾಯಿತು. ಯಶಸ್ವಿನಿ ಯೋಜನೆ, ವಾಜಪೇಯಿ ಆರೋಗ್ಯ ಶ್ರೀ ಯೋಜನೆ, ಹಾಗೂ ಆರೋಗ್ಯ ಕರ್ನಾಟಕ ಯೋಜನೆಗಳು, ಜಾರಿಗೆ ಬಂದರೂ ಬಡವರು ಹಾಗೂ ಜನಸಾಮಾನ್ಯರು ತಮ್ಮ ಜೇಬಿನಿಂದ ಆರೋಗ್ಯಕ್ಕಾಗಿ ಹಣವನ್ನು ಖರ್ಚು ಮಾಡುವುದು ಕಡಿಮೆಯಾಗಲಿಲ್ಲ. ಬದಲಿಗೆ ಈ ಯೋಜನೆಗಳ ಮೂಲಕ ಖಾಸಗಿ ಹಾಗೂ ಕಾರ್ಪೊರೇಟ್ ಆಸ್ಪತ್ರೆಗಳು ಹೆಚ್ಚಿನ ಲಾಭವನ್ನು ಪಡೆದವು. ಇಂತಹ ಸಂದರ್ಭದಲ್ಲಿ 2017ರಲ್ಲಿ ರಾಷ್ಟ್ರೀಯ ಆರೋಗ್ಯ ನೀತಿಯನ್ನು ಅನುಷ್ಠಾನಕ್ಕೆ ತಂದಂತಹ ಇಂದಿನ ಸರ್ಕಾರ ಖಾಸಗೀಕರಣವನ್ನು ಇನ್ನೊಂದು ಹಂತಕ್ಕೆ ತೆಗೆದುಕೊಂಡು ಹೋಗಿದೆ. ಈಗ ಜಿಲ್ಲಾ ಕೇಂದ್ರದಲ್ಲಿ ಇರುವ ಸಾರ್ವಜನಿಕ ಆಸ್ಪತ್ರೆಯನ್ನೇ ಕಾರ್ಪೊರೇಟ್ ಸಂಸ್ಥೆಗಳಿಗೆ ಪಿಪಿಪಿ ಮಾಡೆಲ್ ಅನ್ವಯ ಧಾರೆ ಯೆರೆದು ಕೊಡುತ್ತಿದೆ.

ಹೀಗೆ ಹಂತ ಹಂತವಾಗಿ ಇದುವರೆಗೂ ನಮ್ಮನ್ನು ಆಳಿದ ಸರ್ಕಾರಗಳು ಸ್ವಾತಂತ್ರ್ಯ ಚಳುವಳಿಯ ಆಶಯಗಳಿಗೆ ತಿಲಾಂಜಲಿಯನ್ನು ಇಟ್ಟು ದೊಡ್ಡ ಬಂಡವಾಳಗಾರರ ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಗುಲಾಮರಾಗಿ ನಡೆದು ಕೊಂಡಿರುವ ಪರಿಣಾಮವಾಗಿ ಇಂದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ದುರ್ಬಲವಾಗಿದ್ದು ಕೋವಿಡ್ – 19ನ ಸಂದರ್ಭದಲ್ಲಿ ಜನ ಸಾಮಾನ್ಯರು ತಮ್ಮನ್ನು ರಕ್ಷಿಸಿಕೊಳ್ಳಲು ಖಾಸಗಿ ಹಾಗೂ ಕಾರ್ಪೊರೇಟ್ ಆಸ್ಪತ್ರೆಗಳ ಮೊರೆ ಹೋಗಿ ಅನಿವಾರ್ಯವಾಗಿ ತಮ್ಮಲ್ಲಿರುವ ಎಲ್ಲಾ ಹಣವನ್ನು ಹಾಗೂ ಆಸ್ತಿಯನ್ನು ಕಳೆದುಕೊಳ್ಳ ಬೇಕಾಗುತ್ತಿದೆ.

ಆದರೆ ಕೇರಳ ರಾಜ್ಯದಲ್ಲಿ ಮಾತ್ರ ಕೋವಿಡ್ ಸೋಂಕಿತರಲ್ಲಿ ಕೇವಲ2% ಮಾತ್ರ ಖಾಸಗಿ ಕ್ಷೇತ್ರದಲ್ಲಿ ಆರೈಕೆಯನ್ನು ಹಾಗೂ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಉಳಿದ 98% ಸೋಂಕಿತರು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ. ಕೇರಳ ರಾಜ್ಯದಲ್ಲಿ ಆಡಳಿತವನ್ನು ನಡೆಸಿದಂತಹ ಸರ್ಕಾರಗಳು ಅದರಲ್ಲೂ ಮುಖ್ಯವಾಗಿ ಎಡ ಪಕ್ಷಗಳ ಸರ್ಕಾರಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ನಿರ್ಮಾಣವನ್ನು ಸದೃಢವಾಗಿ ಮಾಡಿರುವ ಫಲವಾಗಿ ಇಂದು ಕೇರಳ ರಾಜ್ಯವು ಎಲ್ಲಾ ಆರೋಗ್ಯ ಸೂಚ್ಯಂಕಗಳಲ್ಲಿ ಭಾರತದಲ್ಲಿ ಅಗ್ರಸ್ಥಾನದಲ್ಲಿದೆ. ಹಾಗೂ ಎಲ್ಲರಿಗೂ ತಿಳಿದಿರುವ ಹಾಗೆ ಕೋವಿಡ್–19 ನಿಯಂತ್ರಣದಲ್ಲಿ ಮೇಲುಗೈ ಸಾಧಿಸಿರುವ ಇಂದಿನ ಕೇರಳ ಸರ್ಕಾರದ ಆರೋಗ್ಯ ಮಂತ್ರಿ ಹಾಗೂ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಇಡೀ ವಿಶ್ವವೇ ಶ್ಲಾಘಿಸಿದೆ. ■



ಕರ್ನಾಟಕದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಹಲವು ದಶಕಗಳ ಕಾಲ ದುಡಿದ **ಡಾ. ಕೆ. ಸುಶೀಲಾ** ಅವರೊಂದಿಗೆ ಕರ್ನಾಟಕದಲ್ಲಿ ಕೊವಿಡ್–19 ನಿರ್ವಹಣೆ ಕುರಿತು ಸಂದರ್ಶನ



ಕರ್ನಾಟಕದಲ್ಲಿ ಕೊವಿಡ್–19 ನಿರ್ವಹಣೆ

1. ಕರ್ನಾಟಕದ ಕೊರೊನಾ ಸಂದರ್ಭದ ಆರೋಗ್ಯ ಬಿಕಟ್ಟಿನ ನಿರ್ವಹಣೆ ಸಮರ್ಪಕವಾಗಿತ್ತೇ? ಇಲ್ಲದಿದ್ದರೆ ಏನು ಮಾಡಬೇಕಿತ್ತು?

ಈ 'ಜೆಟ್ ಯುಗದಲ್ಲಿ' ಈ ಸೋಂಕು ರಾಜ್ಯಕ್ಕೆ ಬರದಂತೆ ತಡೆಯುವುದು ಅಸಾಧ್ಯ. ಆದರೆ ಚೀನಾದ ವುಹಾನ್‌ನಂತೆ ಯಾವುದೇ ಸೂಚನೆ ನೀಡದೆ ರಾಜ್ಯದಲ್ಲಿ ಧಿಢೀರನೆ ಪ್ರತ್ಯಕ್ಷವಾದ ಕಾಯಿಲೆ ಇದಾಗಿರಲಿಲ್ಲ. ದೇಶದಲ್ಲಿ ಕೊವಿಡ್ ಕಾಣಿಸಿಕೊಂಡ ಪ್ರಥಮ ರಾಜ್ಯವೂ ನಮ್ಮದ್ದಲ್ಲ. ಪ್ರಥಮ ಬಾರಿಗೆ ಈ ಸೋಂಕು ನಮ್ಮ ರಾಜ್ಯದಲ್ಲಿ ಕಾಣಿಸಿಕೊಂಡಾಗ, ವುಹಾನ್‌ನಲ್ಲಿ ಈ ಕಾಯಿಲೆಯ ಮೊದಲ ಪ್ರಕರಣ ಕಾಣಿಸಿಕೊಂಡು ನಾಲ್ಕು ತಿಂಗಳು ಕಳೆದಿತ್ತು. ಈ ಖಾಯಿಲೆ ವುಹಾನ್, ಇಟಲಿಗಳಲ್ಲಿ ನಡೆಸಿದ ಹಾವಳಿ ಹಾಗೂ ಈ ವೈರಾಣುಗಳ ಮತ್ತು ರೋಗದ ಬಗೆಗೆ ಬಹಳಷ್ಟು ಮಾಹಿತಿಯೂ ಅದಾಗಲೇ ಲಭ್ಯವಿತ್ತು. ಪಕ್ಕದ ರಾಜ್ಯ ಕೇರಳ ಕೊವಿಡ್–19 ರ ಹತೋಟಿಗಾಗಿ ಆ ಸೋಂಕು ರಾಜ್ಯಕ್ಕೆ ಕಾಲಿಡುವ ಮೊದಲೇ ಸಜ್ಜಾಗಿ ನಿಂತಿತ್ತು. ಆದರೆ ನಮ್ಮ ರಾಜ್ಯದಲ್ಲಿ ಸೋಂಕು ಕಾಣಿಸಿಕೊಂಡ ಮೇಲೆ ಅದನ್ನು ಎದುರಿಸಲು ಬೇಕಾದ ಯಾವುದೇ ಯೋಜನೆ ರಚಿಸುವ ಗಡಿಬಿಡಿ ತೋರಿಸಲಿಲ್ಲ. ಬಹುಶಃ ಮಾರ್ಚ್ 25 ರಿಂದ ಇಡೀ ದೇಶದಂತೆ ನಮ್ಮ ರಾಜ್ಯದಲ್ಲೂ ಘೋಷಿಸಿದ ಧೀರ್ಘಾವಧಿಯ ಲಾಕ್‌ಡೌನ್ ನಿಂದ ಜನರನ್ನು ಗೃಹಬಂಧನದಲ್ಲಿಟ್ಟು ಎಲ್ಲಾ ಚಟುವಟಿಕೆಗಳನ್ನು ಸ್ಥಬ್ದಗೊಳಿಸುವುದರಿಂದ ಕೊವಿಡ್–19 ಖಾಯಿಲೆಯನ್ನು ನಿರ್ಮೂಲನೆ ಮಾಡಬಹುದೆಂಬ ನಂಬಿಕೆ ಬಲವಾಗಿದ್ದಿರಬಹುದು. ಆದರೆ ಇಂತಹ ಕಾರ್ಯದಿಂದ ಪ್ರಪಂಚವ್ಯಾಪಿ ಸೋಂಕು ನಿರ್ಮೂಲನಗೊಳಿಸಬಹುದಾದರೆ ಕಾರಾಗೃಹದ ಕೈದಿಗಳಲ್ಲಿ ಈ ಸೋಂಕು ಕಾಣಿಸಿಕೊಳ್ಳಬಾರದಿತ್ತು. ಜನರ ದೈಹಿಕ, ಮಾನಸಿಕ, ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರದಂತೆ ಸೂಕ್ತ ಕ್ರಮ ಕೈಗೊಂಡು ಮಾಡುವ ಲಾಕ್‌ಡೌನ್, ಸೋಂಕನ್ನು ಮುಂದಿನ ಹಂತಕ್ಕೆ ಏರದಂತೆ ತಡೆಯುವುದರೊಂದಿಗೆ, ಅದನ್ನು ಹತೋಟಿಗೆ ತರುವ ಯೋಜನೆಯ ರೂಪರೇಷೆ ರಚಿಸಿ, ಅದನ್ನು ಸಂಪೂರ್ಣವಾಗಿ ಅನುಷ್ಟಾನಗೊಳಿಸುವಲ್ಲಿ ಉಪಯೋಗಕ್ಕೆ ಬರುತ್ತಿತ್ತು. ಆದರೆ ಇಂತಹ ಕಾರ್ಯಗಳೇನೂ ತರಾತುರಿಯಲ್ಲಿ ಸರ್ಕಾರದಿಂದ ನಡೆಯಲಿಲ್ಲ.

ಕೊವಿಡ್ ನಿಯಂತ್ರಣದ ಕಾರ್ಯದ ಯೋಜನೆ ರೂಪಿಸಲು ಸೂಕ್ತ ಸಲಹೆ ಸಮಿತಿ ರಚಿಸಲಾಯಿತು. ಆದರೆ ಈ ಯೋಜನೆ ರೂಪಿಸಲು ಬೇಕಾದ ವಿಷಯಗಳಲ್ಲಿ ಅಪಾರ ಅನುಭವವಿರುವ ತಜ್ಞ ಸದಸ್ಯರ ಕೊರತೆ ಎದ್ದು ಕಾಣುತ್ತಿತ್ತು.

ಕೋವಿಡ್ ಹತೋಟಿಯ ಹೊಣೆಗಾರಿಕೆ ವಹಿಸಿದ ಮಂತ್ರಿಗಳನ್ನು ಆಗಾಗ ಬದಲಾಯಿಸಲಾಯಿತು. ಹಾಗೂ ಇವರಲ್ಲಿ ಯಾವುದೇ ಹೊಂದಾಣಿಕೆ ಇರಲಿಲ್ಲ. ಇವರು ನೀಡುತ್ತಿದ್ದ ಹೇಳಿಕೆಗಳು ಹಲವು ಬಾರಿ ವಿರೋಧಾಭಾಸಗಳಿಂದ ಕೂಡಿರುತ್ತಿದ್ದವು.

ಕೋವಿಡ್–19 ಲಾಕ್ಡೌನ್ ಕಾಲದಲ್ಲಿ ಗುಪ್ತವಾಗಿ ತನ್ನ ಸಂತಾನ ವೃದ್ಧಿಸಿಕೊಳ್ಳುತ್ತಿತ್ತು. ಹಲವು ತಜ್ಞರು ಪರಿಸ್ಥಿತಿ ಮುಂದೆ ಕೈ ಮೀರದಂತೆ ಸಮರೋಪಾದಿಯಲ್ಲಿ ಸೋಂಕು ತಡೆಗಟ್ಟುವ ಕ್ರಮ ಕೈಗೊಳ್ಳಬೇಕೆಂಬ ಸಲಹೆ ನೀಡಿದರೂ ಸೋಂಕಿನ ಗಂಭೀರತೆ ಅರಿವಿರದ ಸರಕಾರ ಹಾಗೂ ಜನತೆ ಇದನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಆದರೆ ಈ ನಿರ್ಲಕ್ಷದಿಂದಾಗಿ ಸೋಂಕು ಒಮ್ಮೆಗೆ ಏರಲು ಪ್ರಾರಂಭಿಸಿತು. ಆಗ ಅದನ್ನು ಎದುರಿಸಲು ಬೇಕಾದ ತಯಾರಿ ಸರ್ಕಾರದಲ್ಲಿ ಇರಲಿಲ್ಲ. ರೋಗ ಪತ್ತೆ ಹಚ್ಚಲು ಬೇಕಾದ 'ಜ್ವರದ ಕ್ಲಿನಿಕ್', ಪ್ರಯೋಗಾಲಯಗಳು, ಕ್ವಾರಂಟೈನ್ ಮತ್ತು ಕೊವಿಡ್ ಸೆಂಟರ್‌ಗಳು, ರೋಗಿಗಳ ದಾಖಲಾತಿಗೆ ಸುಸಜ್ಜಿತ ಆಸ್ಪತ್ರೆಗಳ ಹಾಗೂ ಈ ಎಲ್ಲಾ ಕ್ಷೇತ್ರದಲ್ಲೂ ಕಾರ್ಯನಿರ್ವಹಿಸುವ ಕಾರ್ಯಕರ್ತರ, ವೈದ್ಯರ, ವೈದ್ಯಕೀಯ ಸಿಬ್ಬಂದಿಗಳ, ರೋಗಿಗಳ ಚಿಕಿತ್ಸೆಗೆ ಬೇಕಾದ ಔಷಧಿಗಳ, ಆಮ್ಲಜನಕದ, ವೆಂಟಿಲೇಟರ್‌ಗಳ ಇತ್ಯಾದಿ ಹತ್ತು ಹಲವು ವಿಷಯಗಳ ಕೊರತೆ ತೀವ್ರವಾಗಿ ಕಾಡಲು ಪ್ರಾರಂಭಿಸಿತ್ತು. ಸೋಂಕು ತಡೆಗಟ್ಟುವ, ಸೋಂಕಿಗೆ ಚಿಕಿತ್ಸೆ ನೀಡುವ ಸಿಬ್ಬಂದಿಗಳಿಗೆ ತಮ್ಮನ್ನು ಸೋಂಕಿನಿಂದ ರಕ್ಷಿಸಿಕೊಳ್ಳಲು ಬೇಕಾದ ಪರಿಕರಗಳ ಪೂರೈಕೆ ಆಗುತ್ತಿಲ್ಲವೆನ್ನುವ ಕೂಗು ಕೇಳಲಾರಂಭಿಸಿತ್ತು. ಮುಂದೆ ಪೂರೈಕೆಯಾದ ಈ ಪರಿಕರಗಳು ಕಳಪೆ ಮಟ್ಟದಾಗಿವೆ ಎನ್ನುವ ದೂರು ಕೇಳಿ ಬರುತ್ತಿತ್ತು. ಹೀಗಾಗಿ ಅಧಿಕ ಪ್ರಮಾಣದಲ್ಲಿ ಸಿಬ್ಬಂದಿ ಸೋಂಕಿಗೊಳಗಾದರು. ಇದು ಪರಿಸ್ಥಿತಿಯನ್ನು ಇನ್ನು ಬಿಗಡಾಯಿಸಿತು. ಸಿಬ್ಬಂದಿಗೆ ಸಂಬಳ ಸರಿಯಾದ ಸಮಯಕ್ಕೆ ಪಾವತಿಯಾಗುತ್ತಿಲ್ಲವೆಂದು ಕೂಗೆಬ್ಬಿತ್ತು. ಮೊದಲೇ ಸಿಬ್ಬಂದಿಗಳ ಕೊರತೆ ಕಾಡುತ್ತಿತ್ತು. ಅದರಲ್ಲೂ ಬಹಳಷ್ಟೂ ಪ್ರಮಾಣದ ಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳು ಕೆಲಸ ತೊರೆದರು. ರೋಗಿಗಳನ್ನು ಒಯ್ಯುವ ಆ್ಯಂಬುಲೆನ್ಸ್‌ಗಳ ಸಂಖ್ಯೆ ಹಾಗೂ ಕಾರ್ಯ ಅಸಮರ್ಪಕವಾಗಿ ಗಂಭೀರ ಸ್ಥಿತಿಯಲ್ಲಿದ್ದ ರೋಗಿಗಳು ನರಳಾಡುವಂತಾಯಿತು. ಕೋವಿಡ್‌ನಿಂದ ಮರಣಿಸಿದ ವ್ಯಕ್ತಿಗಳ ಶವಸಂಸ್ಕಾರ ದೊಡ್ಡ ತಲೆನೋವಾಗಿ ಪರಿಣಮಿಸಿತು.

ಇವುಗಳ ನಡುವೆ, ಮೊದಲೇ ಆರ್ಥಿಕವಾಗಿ ಜರ್ಜರಿತವಾಗಿದ್ದ ಸರ್ಕಾರದಿಂದ ಈ ಸೋಂಕು ತಡೆಗಟ್ಟುವ ಕಾರ್ಯದಲ್ಲಿ ಸಾವಿರಾರು ಕೋಟಿ ಅವ್ಯವಹಾರ ನಡೆಯಿತೆಂದು ಪ್ರತಿಪಕ್ಷಗಳು ಆಪಾದನೆ ಮಾಡಿ ಸರಿಯಾದ ಲೆಕ್ಕ ನೀಡುವಂತೆ ಕೇಳಿದವು. ಸರ್ಕಾರ ಇದಕ್ಕೆ ಸ್ಪಂದಿಸಲಿಲ್ಲ.

ಕೊವಿಡ್–19 ತಡೆಗಟ್ಟುವ ನಿರ್ವಹಣೆಯಲ್ಲಿ ಖಾಸಗಿ ವೈದ್ಯಕೀಯ ಸೇವೆಗಳ ಪಾತ್ರ ಏನಿತ್ತು?

ಪ್ರಾರಂಭದಲ್ಲಿ ಕೆಲವೇ ಕೆಲವು ತೃತೀಯ ಹಂತದ ಆಸ್ಪತ್ರೆಗಳು ತಮ್ಮ ಒಟ್ಟು ಹಾಸಿಗೆಯಲ್ಲಿ ಕೆಲವನ್ನು ಈ ಸೋಂಕಿನ ರೋಗಿಗಳಿಗೆ ಮೀಸಲಿಟ್ಟವು. ಹೆಚ್ಚಿನ ಆಸ್ಪತ್ರೆಗಳು ಈ ರೋಗಿಗಳನ್ನು ದಾಖಲಿಸಿಕೊಂಡರೆ ತಮ್ಮ ಇತರ ರೋಗಿಗಳಿಗೆ ಹಾಗೂ ಸಿಬ್ಬಂದಿಗಳಿಗೆ ಈ ಕಾಯಿಲೆ ಹರಡುವ ಭಯದಿಂದ ಚಿಕಿತ್ಸೆ ನೀಡಲು ಹಿಂದೇಟು ಹಾಕಿದವು. ಆದರೆ ಗಂಭೀರ ಸ್ಥಿತಿಯ ರೋಗಿಗಳ ಸಂಖ್ಯೆ ಏರಿದಂತೆ, ಸರ್ಕಾರದ ಒತ್ತಾಯಕ್ಕೆ ಮಣಿದು ಈ ರೋಗಿಗಳಿಗೆ ನೀಡಲಾರಂಭಿಸಿದವು. ಆದರೆ ಸರ್ಕಾರ ಇಲ್ಲಿನ ಚಿಕಿತ್ಸೆಗೆ ದರ ನಿಗದಿಪಡಿಸಿದರೂ ಹೆಚ್ಚಿನ ಎಲ್ಲಾ ಖಾಸಗಿ ಆಸ್ಪತ್ರೆಗಳು ರೋಗಿಗಳಿಂದ ದುಬಾರಿ ಹಣ ವಸೂಲು ಮಾಡುವ ದೂರು ಕೇಳಿ ಬರಲು ಪ್ರಾರಂಭವಾಯಿತು. ಹಾಗೂ ಈ ದರ ಜನಸಾಮಾನ್ಯರರ ಶಕ್ತಿಗೆ ಮೀರಿತ್ತು. ದೃಶ್ಯಮಾಧ್ಯಮದಲ್ಲಿ ಚರ್ಚೆಗೊಳಗಾದಾಗ ಅದರಲ್ಲಿ ಪಾಲ್ಗೊಂಡಿದ್ದ ಖಾಸಗಿ ಆಸ್ಪತ್ರೆಯ ಆಡಳಿತಾಧಿಕಾರಿಗಳು "ನಮ್ಮದು ವ್ಯಾಪಾರ ನಾವಿಲ್ಲಿ ಸೇವೆ ಮಾಡುತ್ತಿಲ್ಲ. ವ್ಯಾಪಾರ ಮಾಡುವುದೇ ಲಾಭಗಳಿಸಲು" ಎಂದು ರಾಜಾರೋಷವಾಗಿ ಉತ್ತರಿಸಿದರು.

ಕರ್ನಾಟಕದ ಆರೋಗ್ಯ ವ್ಯವಸ್ಥೆ ಈಗ ಏನಿದೆ? ಕೊರೊನಾದಿಂದ ಪಾಠ ಕಲಿತು ಮುಂದೆ ಹೇಗಿರಬೇಕು?

ಯಾವುದೇ ಸಮಾಜದ ಜನರ ಆರೋಗ್ಯದ ಮಟ್ಟ ಉತ್ತಮವಾಗಿರಲು ಹಾಗೂ ಬಂದ ಸಾಂಕ್ರಾಮಿಕ ರೋಗವನ್ನು ಸಮರ್ಪಕವಾಗಿ ತಡೆಗಟ್ಟಲು ಪ್ರಥಮ, ದ್ವಿತೀಯ ಹಾಗೂ ತೃತಿಯ ಹಂತಗಳ ಆರೋಗ್ಯ ಸೇವೆಗಳಿಂದ ಕೂಡಿದ ಸರಕಾರಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಉತ್ತಮವಾಗಿರುವುದು ಅವಶ್ಯಕ.

ಆದರೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಿಂದಿಗಿಂತಲೂ ಹೆಚ್ಚು ಸರಕಾರದ ಅಸಡ್ಡೆಗೆ ಗುರಿಯಾದಂತೆ, ಜನಸಂಖ್ಯೆ ಹೆಚ್ಚಾದಂತೆ, ಹೊಸ ಹೊಸ ಕಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದಂತೆ, ಆರೋಗ್ಯ ಸೇವೆಗಾಗಿ ಬೇಡಿಕೆ ಹೆಚ್ಚುತ್ತಿತ್ತು. ಆದರೆ ಆರ್ಥಿಕ ಮುಗ್ಗಟ್ಟಿನ ನೆಪವೊಡ್ಡಿ ಎಲ್ಲಾ ಸರ್ಕಾರಗಳು ಆರೋಗ್ಯ ಸೇವೆಗಾಗಿ ಮಾಡುವ ವೆಚ್ಚ ಕಡಿತಗೊಳಿಸಿದವು. ಹಾಗೂ ಈ ಸೇವೆ ನೀಡುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪ್ರಾರಂಭಿಸಿತು. ಆರೋಗ್ಯ ರಕ್ಷಣೆಯನ್ನು ಸೇವೆಯ ಬದಲು ವ್ಯಾಪಾರ ಎಂದು ಕರೆದ ಸರ್ಕಾರಗಳು ಇದಕ್ಕೆ ಆರೋಗ್ಯ ಉದ್ಯಮ (ಹೆಲ್ತ್ ಇಂಡಸ್ಟ್ರಿ) ಎಂದು ನಾಮಕರಣ ಮಾಡಿದವು.

ಈ ವ್ಯಾಪಾರದಲ್ಲಿ ಖಾಸಗಿಯವರ ಭಾಗಿತ್ವವನ್ನು ಪ್ರೋತ್ಸಾಹಿಸಿದವು. ಅದರಲ್ಲೂ ತೃತೀಯ ಹಂತದ ದೊಡ್ಡ ದೊಡ್ಡ ಆಸ್ಪತ್ರೆ ಕಟ್ಟಲು ಶ್ರೀಮಂತ ಸಂಸ್ಥೆಗಳಿಗೆ ಧಾರಾಳವಾಗಿ ಎಲ್ಲಾ ರೀತಿಯ ಸಹಾಯ ಮಾಡಲಾಯಿತು. ಯಾವಾಗ ಸರ್ಕಾರಗಳೇ ಪ್ರಜೆಗಳಿಗೆ ನೀಡುವ ಆರೋಗ್ಯ ನೀಡುವ ಆರೋಗ್ಯ ಸೇವೆ ಖರ್ಚಿನ ಹೊರೆ ಎಂದು ಅದರಿಂದ ಕೈತೊಳೆದುಕೊಂಡ ಆಗ ಖಾಸಗಿಯವರು ಈ ಹೊಣೆ ಹೊರಬೇಕು ಎನ್ನುವುದನ್ನು ಬಯಸುವುದು ಯೋಚಿಸುವುದು ಅಸಾಧ್ಯ. ಮಾತ್ರವಲ್ಲದೆ ಇದನ್ನು ವ್ಯಾಪಾರ ಎಂದು ಸರಕಾರವೇ ಹೇಳಿರುವಾಗ, ವ್ಯಾಪಾರ ಮಾಡುವುದೇ ಲಾಭಕ್ಕಾಗಿರುವಾಗ, ಖಾಸಗಿಯವರು ಲಾಭಗಳಿಸುವುದನ್ನು ಎಲ್ಲರೂ ಒಪ್ಪಿಕೊಳ್ಳುವುದು ಸಹಜವಾಗಿತ್ತು. ರೋಗ ಪತ್ತೆ ಹಚ್ಚಿ ಚಿಕಿತ್ಸೆ ನೀಡುವ ವೈದ್ಯಕೀಯ ಸೇವೆಯ ವ್ಯಾಪಾರಿಕರಣ ಸುಲಭ ಹಾಗೂ ಇದರಲ್ಲಿ ಹಣ ಮಾಡುವ ಸಾಮರ್ಥ್ಯ ಅಧಿಕ. ಹೀಗಾಗಿ ಇಂದು ಈ ಸೇವೆಯಲ್ಲಿ ಶೇಕಡ 80 ಪಾಲು ಖಾಸಗಿಯವರ ಹತೋಟಿಯಲ್ಲಿದೆ. ಆದರೆ ರೋಗ ತಡೆಗಟ್ಟುವ ಆರೋಗ್ಯ ಸೇವೆಯು ಲಾಭದಾಯಕವಲ್ಲ. ಇದರ ವ್ಯಾಪಾರಿಕರಣ ಕಷ್ಟ. ಹಾಗಾಗಿ ಈ ಸೇವೆ ಅಸಡ್ಡೆ ಗುರಿಯಾಯಿತು.

ಇತ್ತ ಸರಕಾರಗಳು ಸಾಮಾಜಿಕ ಆರೋಗ್ಯ ಸೇವೆಯಲ್ಲಿ ತಾವು ಮಾಡುವ ವೆಚ್ಚವನ್ನು ದಿನದಿಂದ ದಿನಕ್ಕೆ ಕಡಿತಗೊಳಿಸಲಾರಂಭಿಸಿದವು. ಈ ಸಂಸ್ಥೆಗಳಲ್ಲಿ ವೈದ್ಯರು ಸೇರಿ ಸಿಬ್ಬಂದಿಗಳ ತೀವ್ರ ಕೊರತೆ, ಔಷಧ ಮತ್ತಿತರ ವೈದ್ಯಕೀಯ ಸಲಕರಣೆಗಳ, ಸೂಕ್ತ ಕಟ್ಟಡಗಳ ಕೊರತೆ ದಿನದಿಂದ ದಿನಕ್ಕೆ ಏರುತ್ತಿತ್ತು. ವೆಚ್ಚ ಕಡಿತಗೊಳಿಸಲು ವೈದ್ಯರು ಸೇರಿ ಇತರ ಸಿಬ್ಬಂದಿಗಳನ್ನು ವೃತ್ತಿ ಭದ್ರತೆ ಹಾಗೂ ಯಾವುದೇ ಸೇವಾ ಸೌಲಭ್ಯಗಳಿಲ್ಲದ, ಕನಿಷ್ಠ ಸಂಬಳ ನೀಡುವ 'ಗುತ್ತಿಗೆ'ಯ ಆಧಾರದ ಮೇಲೆ ನೇಮಿಸಿಕೊಳ್ಳಲಾಯಿತು. ಹಲವು ಸಂಸ್ಥೆಗಳಲ್ಲಿ ವೈದ್ಯರನ್ನು ಬಿಟ್ಟು ಉಳಿದ ಸಿಬ್ಬಂದಿಗಳ ನೇಮಕಾತಿಯ ಹೊಣೆಗಾರಿಕೆ ಖಾಸಗಿ ಗುತ್ತಿಗೆದಾರರಿಗೆ ನೀಡಲಾಯಿತು. ಹಿರಿಯ, ಕಿರಿಯ ಆರೋಗ್ಯ ಕಾರ್ಯಕರ್ತೆಯರ ಹಾಗೂ ಕಾರ್ಯಕರ್ತರ ಸಂಖ್ಯೆ ಕಡಿತಗೊಳಿಸಲಾಯಿತು. ಖಾಲಿ ಬಿದ್ದ ಇವರ ಸ್ಥಾನಗಳನ್ನು ಖಾಲಿ ಬಿಡಲಾಯಿತು. ಹೀಗೆ ಸರಕಾರಿ ಆರೋಗ್ಯ ಸಂಸ್ಥೆ ಅದರಲ್ಲೂ ರೋಗ ತಡೆಗಟ್ಟುವ ಪ್ರಾರ್ಥಮಿಕ ಹಂತದ ಸಂಸ್ಥೆಗಳಲ್ಲಿ, ಪ್ರಮುಖವಾಗಿ ಹಳ್ಳಿಗಾಡಿನ ಪ್ರದೇಶದಲ್ಲಿ ಸಿಬ್ಬಂದಿಗಳ ತೀವ್ರ ಕೊರತೆ ಕಾಡುತ್ತಿತ್ತು. ರೋಗ ತಡೆಗಟ್ಟುವ ಹಾಗೂ ಚಿಕ್ಕ ಪುಟ್ಟ ವೈದ್ಯಕೀಯ ಸೇವೆ ನೀಡಲು ಹೆಚ್ಚಿನ ವೈದ್ಯಕೀಯ ತರಬೇತಿ ಪಡೆಯದ, ಕನಿಷ್ಠ ಸಂಬಳ ಪಡೆಯುವ ಅಂಗನವಾಡಿ ಹಾಗೂ ಕಾರ್ಯಕರ್ತೆಯರನ್ನು ಬಳಸಿಕೊಳ್ಳಲಾಯಿತು.

ಕೊವಿಡ್ ದಾಳಿಗಿಂತ ಮೊದಲೇ ಸಿಬ್ಬಂದಿಗಳ ಕೊರತೆಯಿಂದ ನಲಗುತ್ತಿತ್ತು ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಇರುವ ಸಿಬ್ಬಂದಿಗಳೂ ಕೊವಿಡ್ ತಡೆಗಟ್ಟುವ ಕಾರ್ಯದಲ್ಲಿ ತೊಡಗಿದಾಗ ಸರ್ಕಾರದ ಹತ್ತು ಹಲವು ರಾಷ್ಟ್ರೀಯ ಯೋಜನೆಗಳ ಅನುಷ್ಠಾನಕ್ಕೆ ಹಿನ್ನಡೆಯಾಯಿತು. ಜನಸಾಮಾನ್ಯರ ಇತರ ಖಾಯಿಲೆಗಳಿಗೆ ಸರ್ಕಾರದ ಹಾಗೂ ಖಾಸಗಿ ವೈದ್ಯಕೀಯ ಸೇವೆ ಸಿಗುವುದು ಕಷ್ಟವಾಯಿತು. ಹೀಗಾಗಿ ಹಲವು ರೋಗಿಗಳು ಉಲ್ಬಣಿಸಿದ ಕಾಯಿಲೆಯಿಂದ ನರಳುವಂತಾಯಿತು. ಇತರ ರೋಗಗಳಿಂದ ಉಂಟಾದ ತುರ್ತು ಪರಿಸ್ಥಿತಿಯಿಂದ ಮರಣದ ಪ್ರಮಾಣ ಹೆಚ್ಚಿತು.

ಕೊವಿಡ್ ಕಾಲದ ಕಠಿಣ ಲಾಕ್‌ಡೌನ್‌ನಿಂದಾಗಿ ಮನೆಯಲ್ಲಿ ಜನರು ಬಂಧಿಗಳಾದಾಗ, ಆ ಸಮಯದಲ್ಲಿ ಹೆಚ್ಚಿದ ಮಕ್ಕಳ ಹಾಗೂ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ದೈಹಿಕ ಹಿಂಸೆಗಳಿಂದ, ಹೆಚ್ಚಿದ ನಿರುದ್ಯೋಗ ಹಾಗೂ ಭವಿಷ್ಯದ ಜೀವನದ ಚಿಂತೆಯಿಂದ ಜನರ ಮಾನಸಿಕ ಕಾಯಿಲೆಗಳು ಹೆಚ್ಚಳಗೊಂಡವು. ಸರ್ಕಾರ ಜನರ ಆರೋಗ್ಯ ರಕ್ಷಣೆಯ ಬಗ್ಗೆ ಅಸಡ್ಡೆ ತೋರಿಸದೆ, ಎಲ್ಲಾ ಮೂರು ಹಂತಗಳ ಸಾರ್ವಜನಿಕ ಆರೋಗ್ಯ ಸೇವೆಯ ಸಮತೋಮುಖ ಅಭಿವೃದ್ಧಿಗೆ ತೊಡಗಿದರೆ ಮಾತ್ರ ಯಾವುದೇ ಮಹಾ ಆರೋಗ್ಯ ಸಮಸ್ಯೆಯನ್ನೂ ಫಲಪ್ರದವಾಗಿ ನಿಭಾಯಿಸಬಲ್ಲದು.

ವಿಭಜನಕಾರೀ ಧೋರಣೆಗಳ ಬದಲು ಕೊವಿಡ್ ವಿರುದ್ಧ ಸಮರಕ್ಕೆ, ಜನಗಳಿಗೆ ಪರಿಹಾರಕ್ಕೆ ಗಮನ ಕೇಂದ್ರೀಕರಿಸಿ

ಸಂಸದ್ ಅಧಿವೇಶನದ ವೇಳೆಯಲ್ಲಿ ರಾಷ್ಟ್ರೀಯ ಪ್ರತಿಭಟನೆಗೆ ಸಿಪಿಐ (ಎಂ) ಕರೆ

ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿರುವಾಗ ಸಪ್ಟಂಬರ್ 17ರಿಂದ 22 ರ ವರೆಗೆ ಒಂದು ರಾಷ್ಟ್ರೀಯ ಮಟ್ಟದ ಪ್ರತಿಭಟನಾ ಕಾರ್ಯಕ್ರಮವನ್ನು ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನಿರ್ಧರಿಸಿದೆ.

ಈ ಕಾರ್ಯಕ್ರಮದಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಸುತ್ತಿರುವುದು, ಅಲ್ಪಸಂಖ್ಯಾತರ ಮೇಲೆ ಗುರಿಯಿಡುವುದು, ನಮ್ಮ ಜನಗಳ ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ಮೇಲೆ ವ್ಯಾಪಕ ದಾಳಿಗಳು, ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಇತರ ಅಂಚಿಗೆ ತಳ್ಳಲ್ಪಟ್ಟ ವಿಭಾಗಗಳ ಮೇಲೆ ಮಾಡುತ್ತಿರುವ ಅಮಾನುಷ ಹಲ್ಲೆಗಳು, ಖಾಸಗೀಕರಣದ ಮೂಲಕ ರಾಷ್ಟ್ರೀಯ ಆಸ್ತಿಗಳ ಲೂಟಿ ಮತ್ತು ಕಾರ್ಮಿಕ ಕಾನೂನುಗಳ ರದ್ಧತಿ ಮುಂತಾದ ಪ್ರಶ್ನೆಗಳನ್ನು, ಬಿಜೆಪಿ ಕೇಂದ್ರ ಸರಕಾರ ಜನಗಳ ತಕ್ಷಣದ ಅಗತ್ಯಗಳನ್ನು ತುರ್ತಾಗಿ ಪೂರೈಸಬೇಕು ಎಂಬುದರ ಜೊತೆಗೆ ಎತ್ತಿ ತೋರಲಾಗುವುದು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಪ್ರಚಾರಾಂದೋಲನ ಈ ಕೆಳಗಿನ ಪ್ರಶ್ನೆಗಳ ಮೇಲೆ ಗಮನ ಕೇಂದ್ರೀಕರಿಸುತ್ತದೆ ಎಂದಿದೆ.

1. ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಎಲ್ಲ ಕುಟುಂಬಗಳಿಗೆ ತಕ್ಷಣದಿಂದಲೇ ಮುಂದಿನ ಆರು ತಿಂಗಳು ತಿಂಗಳಿಗೆ ರೂ.7500 ರಂತೆ ನಗದು ವರ್ಗಾವಣೆ ಮಾಡಬೇಕು,

2. ಆಹಾರದ ಅಗತ್ಯವಿರುವ ಎಲ್ಲರಿಗೂ ಪ್ರತಿವ್ಯಕ್ತಿಗೆ ಪ್ರತಿ ತಿಂಗಳು 10 ಕೆ.ಜಿ.ಯಂತೆ ಮುಂದಿನ ಆರು ತಿಂಗಳು ಉಚಿತವಾಗಿ ಆಹಾರಧಾನ್ಯಗಳನ್ನು ಒದಗಿಸಬೇಕು,

3. ಮನರೇಗವನ್ನು ವಿಸ್ತರಿಸಿ ಒಂದು ವರ್ಷದಲ್ಲಿ ಕನಿಷ್ಟ 200 ದಿನಗಳ ಕೆಲಸವನ್ನು ಹೆಚ್ಚಿಸಿದ ಕೂಲಿಯಲ್ಲಿ ಖಾತ್ರಿಪಡಿಸಬೇಕು, ಒಂದು ನಗರಪ್ರದೇಶ ಉದ್ಯೋಗ ಖಾತ್ರಿ ಕಾಯ್ದೆಯನ್ನು ತರಬೇಕು ಮತ್ತು ನಿರುದ್ಯೋಗ ಭತ್ಯೆಯನ್ನು ಎಲ್ಲ ನಿರುದ್ಯೋಗಿಗಳಿಗೆ ಪ್ರಕಟಿಸಬೇಕು.

4. ಭಾರತೀಯ ಸಂವಿಧಾನವನ್ನು ಮತ್ತು ಅದರ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಮೂಲಭೂತ ಖಾತ್ರಿಗಳನ್ನು ರಕ್ಷಿಸಿಕೊಳ್ಳುವುದು.

ಸಪ್ಟಂಬರ್ 12ರಂದು ಪೊಲಿಟ್ ಬ್ಯುರೋದ ಆನ್‌ಲೈನ್ ಸಭೆಯ ನಂತರ ಪ್ರಕಟಿಸಿರುವ ಪೊಲಿಟ್‌ಬ್ಯುರೊ ಹೇಳಿಕೆಯಲ್ಲಿ ಇದನ್ನು ತಿಳಿಸಲಾಗಿದೆ. ಈ ಹೇಳಿಕೆಯ ಪೂರ್ಣ ಪಾಟ ಈ ಕೆಳಗಿನಂತಿದೆ:

ಕೊವಿಡ್ ಮಹಾಸೋಂಕು–ಗಂಭೀರ ಪರಿಸ್ಥಿತಿ

ಕೊವಿಡ್ ಮಹಾಸೋಂಕು ದೇಶಾದ್ಯಂತ ರಂಪಾಟ ನಡೆಸಿದೆ. ಈಗ ಇಡೀ ಜಗತ್ತಿನಲ್ಲಿ ಪ್ರತಿದಿನ ಸೋಂಕು ತಗಲುತ್ತಿರುವವರ ಸಂಖ್ಯೆ ಭಾರತದಲ್ಲೇ ಅತಿ ಹೆಚ್ಚು ಎಂಬ ಒಂದು ಗಂಭೀರ ಸನ್ನಿವೇಶವನ್ನು ತಲುಪಿದೆ. ಆದರೆ ಕೇಂದ್ರ ಸರಕಾರ ಮತ್ತು ಪ್ರಧಾನ ಮಂತ್ರಿ ಮೋದಿ ತಮ್ಮ ಹೊಣೆಯಿಂದ ಸುಮಾರಾಗಿ ಜಾರಿಕೊಂಡೇ ಬಿಟ್ಟಿದ್ದಾರೆ, ಜನಗಳನ್ನು ಅವರ ಪಾಡಿಗೇ ಬಿಟ್ಟು ಬಿಟ್ಟಿದ್ದಾರೆ. ಈ ರಂಪಾಟ ಅಡೆ–ತಡೆಯಿಲ್ಲದೆ ಸಾಗಿರುವುದರಿಂದ ಆರೋಗ್ಯ ಸೌಕರ್ಯಗಳನ್ನು ತುರ್ತಾಗಿ ಹೆಚ್ಚಿಸಬೇಕಾಗಿದೆ, ಕೊವಿಡ್ ಮಹಾಸೋಂಕನ್ನು ಎದುರಿಸುವ ಪ್ರಯತ್ನವನ್ನು ಸೇರಿಕೊಳ್ಳುವಂತೆ ಖಾಸಗಿ ಆರೋಗ್ಯ ಸೇವೆ ಒದಗಿಸುವವರನ್ನು ಆದೇಶಿಸಬೇಕಾಗಿದೆ. ಆದರೆ ಕೇಂದ್ರ ಸರಕಾರ ಈ ನಿಟ್ಟಿನಲ್ಲಿ ಏನೂ ಮಾಡುತ್ತಿಲ್ಲ.

ತದ್ವಿರುದ್ಧವಾಗಿ, ಕೇರಳದ ಎಲ್.ಡಿ.ಎಫ್. ಸರಕಾರ ತಪಾಸಣೆಯಿಂದ ಹಿಡಿದು, ಆಸ್ಪತ್ರೆಗೆ ಸೇರಿಸುವುದು ಮತ್ತು ಶುಶ್ರೂಷೆ ಒದಗಿಸುವ ವರೆಗೆ ಎಲ್ಲವನ್ನೂ ಉಚಿತವಾಗಿ ಒದಗಿಸುತ್ತಿದೆ. ಇದರಿಂದಾಗಿ ಕೇವಲ 2ಶೇ. ರೋಗಿಗಳಷ್ಟೇ ಖಾಸಗಿ ಆಸ್ಪತ್ರೆ ಸೌಕರ್ಯಗಳನ್ನು ಬಳಸುತ್ತಿದ್ದಾರೆ. ಖಾಸಗಿ ಅಸ್ಪತ್ರೆಗಳಿಗೆ ದರಗಳನ್ನೂ ರಾಜ್ಯ ಸರಕಾರವೇ ನಿಗದಿ ಮಾಡಿದೆ.

ಕೇಂದ್ರ ಸರಕಾರ ಆಸ್ಪತ್ರೆ ಸೌಕರ್ಯಗಳನ್ನು ವಿಸ್ತರಿಸಬೇಕು ಮತ್ತು ಉಚಿತ ಶುಶ್ರೂಷೆಗೆ ವ್ಯವಸ್ಥೆ ಮಾಡಬೇಕು ಹಾಗೂ ಖಾಸಗಿ ಆರೋಗ್ಯ ಸೌಕರ್ಯಗಳಿಗೆ ತರ್ಲಬದ್ಧ ದರಗಳನ್ನು ನಿಗದಿ ಮಾಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಆರ್ಥಿಕ ವಿಧ್ವಂಸ:

ಕೊವಿಡ್ ಬಂದೆರಗುವ ಎಷ್ಟೋ ಮೊದಲೇ ಭಾರತೀಯು ಅರ್ಥವ್ಯವಸ್ಥೆಯಲ್ಲಿ ನೋಟುರದ್ಧತಿ ಮತ್ತು ಜಿಎಸ್‌ಟಿ ಜಾರಿಯೊಂದಿಗೆ ಆರಂಭವಾಗಿದ್ದ ವಿಧ್ವಂಸ ಎಷ್ಟರ ವರೆಗೆ ಹದಗೆಟ್ಟಿದೆಯೆಂದರೆ ಜಗತ್ತಿನ ಎಲ್ಲ ಪ್ರಮುಖ ಅರ್ಥವ್ಯವಸ್ಥೆಗಳಲ್ಲಿ ಭಾರತವೇ, ಎಪ್ರಿಲ್–ಜೂನ್ 2020ರ ತ್ರೈಮಾಸಿಕದಲ್ಲಿ ಜಿಡಿಪಿ ಬೆಳವಣಿಗೆಯಲ್ಲಿ ಅತ್ಯಂತ ಕೆಟ್ಟ ಪತನವನ್ನು ಕಂಡಿದೆ, (–) 23.9ಶೇ.ಕ್ಕೆ ಕುಸಿದಿದೆ.

ಇದರಿಂದಾಗಿ ನಿರುದ್ಯೋಗ ನಾಗಾಲೋಟ ಹೂಡಿದೆ, ಸಂಬಳದಾರರಲ್ಲಿಯೂ 2.1 ಕೋಟಿ ಮಂದಿ ಉದ್ಯೋಗ ಕಳಕೊಂಡಿದ್ದಾರೆ. ಇದು ಕೋಟ್ಯಂತರ ಭಾರತೀಯರನ್ನು ಪಾಪರುಗಳಾಗಿ ಮಾಡಿ ಅವರ ನೋವನ್ನು, ಸಂಕಟಗಳನ್ನು ಮತ್ತಷ್ಟು ಹೆಚ್ಚಿಸಿದೆ.

ಇದರ ಮೇಲೆ ಬೆನ್ನು ಮುರಿಯುವ ಬೆಲೆಯೇರಿಕೆಗಳು, ನಿರ್ದಿಷ್ಟವಾಗಿ ಆಹಾರ, ತರಕಾರಿ, ಹೈನು ಉತ್ಪನ್ನಗಳು ಮತ್ತು ಇಂಧನ ಮುಂತಾದ ಅಗತ್ಯ ಸಾಮಗ್ರಿಗಳ ಬೆಲೆಯೇರಿಕೆಗಳ ಹೊರೆ ಬಿದ್ದಿದೆ.

ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) ಈ ಕೆಳಗಿನ ಆಗ್ರಹಗಳನ್ನು ಮಾಡಿದೆ:

* ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಎಲ್ಲ ಕುಟುಂಬಗಳಿಗೆ ತಕ್ಷಣದಿಂದಲೇ ಮುಂದಿನ ಆರು ತಿಂಗಳು ತಿಂಗಳಿಗೆ ರೂ.7500 ರಂತೆ ನಗದು ವರ್ಗಾವಣೆ ಮಾಡಬೇಕು,
* ಆಹಾರದ ಅಗತ್ಯವಿರುವ ಎಲ್ಲರಿಗೂ ಪ್ರತಿವ್ಯಕ್ತಿಗೆ ಪ್ರತಿ ತಿಂಗಳು 10 ಕೆ.ಜಿ.ಯಂತೆ ಮುಂದಿನ ಆರು ತಿಂಗಳು ಉಚಿತವಾಗಿ ಆಹಾರಧಾನ್ಯಗಳನ್ನು ಒದಗಿಸಬೇಕು,
* ಮನರೇಗವನ್ನು ವಿಸ್ತರಿಸಿ ಒಂದು ವರ್ಷದಲ್ಲಿ ಕನಿಷ್ಟ 200 ದಿನಗಳ ಕೆಲಸವನ್ನು ಹೆಚ್ಚಿಸಿದ ಕೂಲಿಯಲ್ಲಿ ಖಾತ್ರಿಪಡಿಸಬೇಕು, ಒಂದು ನಗರಪ್ರದೇಶ ಉದ್ಯೋಗ ಖಾತ್ರಿ ಕಾಯ್ದೆಯನ್ನು ತರಬೇಕು ಮತ್ತು ನಿರುದ್ಯೋಗ ಭತ್ಯೆಯನ್ನು ಎಲ್ಲ ನಿರುದ್ಯೋಗಿಗಳಿಗೆ ಪ್ರಕಟಿಸಬೇಕು.

ಕೇರಳದಲ್ಲಿ ಎಲ್.ಡಿ.ಎ???. ಸರಕಾರ ರಾಜ್ಯದಲ್ಲಿ 78 ಲಕ್ಷ ಜನಗಳಿಗೆ ಉಚಿತ ಆಹಾರ ಮತ್ತು 58 ಲಕ್ಷ ಮಂದಿಗೆ ಮಾಸಿಕ ಸಾಮಾಜಿಕ ಸುರಕ್ಷಿತತೆಯ ಪೆನ್ಶ??? ಒದಗಿಸುತ್ತಿದೆ.

ಎಲ್.ಡಿ.ಎಫ್. ಸರಕಾರ ಈ ರೀತಿಯಲ್ಲಿ ಪರಿಸ್ಥಿತಿಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿಭಾಯಿಸುತ್ತಿರುವಾಗ ಸರಕಾರವನ್ನು ಅಸ್ಥಿರಗೊಳಿಸಲು ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮತ್ತು ಬಿಜೆಪಿ ಪರಸ್ಪರ ಸಂಯೋಜನೆಯಿಂದ ಕೆಲಸ ಮಾಡುತ್ತಿವೆ, ಕೊವಿ??? ಸೋಂಕನ್ನು ಎದುರಿಸುವ ಮತ್ತು ಜನಗಳಿಗೆ ಪರಿಹಾರ ಒದಗಿಸುವ ಸರಕಾರದ ಕೆಲಸಗಳಲ್ಲಿ ಅಡಚಣೆಗಳನ್ನು ಉಂಟು ಮಾಡುತ್ತಿವೆ.

ಕೇಂದ್ರ ಸರಕಾರದ ನಿಜವಾದ ಅಜೆಂಡಾ

ಕೊವಿಡನ್ನು ಎದುರಿಸಲು ಮತ್ತು ಜನಗಳಿಗೆ ಪರಿಹಾರ ಒದಗಿಸಲು ಏಕಚಿತ್ರದಿಂದ ಗಮನ ಕೇಂದ್ರೀಕರಿಸುವ ಬದಲು ಈ ಬಿಜೆಪಿ ಕೇಂದ್ರ ಸರಕಾರ ಭಾರತೀಯ ಸಂವಿಧಾನವನ್ನು ಶಿಥಿಲಗೊಳಿಸಿ ಭಾರತೀಯ ಗಣತಂತ್ರದ ಚಾರಿತ್ರ್ಯವನ್ನೇ ಬದಲಿಸಲು ಪ್ರಯತ್ನಿಸುವ ಆರೆಸ್ಸೆಸ್ ಅಜೆಂಡಾವನ್ನೇ ಆಕ್ರಾಮಕವಾಗಿ ಅನುಸರಿಸುತ್ತಿದೆ.

ಕಳೆದ ಆರು ತಿಂಗಳಲ್ಲಿ ಸರಕಾರ ನವ–ಉದಾರವಾದಿ ಸುಧಾರಣೆಗಳನ್ನು ಆಕ್ರಾಮಕ ರೀತಿಯಲ್ಲಿ ಜಾರಿಗೊಳಿಸಲು ಹೊರಟಿದೆ; ಕೋಮುಧ್ರುವೀಕರಣವನ್ನು, ನಿರ್ದಿಷ್ಟವಾಗಿ ಮುಸ್ಲಿ??? ಅಲ್ಪಸಂಖ್ಯಾತರ ಮೇಲೆ ಗುರಿಯಿಟ್ಟು, ತೀಕ್ಷ್ಣಗೊಳಿಸಲು ಹೊರಟಿದೆ; ಅಲ್ಪಸಂಖ್ಯಾತರ, ಅಂಚಿಗೆ ತಳ್ಳಲ್ಪಟ್ಟಿರುವವರ ಹಕ್ಕುಗಳ ಮೇಲೆ ಸರ್ವಾಧಿಕಾರಶಾಹಿ ದಾಳಿಗಳನ್ನು ತೀವ್ರಗೊಳಿಸುತ್ತಿದೆ ಮತ್ತು ಈ ವಿಭಾಗಗಳ ಒಳಿತನ್ನು ಪ್ರತಿಪಾದಿಸುವ ಕಾರ್ಯಕರ್ತರನ್ನು ಕರಾಳ ಶಾಸನಗಳ ಅಡಿಯಲ್ಲಿ ಬಂಧಿಸಲಾಗುತ್ತಿದೆ; ಒಕ್ಕೂಟ ತತ್ವವನ್ನು ನಿರಾಕರಿಸಿ ಅಧಿಕಾರದ ಕೇಂದ್ರೀಕರಣ ನಡೆಯುತ್ತಿದೆ; ಎಲ್ಲ ಸ್ವತಂತ್ರ ಸಂವಿಧಾನಿಕ ಪ್ರಾಧಿಕಾರಗಳನ್ನು ಶಿಥಿಲಗೊಳಿಸಲಾಗುತ್ತಿದೆ; ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ರಾಜ್ಯ ಸರಕಾರಗಳನ್ನು, ವ್ಯಾಪಕ ಕುದುರೆ ವ್ಯಾಪಾರವೂ ಸೇರಿದಂತೆ ವಿವಿಧ ವಿಧಾನಗಳ ಮೂಲಕ ಅಸ್ಥಿರಗೊಳಿಸಲಾಗುತ್ತಿದೆ; ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಯೊಂದಿಗೆ ಭಾರತದ ಅಡಿಯಾಳು ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಲಾಗುತ್ತಿದೆ.

ಕ್ರಿಮಿನಲ್ ನ್ಯಾಯ ವ್ಯವಸ್ಥೆಯನ್ನು, ಕೇಂದ್ರ ಸರಕಾರದ ಅಡಿಯಲ್ಲಿರುವ ದಿಲ್ಲಿ ಪೋಲೀಸ್, ಎನ್‌ಐಎ, ಸಿಬಿಐ, ಇಡಿ ಮುಂತಾದವುಗಳ ನಗ್ನ ದುರುಪಯೋಗವನ್ನು, ರಾಜಕೀಯ ವಿರೋಧಿಗಳನ್ನು ರಾಕ್ಷಸರೆಂಬಂತೆ ಬಿಂಬಿಸಲಿಕ್ಕಾಗಿ ಸಂಪೂರ್ಣವಾಗಿ ಬುಡಮೇಲು ಮಾಡಲಾಗುತ್ತಿದೆ, ಇದು ಪ್ರಜಾಪ್ರಭುತ್ವದ ಮೇಲೆ ಪೂರ್ಣ ಪ್ರಮಾಣದ ದಾಳಿಯ ಸಂಕೇತ.

ಸುಳ್ಳು ಆರೋಪಗಳ ಮೇಲೆ ಮುಗ್ಧ ಅಲ್ಪಸಂಖ್ಯಾತರನ್ನು, ಜನಗಳ, ವಿಶೇಷವಾಗಿ, ದಲಿತರು/ಬುಡಕಟ್ಟುಗಳು ಜನಗಳು ಮುಂತಾದಅಂಚಿಗೆ ತಳ್ಳಟ್ಟಿರುವ ಜನಗಳ ಹಕ್ಕುಗಳನ್ನು ಪ್ರತಿಪಾದಿಸುವ ಸಕ್ರಿಯ ಕಾರ್ಯಕರ್ತರನ್ನು ಯು.ಎ.ಪಿ.ಎ, ಎನ್.ಎಸ್.ಎ, ರಾಜದ್ರೋಹ ಕಾಯ್ದೆಯಂತಹ ಕರಾಳ ಕಾನೂನುಗಳ ಅಡಿಯಲ್ಲಿ ಬಂಧಿಸುವುದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ರಾಜ್ಯಗಳ ಹಕ್ಕುಗಳು

ಈ ಬಿಜೆಪಿ ಕೇಂದ್ರ ಸರಕಾರ ಅವಿರತವಾಗಿ ಎಲ್ಲ ಅಧಿಕಾರ, ಪ್ರಾಧಿಕಾರದ ಕೇಂದ್ರೀಕರಣದ ಧಾವಂತವನ್ನು ತೀವ್ರಗೊಳಿಸುತ್ತಿದೆ. ಕೇಂದ್ರ ಸರಕಾರ ರಾಜ್ಯಗಳಿಗೆ ಕಾನೂನು ಪ್ರಕಾರ ಸಲ್ಲತಕ್ಕ ಜಿ.ಎಸ್.ಟಿ. ಬಾಕಿಗಳನ್ನು ತೆರಲು, ಅಗತ್ಯವಿದ್ದರೆ ರಿಜರ್ವ್ ಬ್ಯಾಂಕಿನಿಂದ ಸಾಲ ಮಾಡಿ, ಕೊಡಬೇಕು ಎಂಬ ತನ್ನ ನಿಲುವನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ. ಕೇಂದ್ರ ಸರಕಾರ, ಕೊವಿಡ್ ವಿರುದ್ಧ ಸಮರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಸರಕಾರಗಳಿಗೆ ಹೆಚ್ಚುವರಿ ಸಂಪನ್ಮೂಲಗಳನ್ನು ವರ್ಗಾಯಿಸಬೇಕು.

ಜಮ್ಮು ಮತ್ತು ಕಾಶ್ಮೀರ

ಈ ರಾಜ್ಯದಲ್ಲಿ ಆಗಸ್ಟ್ 2019ರಲ್ಲಿ ರಾಜಕೀಯ ಲಾಕ್ ಡೌನ್ ಹಾಕಿದ ನಂತರ ಮೊದಲ ಬಾರಿಗೆ ಆರು ಮುಖ್ಯಧಾರೆಯ ರಾಜಕೀಯ ಪಕ್ಷಗಳ ಸಭೆ ನಡೆದು ಒಂದು ಘೋಷಣೆಯನ್ನು ಅಂಗೀಕರಿಸಿರುವುದನ್ನು ಪೊಲಿಟ್‌ಬ್ಯುರೊ ಸ್ವಾಗತಿಸಿದೆ. ಸಾಮಾನ್ಯ ರಾಜಕೀಯ ಚಟುವಟಿಕೆಗಳನ್ನು, ರಾಜ್ಯದ ಸ್ಥಾನಮಾನವನ್ನು ಹಾಗೂ ಕಲಮು 370ನ್ನು ಮರುಸ್ಥಾಪಿಸಬೇಕು ಎಂದು ಈ ಘೋಷಣೆ ಆಗ್ರಹಿಸಿದೆ.

ಮಾಜಿ ಮುಖ್ಯಮಂತ್ರಿ ಮೆಹಬೂಬ ಮುಫ್ತಿ ಸೇರಿದಂತೆ ಎಲ್ಲ ನಿರ್ಬಂಧಿತರನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ಸಾರ್ವಜನಿಕ ಸಾರಿಗೆ ಮತ್ತು ಇತರ ಸೇವೆಗಳೊಂದಿಗೆ ಸಂಪೂರ್ಣ ಸಂಪರ್ಕಗಳನ್ನು ಮತ್ತೆ ಸ್ಥಾಪಿಸಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಭಾರತ–ಚೀನಾ ಎದುರಾಟ

ಭಾರತ ಮತ್ತು ಚೀನಾದ ವಿದೇಶಾಂಗ ಮಂತ್ರಿಗಳ ನಡುವೆ ಸಪ್ಟಂಬರ್ 11ರಂದು ಮಾಸ್ಕೋದಲ್ಲಿ ನಡೆದ ಸಭೆಯ ಫಲಿತಾಂಶವಾಗಿ ಒಂದು ಜಂಟಿ ಹೇಳಿಕೆ ಪ್ರಕಟವಾಗಿದೆ. ಇದರಲ್ಲಿ 'ವಾಸ್ತವ ಹತೋಟಿ ರೇಖೆ'(ಎಲ್.ಎ.ಸಿ) ಮೇಲೆ ಘರ್ಷಣೆಯನ್ನು ನಿಲ್ಲಿಸಬೇಕು, ಹಿಂದಕ್ಕೆ ಸರಿಯಬೇಕು ಎಂದು ಕರೆ ನೀಡಲಾಗಿದೆ. ರಾಜತಾಂತ್ರಿಕ ಮತ್ತು ಮಿಲಿಟರಿ ಮಟ್ಟದ ಸಂವಾದಗಳ ಮೂಲಕ ಒಂದು ಶಾಂತಿಯುತ ಇತ್ಯರ್ಥಕ್ಕೆ ಬರಲು ಪ್ರಯತ್ನಗಳು ಮುಂದುವರೆಯುತ್ತವೆ ಎಂದು ಘೋಷಿಸಲಾಗಿದೆ ಮತ್ತು "ಭಿನ್ನಾಭಿಪ್ರಾಯಗಳು ವಿವಾದಗಳಾಗಬಾರದು" ಎಂಬುದನ್ನು ಪುನರುಚ್ಚರಿಸಲಾಗಿದೆ.

ನಮ್ಮ ಸೈನಿಕರ ಸಾವಿಗೆ ಕಾರಣವಾದ ಜೂನ್ 15ರ ತಿಕ್ಕಾಟದ ನಂತರ, ಇತ್ತೀಚೆಗೆ ಎರಡೂ ಕಡೆಗಳಿಂದ ಗಾಳಿಯಲ್ಲಿ ಗುಂಡು ಹಾರಾಟ ವರದಿಯಾಗಿದೆ. ಇದು 45 ವರ್ಷಗಳ ನಂತರ ನಡೆಯುತ್ತಿದೆ. ಪರಿಸ್ಥಿತಿಯಲ್ಲಿ ಉದ್ವೇಗವಿದೆ, ಅದು ಗಂಭೀರವಾಗಿದೆ, ಅದನ್ನು ಸಡಿಲಗೊಳಿಸಬೇಕಾಗಿದೆ. ರಾಜತಾಂತ್ರಿಕ ಮತ್ತು ಮಿಲಿಟರಿ ಮಾತುಕತೆಗಳ ಮೂಲಕ ಶಾಂತಿಯುತ ಇತ್ಯರ್ಥದ ನಿಲುವಿಗೆ ಸಿಪಿಐ(ಎಂ) ಬದ್ಧವಾಗಿದೆ.

ಸಂಸತ್ತಿನ ಮಳೆಗಾಲದ ಅಧಿವೇಶನ

ಸರಕಾರ ಈ ಲಾಕ್‌ಡೌನಿನ ಅವಧಿಯಲ್ಲಿ ಹನ್ನೊಂದು ಸುಗ್ರೀವಾಜ್ಞೆಗಳನ್ನು ಹೊರಡಿಸಿರುವುದನ್ನು ಸಿಪಿಐ(ಎಂ) ವಿರೋಧಿಸಿದೆ. ಇವುಗಳಲ್ಲಿ ಕೆಲವು, ನಿರ್ದಿಷ್ಟವಾಗಿ ಕೃಷಿಗೆ ಸಂಬಂಧಪಟ್ಟವುಗಳು ನಮ್ಮ ರೈತರಿಗೆ, ಭಾರತೀಯ ಕೃಷಿಗೆ ಮತ್ತು ಭಾರತದ ಆರ್ಥಿಕ ಸಾರ್ವಭೌಮತೆಗೆ ಅತ್ಯಂತ ಅಪಾಯಕಾರಿ ಮತ್ತು ಹಾನಿಕಾರಕವಾಗಿರುವಂತವುಗಳು. ಸಿಪಿಐ(ಎಂ) ಈ ಸುಗ್ರೀವಾಜ್ಞೆಗಳನ್ನು ವಿರೋಧಿಸುವ ಮತ್ತು ಅವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸುವ ಠರಾವುಗಳ ಬಗ್ಗೆ ನೋಟಿಸನ್ನು ಸಂಸತ್ತಿನ ಎರಡೂ ಸದನಗಳಲ್ಲಿ ಸಲ್ಲಿಸಿದೆ.

ಜನಗಳ ಮತ್ತು ದೇಶಗಳ ಹಿತದಲ್ಲಿ ಇಲ್ಲ ಎಂದು ಸಿಪಿಐ(ಎಂ) ವಿರೋಧಿಸುತ್ತಿರುವ ಪ್ರಮುಖ ಧೋರಣಾ ನಿರ್ಣಯಗಳನ್ನು, ಹೊಸ ಶಿಕ್ಷಣ ನೀತಿ, ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಮಿಷನ್ ಮತ್ತು ವೈಯಕ್ತಿಕ ದತ್ತಾಂಶಗಳ ರಕ್ಷಣೆಯನ್ನು ನಿರಾಕರಿಸುವ ಇದಕ್ಕೆ ಸಂಬಂಧಪಟ್ಟ ಕಾರ್ಯಕ್ರಮಗಳು ಮತ್ತು ಆರೋಗ್ಯಪಾಲನೆಯ ಖಾಸಗೀಕರಣ, ಪರಿಸರ ಪರಿಣಾಮ ನಿರ್ಧಾರಣೆ ಮತ್ತು ಹೊಸ ಗಣಿಗಾರಿಕೆ ನಿಬಂಧನೆಗಳು ಮುಂತಾದವುಗಳ ಜಾರಿಯ ಮೊದಲು ಅವನ್ನು ಆಮೂಲಾಗ್ರವಾಗಿ ಚರ್ಚಿಸಬೇಕು ಮತ್ತು ಸಂಸತ್ತು ಪರೀಕ್ಷಣೆಗೊಳಪಡಿಸಬೇಕು ಎಂದು ಪಕ್ಷದ ಸಂಸತ್ ಸದಸ್ಯರು ಒತ್ತಾಯಿಸುತ್ತಾರೆ ಎಂದು ಪೊಲಿಟ್ ಬ್ಯುರೊ ನಿರ್ಧರಿಸಿದೆ.

ಸಿಪಿಐ(ಎಂ) ಈಗಾಗಲೇ ಬಿಜೆಪಿ–ಫೇಸ್‌ಬುಕ್ ನಂಟಿನ ಪ್ರಶ್ನೆಯನ್ನು ಎತ್ತಿದೆ ಮತ್ತು ಈ ಬಗ್ಗೆ ಜಂಟಿ ಸಂಸದೀಯ ಸಮಿತಿಯಿಂದ ಸೇರಿದಂತೆ ಒಂದು ಆಮೂಲಾಗ್ರ ತನಿಖೆಯಾಗಬೇಕು ಎಂದು ಆಗ್ರಹಿಸಿದೆ.

ಶತಮಾನೋತ್ಸವ ಲೇಖನಮಾಲೆ-44

ಕಾರ್ಮಿಕ ಸಂಘಗಳಲ್ಲಿ ಪಕ್ಷದ ಕೆಲಸ ಕುರಿತು 1952 ರ ಸಮಾವೇಶ

ಕಮ್ಯುನಿಸ್ಟ್ ಪಕ್ಷವು ಸ್ಥಾಪನೆಯಾದ ನಂತರ ಮೊಟ್ಟಮೊದಲ ಬಾರಿಗೆ ಕಾನೂನುಬದ್ಧವಾಗಿ ಕಾರ್ಯನಿರ್ವಹಿಸಲು ಅವಕಾಶ ದೊರೆತ ನಂತರ, ಕಾರ್ಮಿಕ ರಂಗದಲ್ಲಿ(ಮುಖ್ಯವಾಗಿ ಎಐಟಿಯುಸಿ, ಮತ್ತು ಇತರ ಕಾರ್ಮಿಕ ಸಂಘಗಳಲ್ಲಿ ಕೂಡ) ಕೆಲಸ ಮಾಡುತ್ತಿದ್ದ ಪಕ್ಷದ ಕಾರ್ಯಕರ್ತರ ಒಂದು ಸಮಾವೇಶವನ್ನು ಸಂಘಟಿಸಲಾಯಿತು. 1952 ರಲ್ಲಿ ಎರಡು ದಿನ ಕಲ್ಕತ್ತಾದಲ್ಲಿ ನಡೆದ ಸಮಾವೇಶದಲ್ಲಿ ಸುಮಾರು 300 ಸಂಗಾತಿಗಳು ಭಾಗವಹಿಸಿದರು, ಅಲ್ಲಿ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಪಕ್ಷದ ಧೋರಣೆ ಮತ್ತು ಕಾರ್ಮಿಕ ರಂಗದಲ್ಲಿ ಕೆಲಸ ಮಾಡುವಾಗ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಚರ್ಚೆ ನಡೆದು ತೀರ್ಮಾನಿಸಲಾಯಿತು ಮತ್ತು ಕೆಲವು ನಿರ್ದೇಶನಗಳನ್ನು ನೀಡಲಾಯಿತು. ಆ ಸಮಾವೇಶದಲ್ಲಿ ಅಂಗೀಕರಿಸಲಾದ ದಸ್ತಾವೇಜಿನ ಕೆಲವು ಅಂಶಗಳನ್ನು ಈ ಕೆಳಗೆ ನೀಡಲಾಗಿದೆ:

ಕನ್ನಡಕ್ಕೆ: ಟಿ.ಸುರೇಂದ್ರ ರಾವ್

"ನಮ್ಮ ಕಾರ್ಮಿಕ ಸಂಘದ ಕಾರ್ಯನಿರ್ವಾಹಕರು ಕೊನೇ ಪಕ್ಷ ನಮ್ಮ ಹೋರಾಟದ ಹಾಗೂ ಸಾಧನೆಗಳ ಸ್ಥೂಲಚಿತ್ರಣವನ್ನು ತಿಳಿದಿರಬೇಕು ಮತ್ತು ಆ ಮೂಲಕ ಕಾರ್ಮಿಕರಿಗೆ ಆತ್ಮವಿಶ್ವಾಸ, ವರ್ಗಪ್ರಜ್ಞೆ ಮತ್ತು ಗೆಲುವಿನ ಕಣ್ಣೋಟ ನೀಡಬಹುದು ಮತ್ತು ಪ್ರಸ್ತುತ ಹೋರಾಟಗಳಿಗೆ ಸಹಾಯವಾಗುವಂತೆ ಹಿಂದಿನ ಅನುಭವಗಳನ್ನು ಚಿತ್ರಿಸಬಹುದು. . . .ನಮ್ಮ ಶತ್ರು ಇತಿಹಾಸವನ್ನು ತಿರುಚುತ್ತಾನೆ ಮತ್ತು ಕಾರ್ಮಿಕನ ದಾರಿ ತಪ್ಪಿಸುತ್ತಾನೆ. ಈ ತಿರುಚುವಿಕೆಯನ್ನು ಎದುರಿಸಲು ನಮಗೆ ಸಾಧ್ಯವಾಗಬೇಕು.

"ನಮ್ಮ ಕಾರ್ಮಿಕರು ಉತ್ಪಾದಿಸುವ ಉತ್ಪನ್ನಗಳ ಮಾರುಕಟ್ಟೆಯನ್ನು, ಅಲ್ಲಿ ಅವುಗಳ ಬೆಲೆಯನ್ನು, ಅವುಗಳ ಏರಿಳಿಕೆಯ ಕಾರಣಗಳನ್ನು ನಮ್ಮ ಕಾರ್ಮಿಕ ಸಂಘದ ಕಾರ್ಯನಿರ್ವಾಹಕ ತಿಳಿದಿರಬೇಕು. ಅದರ ಅವಶ್ಯಕತೆ ಏಕಿದೆಯೆಂದರೆ ಬೆಲೆ ಏರಿಕೆಗೆ ನಮ್ಮ ಸಂಬಳಗಳೇ ಕಾರಣ ಎಂದು ಕಾರ್ಮಿಕನ ವಿರುದ್ಧ ಸಾರ್ವಜನಿಕ ಗ್ರಾಹಕರನ್ನು ಎತ್ತಿಕಟ್ಟಲು ಮತ್ತು ಪಟ್ಟಣಗಳ ಕಾರ್ಮಿಕರು ಹಾಗೂ ಗ್ರಾಮೀಣ ಪ್ರದೇಶದ ರೈತರ ನಡುವೆ ವೈಷಮ್ಯವನ್ನು ಹುಟ್ಟುಹಾಕಲು ಸರ್ಕಾರ ಹಾಗೂ ಬಂಡವಾಳಶಾಹಿಗಳು ಪ್ರಯತ್ನಿಸುತ್ತಾರೆ.

"ನಮ್ಮ ಕಾರ್ಮಿಕ ಸಂಘದ ಕಾರ್ಯನಿರ್ವಾಹಕರು ಕನಿಷ್ಠ ಪಕ್ಷ ತಾವು ನಡೆಸುತ್ತಿರುವ ಸಂಘದ ಉದ್ದಿಮೆಯ ಮೂಲ ತಾಂತ್ರಿಕ ವಿವರಗಳನ್ನು ತಿಳಿದುಕೊಂಡಿರಬೇಕು; ಈ ಮೂಲಕ ಸಂಬಳಗಳು ಹಾಗೂ ಕೆಲಸದ ಹೊರೆ, ಕೆಲಸದ ವೇಗ ಹಾಗೂ ಕೂಲಿಯ ದರ ಮುಂತಾದ ಪ್ರಶ್ನೆಗಳ ಬಗ್ಗೆ ಸರಿಯಾಗಿ ಅರಿಯಬಹುದು ಮತ್ತು ಅವುಗಳನ್ನು ಯಥಾರ್ಥವಾಗಿ ನಿರೂಪಿಸಬಹುದು. ಆ ಉದ್ದಿಮೆಯಲ್ಲಿರುವ ಕಾರ್ಮಿಕನೇ ಈ ವಿಷಯದಲ್ಲಿ ನಿಜವಾದ ಶಿಕ್ಷಕ. ಆ ಕಾರ್ಮಿಕನಿಂದ ಕಲಿಯುವುದನ್ನು ನಾವು ಕಡೆಗಣಿಸಬಾರದು.

"ಕೈಗಾರಿಕಾ ವಿಷಯಗಳ ಕಾನೂನನ್ನು ಅನ್ವಯಿಸುವ ಬಗ್ಗೆ ಕೂಡ ನಮ್ಮ ಕಾರ್ಮಿಕ ಸಂಘದ ಕಾರ್ಯನಿರ್ವಾಹಕರು ಗಂಭೀರವಾದ ಗಮನವನ್ನು ನೀಡಲೇಬೇಕು. ಎಲ್ಲಾ ಕಾನೂನುಗಳು ಕಾರ್ಮಿಕ ವರ್ಗದ ಮೇಲೆ ದಾಳಿ ಮಾಡುತ್ತವೆ ಎಂದು ಭಾವಿಸುವ, ಒಟ್ಟಾರೆಯಾಗಿ ಅವುಗಳ ವಿರುದ್ಧ ಹೋರಾಡುವುದು ಬಿಟ್ಟು ಬೇರೇನೂ ಗಮನ ನೀಡುವ ಅಗತ್ಯವಿಲ್ಲ ಎಂಬ ಪ್ರವೃತ್ತಿ ಇದೆ. ಆದರೆ ಎರಡು ರೀತಿಯ ಕಾನೂನುಗಳಿವೆ ಎನ್ನುವುದನ್ನು ಮರೆಯಲಾಗಿದೆ. ಒಂದು ನಾವು ಗಳಿಸಿರುವಂತವುಗಳು, ಅವುಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸುವುದು, ಅದರ ಉಸ್ತುವಾರಿ ಮಾಡುವುದು, ಮತ್ತು ಅನ್ವಯಗೊಳಿಸುವುದು ಕಾರ್ಮಿಕ ಸಂಘಗಳ ಕೆಲಸವಾಗಬೇಕು. . . ಮತ್ತು ಕಾರ್ಮಿಕ ವರ್ಗದ ಹಿತಾಸಕ್ತಿಗಳ ವಿರುದ್ಧ ಇರುವಂತಹ ಕಾನೂನುಗಳ ವಿರುದ್ಧ ಹೋರಾಡುವ ಸುತ್ತ ಕಾರ್ಮಿಕ ವರ್ಗದ ಚಳುವಳಿಯನ್ನು ನಾವು ಕಟ್ಟಬೇಕು.

"ನಮ್ಮ ಕಾರ್ಮಿಕ ಸಂಘದ ಕಾರ್ಯ ನಿರ್ವಾಹಕನು ಸಮಾಜ ಸೇವೆ, ಸಹಕಾರ ಮತ್ತು ಕಲ್ಯಾಣ ಕಾರ್ಯ, ಮತ್ತು ಕಾರ್ಮಿಕ ವರ್ಗದ ಸಾಂಸ್ಕೃತಿಕ ಅಗತ್ಯಗಳನ್ನು ಕಡೆಗಣಿಸಬಾರದು. ಅಂತಹ ಎಲ್ಲಾ ಚಟುವಟಿಕೆಗಳಿಗೆ 'ಪರಿಷ್ಕರಣವಾದಿ' ಎಂಬ ಹಣೆಪಟ್ಟಿ ಕಟ್ಟುವ ಪ್ರವೃತ್ತಿ ಇದ್ದವು ಮತ್ತು ಇವತ್ತಿಗೂ ಅವು ಅಸ್ತಿತ್ವದಲ್ಲಿವೆ. . .ಕಾರ್ಮಿಕರಿಗೆ ಉತ್ತಮ ಮನರಂಜನೆ, ಒಳ್ಳೆಯ ಸಾಂಸ್ಕೃತಿಕ ಶಿಕ್ಷಣವನ್ನು ಸಂಘಟಿಸುವುದು ಕಾರ್ಮಿಕ ಸಂಘದ ಕೆಲಸವಾಗಿದೆ.

"ತನ್ನ ಕಾರ್ಮಿಕ ಸಂಘ ಹಾಗೂ ಉದ್ದಿಮೆಯಲ್ಲಿನ ಕಾರ್ಮಿಕರ ಜಾತಿ ಹಾಗೂ ರಾಷ್ಟ್ರೀಯತೆಯ ಮನೋಭಾವ, ಅವರ ಸಂಪ್ರದಾಯ ಮತ್ತು ಪರಂಪರೆಗಳು, ಬದುಕಿನ ಬಗೆಗಿನ ಅವರ ಧೋರಣೆ ಮತ್ತು ಜಾತಿ, ಕೋಮು, ಬುಡಕಟ್ಟು ಮತ್ತು ಭಾಷಾ ರಾಷ್ಟ್ರೀಯ ಕಲ್ಪನೆಗಳನ್ನು ಬಳಸಿ ಬಂಡವಾಳಶಾಹಿಯು ಹುಟ್ಟುಹಾಕುವ ವೈಷಮ್ಯಗಳ ಬಗ್ಗೆ ನಮ್ಮ ಕಾರ್ಮಿಕ ಸಂಘದ ಕಾರ್ಯ ನರ್ವಾಹಕ ತಿಳಿದಿರಬೇಕು.

"ಬಂಡವಾಳಶಾಹಿಯ ದುಡಿಮೆಯ ಚಕ್ರದಡಿ ಕಾರ್ಖಾನೆಗೆ ಬರುವ ಕಾರ್ಮಿಕನು, ಅವನ ಜತೆಯಲ್ಲಿ ತನ್ನ ಬುಡಕಟ್ಟು, ಜಾತಿ, ಹಳ್ಳಿ, ಧರ್ಮ ಮುಂತಾದ ನಿಷ್ಠೆ ಹಾಗೂ ತನ್ನೆಲ್ಲಾ ಭಾವನಾತ್ಮಕ ಕಲ್ಪನೆಗಳನ್ನು, ಸಂಪ್ರದಾಯಗಳನ್ನು, ಪರಂಪರೆಗಳನ್ನು ಹೊತ್ತು ತಂದಿರುತ್ತಾನೆ. ಈ ಹೊಸ ವರ್ಗದ ನಡೆನುಡಿಗಳನ್ನು ಮೈಗೂಡಿಸಿಕೊಳ್ಳಲು ಅವನಗೆ ಬಹಳ ಕಾಲ ಹಿಡಿಯುತ್ತದೆ. ವಾಸ್ತವದಲ್ಲಿ, ಜಾತಿ, ಹಳ್ಳಿ ಅಥವಾ ರಾಷ್ಟ್ರೀಯತೆಯ ಕಟ್ಟುಪಾಡುಗಳು ಅವನ ಅನಾರೋಗ್ಯ, ಕೌಟುಂಬಿಕ ಕಷ್ಟಗಳು ಮತ್ತಿತರ ಅವಶ್ಯಕತೆಗಳ ಸಮಯದಲ್ಲಿ ಅವನ ಪರವಾಗಿ ರಕ್ಷಣೆ ಒದಗಿಸಿರುತ್ತವೆ. ತನ್ನ ಕಷ್ಟಗಳಿಗೆ ಸಂಘದತ್ತ ಮುಖ ಮಾಡುವುದನ್ನು ಕಲಿಯುವ ಮೊದಲು ಅವನು ತನ್ನ ಧಾರ್ಮಿಕ ಸಂಸ್ಥೆಗಳತ್ತ ತಿರುಗುತ್ತಾನೆ. ಅವನ ಈ ಸಂಬಂಧಗಳ ಮೌಲ್ಯಮಾಪನ ಮಾಡುವುದನ್ನು ಮತ್ತು ಅವನ ಹೊಸ ವರ್ಗದ ಅಗತ್ಯಗಳಿಗೆ ಮತ್ತು ನಿಷ್ಠೆಗಳಿಗೆ ಕತ್ತರಿ ಹಾಕದಂತೆ ಅವುಗಳನ್ನು ಹೇಗೆ ತಡೆಯಬೇಕು ಎನ್ನುವುದನ್ನು ನಾವು ಕಲಿಯಬೇಕು. ಅವನ ಶೋಷಕನು ತನ್ನೆಲ್ಲಾ ಜಾತಿ, ಬುಡಕಟ್ಟು, ರಾಷ್ಟ್ರ ಮತ್ತು ಧರ್ಮಗಳನ್ನು ಮೀರಿ ಅವನ ಮೇಲೆ ನಿಂತಿರುವಾಗ ಒಬ್ಬ ಶೋಷಿತ ಮನುಷ್ಯನಾಗಿ ಕಾರ್ಮಿಕನಲ್ಲಿ ವರ್ಗ ದೃಷ್ಟಿಕೋನ, ಸೌಹಾರ್ದ ಮತ್ತು ಕಾರ್ಮಿಕ ಸಂಘದ ಐಕ್ಯತೆಯನ್ನು ಕಟ್ಟಿ ಬೆಳೆಸುವ ಕೆಲಸಕ್ಕೆ ಆ ಕಾರ್ಮಿಕನಲ್ಲಿರುವ ಜಾತಿ, ರಾಷ್ಟ್ರ, ಬುಡಕಟ್ಟನ್ನು ಸಂಯೋಜಿಸಿಕೊಳ್ಳಲು ಸಾಧ್ಯವಾಗಬೇಕು.

"ಮಹಿಳಾ ಕಾರ್ಮಿಕರು ನಮ್ಮ ಅರ್ಥವ್ಯವಸ್ಥೆಯ ಸನ್ನಿವೇಶದಲ್ಲಿ ಕೇವಲ ಕಾರ್ಮಿಕಳಾಗಿ ಮಾತ್ರವಲ್ಲದೇ ಒಬ್ಬ ಮಹಿಳೆಯಾಗಿ, ಅವರ ಮೇಲೆ ವಿಶೇಷ ಸಂಕಷ್ಟಗಳನ್ನು ಹೊರಿಸಿರುವುದರಿಂದಾಗಿ, ಕಾರ್ಮಿಕ ಸಂಘದ ಕಾರ್ಯನಿರ್ವಾಹಕರು ಸಮಾನ ಕೆಲಸಕ್ಕೆ ಸಮಾನ ವೇತನ, ದುಡಿಯುವ ಮಹಿಳೆಯರ ಹೆರಿಗೆ ಸೌಲಭ್ಯಗಳು, ಅವರ ಮಕ್ಕಳ ಆರೈಕೆ ಮುಂತಾದ ಮಹಿಳಾ ಕಾರ್ಮಿಕರ ಸಮಸ್ಯೆಗಳ ಬಗ್ಗೆ ವಿಶೇಷ ಗಮನ ಹರಿಸಬೇಕು. ಯುವ ಕಾರ್ಮಿಕರಿಗೆ ಸಂಬಂಧಪಟ್ಟಂತೆ ಅವರ ಕೆಲಸದ ಅವಧಿಯ ನಂತರದ ತರಬೇತಿ ಕಾನೂನುಗಳು, ಶಿಕ್ಷಣ, ಕ್ರೀಡೆಗಳು ಮತ್ತಿತರ ಪ್ರಶ್ನೆಗಳ ಬಗ್ಗೆಯೂ ವಿಶೇಷ ಗಮನ ಹರಿಸಬೇಕು.

"ಉದ್ಯೋಗಿಗಳು ಮತ್ತು ನಿರುದ್ಯೋಗಿಗಳ ನಡುವಿನ ಐಕ್ಯತೆಯನ್ನು ಬೆಳೆಸಲು ನಾವು ಕಲಿಯಬೇಕು ಏಕೆಂದರೆ ಅವರಿಬ್ಬರ ಸಮಾನ ಶೋಷಕನು ತನ್ನ ಗುರಿ ಸಾಧಿಸಿಕೊಳ್ಳಲು ಅವರನ್ನು ಪರಸ್ಪರ ಎತ್ತಿಕಟ್ಟಲು ನೋಡುತ್ತಿರುತ್ತಾನೆ.

"ಕಾರ್ಮಿಕರ ಹೋರಾಟಗಳನ್ನು ಮುನ್ನಡೆಸಲು ಕಾರ್ಖಾನೆಗಳಲ್ಲಿರುವ ನಿರ್ಭೀತ ಹಾಗೂ ಸಮರಶೀಲ, ಜಾಗರೂಕ ಹಾಗೂ ಜಾಣರಾದ ಹೊಸ ಕಾರ್ಯಕರ್ತರನ್ನು ಕಾರ್ಮಿಕರ ಹೋರಾಟಗಳಿಗೆ ನೇತೃತ್ವ ನೀಡುವಂತೆ ಹೇಗೆ ಬೆಳೆಸಬೇಕು ಎನ್ನುವುದನ್ನು ನಾವು ಕಲಿಯಬೇಕು.

"ಜನಸಮೂಹಕ್ಕಿಂತ ಬಹಳ ಮುಂದೆ ಹೋಗದಿರುವುದು ಅಥವಾ ಬಹಳ ಹಿಂದೆ ಬೀಳದಿರುವುದು ಹೇಗೆ ಎನುವುದನ್ನು ನಮ್ಮ ಕಾರ್ಮಿಕ ಸಂಘದ ಕಾರ್ಯನಿರ್ವಾಹಕ ಕಲಿಯಬೇಕು. ಅನುಭವವಿಲ್ಲದ ಜನಸಮೂಹವನ್ನು ಅವನು ಕೆಲವು ಬಾರಿ ನಿಯಂತ್ರಿಸಬೇಕಾಗುತ್ತದೆ, ಮತ್ತೆ ಕೆಲವು ಬಾರಿ, ಅವರನ್ನು ಸರಿಯಾದ ಕಾರ್ಯಾಚರಣೆಗೆ ಹುರಿದಂಬಿಸಬೇಕಾಗುತ್ತದೆ.

"ಸಾಮೂಹಿಕ ಹೋರಾಟದ ತಂತ್ರಗಳನ್ನು ಹಿಂದಿನ ಅನುಭವಗಳ ಮೂಲಕ ನಮ್ಮ ಟಿ.ಯು. ಕಾರ್ಯ ನರ್ವಾಹಕ ತಿಳಿದುಕೊಳ್ಳಬೇಕು. ಹೋರಾಟಗಳ ಸ್ಥಳೀಯ ಪರಂಪರೆಗಳನ್ನು ಮತ್ತು ಅಲ್ಲಿಯ ಶಕ್ತಿಗಳನ್ನು ತಿಳಿಯಬೇಕು ಮತ್ತು ಅವರಿಂದ ಕಲಿಯಬೇಕು ಕೂಡ. ಕೆಲವು ಸಾಮಾನ್ಯ ಸಂದರ್ಭಗಳನ್ನು ಹೊರತುಪಡಿಸಿದರೆ ಹೋರಾಟದ ಸಿದ್ಧ ಮಾದರಿಯ ನಿಯಮಗಳು ಪ್ರಯೋಜನಕ್ಕೆ ಬಾರವು.

"ಕಾರ್ಖಾನೆಯು ಗ್ರಾಮೀಣ ಪ್ರದೇಶದಲ್ಲಿದ್ದರೆ ನಮ್ಮ ಟಿ.ಯು. ಕಾರ್ಯನಿರ್ವಾಹಕನು ಸುತ್ತಮುತ್ತಲಿರುವ ರೈತರನ್ನು ತಿಳಿದುಕೊಳ್ಳಬೇಕು. ಅಂತಹ ಪ್ರದೇಶಗಳಲ್ಲಿ ಕಾರ್ಮಿಕನು ಹಳ್ಳಿಯಲ್ಲಿಯೇ ಜೀವಿಸುತ್ತಾನೆ ಮತ್ತು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುತ್ತಾನೆ. ಅಂತಹ ಸಂದರ್ಭಗಳಲ್ಲಿ, ಮುಷ್ಕರದ ಹೋರಾಟಗಳು ಸುತ್ತಮುತ್ತಲ ರೈತರಿಗೆ ನೇರವಾಗಿ ತಳಕುಹಾಕಿಕೊಂಡಿರುತ್ತವೆ. ರೈತರ ಸಹಾಯವನ್ನು ಹೇಗೆ ಪಡೆದುಕೊಳ್ಳಬೇಕು ಹಾಗೂ ಅವರಿಗೆ ನಾವು ಹೇಗೆ ಸಹಾಯ ಮಾಡಬಹುದು ಎನ್ನುವುದನ್ನು ನಾವು ಕಲಿತುಕೊಳ್ಳಬೇಕು. ಸಕ್ಕರೆ ಪ್ಲಾಂಟೇಷನ್ನುಗಳಲ್ಲಿ, ಟೀ ತೋಟಗಳಲ್ಲಿ, ಗಣಿಗಾರಿಕೆಯಲ್ಲಿ ಮತ್ತು ಅಗ್ಗದ ಶ್ರಮ ಮತ್ತು ಕಡಿಮೆ ಬೆಲೆಯ ಜಮೀನು ಪಡೆಯಲು ಹೊಸ ಕಾರ್ಖಾನೆಗಳನ್ನು ಒಳನಾಡುಗಳಲ್ಲಿ ಹರಡಿಸುತ್ತಿರುವಾಗ ರೈತರ ಅನುಕಂಪ ಮತ್ತು ಅವರ ನಂಟು ಟಿ.ಯು. ಹೋರಾಟಗಳ ಯಶಸ್ಸಿಗೆ ಬಹು ಮುಖ್ಯವಾದ ಅಂಶಗಳಾಗುತ್ತವೆ.

"ಮಾರ್ಕ್ಸ್‌ವಾದದ ಒಟ್ಟಾರೆ ಜಾಗತಿಕ ಕಣ್ಣೋಟವನ್ನು ನಮ್ಮ ಟಿ.ಯು. ಕಾರ್ಯ ನರ್ವಾಹಕ ಹೊಂದಿರಬೇಕು.

"ಜನಸಮೂಹದೊಂದಿಗೆ ಸಭ್ಯವಾಗಿ ಹಾಗೂ ತಾಳ್ಮೆಯಿಂದ ಇರಬೇಕು, ತಾನೇ ಸ್ವತಃ ಅಂತ ಸಂಸ್ಕೃತಿಯನ್ನು ಬೆಳೆಸಿಕೊಳ್ಳಬೇಕು ನಮ್ಮ ಟಿ.ಯು. ಕಾರ್ಯನಿರ್ವಾಹಕ. ಶತೃಗಳೊಂದಿಗೆ ರಾಜಿ ಸಂಧಾನ ಹಾಗೂ ಮಾತುಕತೆಯ ಸಂದರ್ಭದಲ್ಲಿ ಅವರೊಂದಿಗೆ ಮಾತುಕತೆ ಮಾಡುವಾಗ ಹಾಗೂ ವ್ಯವಹರಿಸುವಾಗ ನಯನಾಜೂಕು ಹಾಗೂ ಘನತೆಯಿಂದ ನಡೆದುಕೊಳ್ಳಬೇಕು, ಅದೇ ಸಮಯದಲ್ಲಿ ತಮ್ಮ ನಿಲುವುಗಳಲ್ಲಿ ಕಟುವಾಗಿ ಮತ್ತು ದೃಢವಾಗಿರಬೇಕು. ಒರಟುತನವು ವರ್ಗ ಹೋರಾಟದ ಗುಣಲಕ್ಷಣವಲ್ಲ.

"ಅಂತಹ ಕಾರ್ಯನಿರ್ವಾಹಕನನ್ನು ಮುಂದೆ ತರುವಲ್ಲಿ ನಾವು ಯಶಸ್ವಿಯಾದರೆ ಮತ್ತು ಕಾರ್ಮಿಕರ ಹಿತಾಸಕ್ತಿಯನ್ನು ಧೈರ್ಯವಾಗಿ ಪ್ರತಿಪಾದಿಸಿದರೆ, ಹುಸಿ ಪಂಥೀಯ ಎದೆಗಾರಿಕೆಯಿಂದ ಅಥವಾ ಆತ್ಮವಿಶ್ವಾಸದ ಕೊರತೆಯ ಪರಿಷ್ಕರಣವಾದದಿಂದ ಆತುರದ ತೀರ್ಮಾನಕ್ಕೆ ಬರದಿದ್ದರೆ, ನಾವು ನಮ್ಮ ಟಿ.ಯು. ಚಳುವಳಿಯನ್ನು ಪುನಶ್ಚೇತನ ಗೊಳಿಸಬಹುದು, ಎಲ್ಲಾ ವಿಷಯಗಳ ಮೇಲೆಯೂ ಜನಹೋರಾಟಕ್ಕೆ ನಾವು ನಾಯಕತ್ವ ನೀಡಬಹುದು ಮತ್ತು ಕಾರ್ಮಿಕರ ಹಾಗೂ ಜನರ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಹಾದಿಯಲ್ಲಿ ಹೋಗಬಹುದು.

"ಈ ಕಾರ್ಯಗಳನ್ನು ಮುಂದೆ ಕೊಂಡೊಯ್ಯುವಾಗ, ಕಾರ್ಮಿಕ ವರ್ಗದ ಹಾಗೂ ಕಾರ್ಮಿಕ ಸಂಘಟನೆಗಳ ಐಕ್ಯತೆಯನ್ನು ಬೆಳೆಸುವುದು ಬಹು ಮುಖ್ಯ ಅಂಶವಾಗುತ್ತದೆ, ಜತೆಯಲ್ಲೇ ಆಳುವ ವರ್ಗಗಳ ನಡೆಗಳೇನು, ಕಾರ್ಮಿಕ ವರ್ಗದ ಹೋರಾಟಗಳು ಹಾಗೂ ಸಾಧನೆಗಳು ಮತ್ತವುಗಳ ಪಾಠಗಳೇನು ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ, ಮೇಲೆ ಹೇಳಿದಂತೆ, ಪಕ್ಷ ಮತ್ತು ಅದರ ಮುಂದಾಳತ್ವದಲ್ಲಿನ ಹಾಗೂ ನಿರ್ದೇಶನದಲ್ಲಿನ ಕಾರ್ಮಿಕ ಸಂಘಗಳು ಹೇಗೆ ಕಾರ್ಯ ನರ್ವಹಿಸಿವೆ, ಎಲ್ಲಿ ಮತ್ತು ಹೇಗೆ ಅವುಗಳು ಸರಿಯಾಗಿ ನಡೆದುಕೊಂಡಿವೆ ಮತ್ತು ಎಲ್ಲಿ ಎಡವಿವೆ ಎಂಬುದನ್ನು ತಿಳಿದುಕೊಳ್ಳುವುದೂ ಕೂಡ ಅವಶ್ಯವಾಗಿದೆ.

"ಟಿ.ಯು. ಐಕ್ಯತೆಯನ್ನು ಬೆಳೆಸುವಾಗ, ಯಾವ ಸಂಘಟನಾತ್ಮಕ ಐಕ್ಯತೆಗಾಗಿ ನಾವು ಪ್ರಯತ್ನಿಸುತ್ತಿರುತ್ತೇವೋ ಆ ಸಂಘಟನೆಗಳ ಹಾಗೂ ಅವುಗಳ ನಾಯಕತ್ವದ ಸ್ವಭಾವ ಲಕ್ಷಣಗಳನ್ನು ತಿಳಿದುಕೊಳ್ಳುವುದು ಕೂಡ ಅವಶ್ಯವಾಗಿರುತ್ತದೆ. ಕೆಳಗಿನಂದ ಮೇಲೆ ಮತ್ತು ಮೇಲಿನಂದ ಕೆಳಗೆ ಈ ಐಕ್ಯತೆಯನ್ನು ಸಾಧಿಸುವಾಗ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬ ನಯಮಗಳನ್ನು ರೂಪಿಸಬೇಕಾದ ಅವಶ್ಯಕತೆಯೂ ಇದೆ.

"ನಾವು ಎಸಗಬಹುದಾದ ತಪ್ಪುಗಳೇನು? ಜನಸಮೂಹದ ಜತೆ ಮತ್ತು ದೊಡ್ಡ ಮಟ್ಟದಲ್ಲಿ ಕಾರ್ಖಾನೆಗಳ ಒಳಗೆ ನೇರವಾಗಿ ಕೆಲಸ ಮಾಡುತ್ತಿರುವ ಸಂಘಟಿತ ಕಾರ್ಯಕರ್ತರ ಜತೆ ಜೀವಂತ ಸಂಪರ್ಕ ಇಟ್ಟುಕೊಳ್ಳದೇ ಇದ್ದರೆ ಕಾರ್ಮಿಕರ ನಾಡಿಯನ್ನು ಅರಿಯಲು ಮತ್ತು ಅವರ ನರ್ದಿಷ್ಟವಾದ ಸಂಕಟ ದುಃಖಗಳೇನು ಎಂದು ತಿಳಿಯಲು ನಮಗೆ ಸಾಧ್ಯವಾಗುವುದಿಲ್ಲ. ಆದಕಾರಣ, ತಮ್ಮ ಹೋರಾಟದಲ್ಲಿ ಮುಂದಾಳತ್ವ ವಹಿಸಲಿ ಎಂದು ಜನಸಮೂಹ ಬಯಸುವಾಗ ನಾವು ತ್ವರಿತವಾಗಿ ಸ್ಪಂದಿಸುವುದಿಲ್ಲ. ಇದನ್ನು ನಾವು ಕಾರ್ಖಾನೆಗಳಿಗೆ ಪ್ರವೇಶ ಸಿಗದಿದ್ದಾಗ ಅವರ ವಸತಿ ಪ್ರದೇಶಗಳಲ್ಲಿ ಮತ್ತು ಮಾನ್ಯತೆ ಇಲ್ಲದಿದ್ದಾಗ್ಯೂ ನಮ್ಮ ಟಿ.ಯು. ಸದಸ್ಯತ್ವದಿಂದಾಗಿ ಪ್ರವೇಶ ಪಡೆಯಲು ಸಾಧ್ಯವಾಗುವ ಕಾರ್ಖಾನೆಗಳಲ್ಲಿ ಪ್ರಾಮಾಣಿಕವಾಗಿ ಸಾಮೂಹಿಕ ಮಟ್ಟದಲ್ಲಿ ಮಾಡುವ ಮೂಲಕ ಮಾತ್ರವೇ ಸರಿಪಡಿಸಬಹುದು.

"ಎಲ್ಲಾ ಟಿ.ಯು. ಕಾರ್ಯಕರ್ತರು ಮೊಹಲ್ಲಾ–ಬಸ್ತಿ ಅಥವಾ ಕಾರ್ಖಾನೆ ಸಂಪರ್ಕಗಳ ಮೂಲಕ ಕಾರ್ಮಿಕರು, ಉದ್ಯೋಗಿಗಳು ಮತ್ತು ನರುದ್ಯೋಗಿಗಳ ಜತೆ ನಿಕಟ ಸಂಪರ್ಕ ಹೊಂದಿರಬೇಕು.

"ಕಾರ್ಮಿಕರ ಬದುಕಿನ ಎಲ್ಲಾ ಆಯಾಮಗಳನ್ನು ಒಳಗೊಂಡಂತೆ ಟಿ.ಯು.ರಂಗದಲ್ಲಿನ ದಿನನಿತ್ಯದ ಕನಿಷ್ಠ ಕೆಲಸಗಳನ್ನು ಕಾರ್ಯಕರ್ತರು ರೂಪಿಸಿಕೊಳ್ಳಬೇಕು. ಆಹಾರ ಪರಿಸ್ಥಿತಿ ಮತ್ತು ಬಿಕ್ಕಟ್ಟು ಹಾಗೂ

ಪುಟ 14 ನೋಡಿ

ವಲಸೆ ಕಾರ್ಮಿಕರ ಲೆಕ್ಕ ಇಲ್ಲ! ಸಾವುಗಳ ಲೆಕ್ಕ ಇಲ್ಲ! –ಪರಿಹಾರದ ಪ್ರಶ್ನೆಯೇ ಇಲ್ಲ!!

ಪ್ರಶ್ನೋತ್ತರ ಕಾಲ' ರದ್ದಾಗಿರುವ ಕೊವಿಡ್ ಕಾಲದ ಸಂಸತ್ ಅಧಿವೇಶನದಲ್ಲಿ ಸಂಸತ್ ಸದಸ್ಯರ ಅನಕ್ಷತ್ರಿತ(unstarred) ಪ್ರಶ್ನೆಗಳಿಗೆ ಸಿಕ್ಕ ಸರಕಾರದ ಲಿಖಿತ ಉತ್ತರಗಳಿಂದ ದೊರೆತಿರುವ ಮಾಹಿತಿ.

ಪ್ರಶ್ನೆ1: ರಾಷ್ಟ್ರೀಯ ಲಾಕ್‌ಡೌನಿನಿಂದಾಗಿ ತಮ್ಮ ರಾಜ್ಯಗಳಿಗೆ ಮರಳಿದ ವಲಸೆ ಕಾರ್ಮಿಕರ ರಾಜ್ಯವಾರು ದತ್ತಾಂಶಗಳಿವೆಯೇ?

ಉತ್ತರ: ಒಟ್ಟು 1,04,66,152 ಕಾರ್ಮಿಕರು ತಮ್ಮ ಊರುಗಳಿಗೆ ಮರಳಿದ್ದಾರೆ– ರಾಜ್ಯವಾರು ವಿವರಗಳನ್ನು ಕೊಡಲಾಗಿದೆ.

ಪ್ರಶ್ನೆ2: ಲಾಕ್‌ಡೌನಿನಿಂದಾಗಿ ತಮ್ಮ ಊರುಗಳಿಗೆ ಮರಳುವಾಗ ಪ್ರಾಣ ಕಳಕೊಂಡ/ ಗಾಯಗೊಂಡ ರಾಜ್ಯವಾರು ಸಂಖ್ಯೆ ಎಷ್ಟು?

ಉತ್ತರ: ಇಂತಹ ದತ್ತಾಂಶ ಲಭ್ಯವಿಲ್ಲ.

ಪ್ರಶ್ನೆ 3: ಸರಕಾರ ಇಂತವರ ಕುಟುಂಬಗಳಿಗೆ ಪರಿಹಾರ/ಆರ್ಥಿಕ ನೆರವು ನೀಡಿದ್ದರೆ ಅದರ ವಿವರಗಳು.

ಉತ್ತರ: ಇಂತಹ ದತ್ತಾಂಶ ಲಭ್ಯವಿಲ್ಲ.

ಪ್ರಶ್ನೆ 4: ಕೊವಿಡ್–19 ಬಿಕ್ಕಟ್ಟಿನಿಂದ ಆಗಿರುವ ಉದ್ಯೋಗ ನಷ್ಟದ ?ಅಂದಾಜನ್ನು ಸರಕಾರ ಮಾಡಿದೆಯೇ? ಮಾಡಿದ್ದರೆ ಅದರ ವಿವರಗಳು

ಉತ್ತರ: ಇಂತಹ ದತ್ತಾಂಶ ಲಭ್ಯವಿಲ್ಲ.

ಸರಕಾರದ ಬಳಿ ಪೂರ್ಣ ದತ್ತಾಂಶ ಇಲ್ಲದಿದ್ದರೂ ಅದಕ್ಕೆ ನಿಜಕ್ಕೂ ವಲಸೆ ಕಾರ್ಮಿಕರ ಬಗ್ಗೆ, ಅವರ ಕುಟುಂಬಗಳಿಗೆ ಪರಿಹಾರ ನೀಡಬೇಕೆನ್ನುವ ಕಾಳಜಿ ಇದ್ದರೆ ಆಧಾರಪೂರ್ಣ ಮಾಹಿತಿಗಳು ಭಾಗಶಃವಾದರೂ ಲಭ್ಯವಿದೆ.

ಸ್ವತಂತ್ರ ಸಂಶೋಧಕರ ಒಂದು ಗುಂಪು ಮಾಧ್ಮಮಗಳಲ್ಲಿ ಪ್ರಕಟವಾದ ನಂಬಲರ್ಹ ಸುದ್ದಿಗಳ ಆಧಾರದಲ್ಲಿ ಮಾರ್ಚ್ 19ರಿಂದ ಜುಲೈ4ರ ನಡುವೆ ಮಾಹಿತಿಗಳನ್ನು ಕಲೆ ಹಾಕಿದ್ದಾರೆ . ಸಾರ್ವಜನಿಕ ಹಿತಾಸಕ್ತಿ ತಂತ್ರಜ್ಞ ತೇಜೇಶ್ ಜಿಎನ್ ಮತ್ತು ಸಾಮಾಜಿಕ ಕಾರ್ಯಕರ್ತರು ಹಾಗೂ ಸಂಶೋಧಕರು ಕನಿಕಾ ಶರ್ಮ ಇದನ್ನು ಕಲೆ ಹಾಕಿದ್ದಾರೆ. ಅವರು ಸಂಗ್ರಹಿಸಿದ ಮಾಹಿತಿಗಳ ಪ್ರಕಾರ ಈ ಅವಧಿಯಲ್ಲಿ ಒಟ್ಟು 971 ಕೋವಿಡೇತರ ಸಾವುಗಳು ದಾಖಲಾಗಿವೆ. ವಾಸ್ತವ ಸಂಖ್ಯೆ ಖಂಡಿತವಾಗಿಯೂ ಇದಕ್ಕಿಂತ ಹೆಚ್ಚಿರುತ್ತದೆ, ಏಕೆಂದರೆ ವರದಿಯಾಗದ ಸಾವುಗಳು ಸಾಕಷ್ಟು ಸಂಖ್ಯೆಯಲ್ಲಿ ಇರಬಹುದು ಎಂದು ಊಹಿಸಲು ಸಾಕಷ್ಟು ಕಾರಣಗಳಿವೆ.

ಇವರು ಸಂಗ್ರಹಿಸಿರುವ ಮಾಹಿತಿಗಳ ಸಾರಾಂಶ ಹೀಗಿದೆ:

ಹಸಿವು ಅಥವ ಮತ್ತು ಹಣಕಾಸು ಹತಾಶೆಯಿಂದ	216
ಆರೋಗ್ಯಸೇವೆ ದೊರಕದೆ	77
ರಸ್ತೆ–ರೈಲು ಅಪಘಾತಗಳಲ್ಲಿ	209
ಶ್ರಮಿಕ್ ರೈಲುಗಳಲ್ಲಿ	96
ಆತ್ಮಹತ್ಯೆಗಳಿಂದ	133
ಕ್ವಾರಂಟೈನ್ ಕೇಂದ್ರಗಳಲ್ಲಿ	49
ಲಾಕ್‌ಡೌನ್ ಸಂಬಂಧಿತ ಅಪರಾಧಗಳೀಂದ	18
ಪೋಲೀಸ್ ವರ್ತನೆಗಳಿಂದ	12
ಆಲ್ಕೊಹಾಲ್ ತಪ್ಪಿದ್ದರಿಂದಾಗಿ	49
ಸುಸ್ತಿನಿಂದಾಗಿ	48
ವರ್ಗೀಕರಿಸಲಾಗದ್ದು	65
ಒಟ್ಟು	971

ಇವರಲ್ಲದೆ ಕೊರೊನ ಸೋಂಕಿನ ಭಯ, ಏಕಾಂತತೆ, ಲಾಕ್‌ಡೌನ್ ಹೇರಿದ್ದರಿಂದ ಪ್ರಯಾಣ ನಿರ್ಬಂಧಗಳು, ಮನೆಗೆ ಹಿಂದಿರುಗಲಾರದ ಹತಾಶೆಯಿಂದ 133 ಸಾವುಗಳು ಸಂಭವಿಸಿವೆ.

ಅಂದರೆ ಕನಿಷ್ಟ 1104 ವಲಸೆ ಕಾರ್ಮಿಕರು ಕೋವಿಡ್ ಕಾಲದಲ್ಲಿ ಕೋವಿಡೇತರ ಕಾರಣಗಳಿಂದ ಪ್ರಾಣ ಕಳಕೊಂಡಿದ್ದಾರೆ.

ವಾಸ್ತವವಾಗಿ ರೈಲುಗಳಲ್ಲಿ ಎಷ್ಟು ವಲಸೆ ಕಾರ್ಮಿಕರು ಪ್ರಾಣ ಕಳಕೊಂಡರು ಎಂಬುದನ್ನು ಸರಕಾರವೇ ಕಲೆ ಹಾಕುತ್ತಿತ್ತು ಎಂಬುದು ಆರ್‌ಟಿಐ ಪ್ರಶ್ನೆಯಿಂದ ತಿಳಿದುಬರದಿದೆ.(ದಿ ವೈರ್, ಸಪ್ಟಂಬರ್ 17)

ರೈಲ್ವೆಯ 18 ವಲಯಗಳ 14 ಡಿವಿಜನ್‌ಗಳಿಂದಷ್ಟೇ ಮಾಹಿತಿಗಳು ಸಂಗ್ರಹವಾಗಿವೆ: ಬಂದಿರುವ ಮಾಹಿತಿಗಳ ಪ್ರಕಾರ ಕನಿಷ್ಟ 80 ಕಾರ್ಮಿಕರು ಶ್ರಮಿಕ್ ರೈಲುಗಳಲ್ಲಿ ಸತ್ತಿದ್ದಾರೆ. ಇದರಲ್ಲಿ 8 ತಿಂಗಳ ಮಗು ಮತ್ತು 85 ವರ್ಷದ ಹಿರಿಯ ನಾಗರಿಕರು ಇದ್ದರು. ಕನಿಷ್ಟ ಎರಡು ನವಜಾತ ಶಿಶುಗಳೂ ರೈಲುಗಳಲ್ಲಿ ಪ್ರಾಣಕ್ಕೆ ಎರವಾಗಿವೆ.

ರೈಲ್ವೆ ರಕ್ಷಣಾ ಪಡೆಗಳು ವರದಿ ಮಾಡಿರುವ ಮಾಹಿತಿಗಳ ಪ್ರಕಾರ ಸತ್ತವರಲ್ಲಿ ಹಲವರು ರೈಲುಗಳಲ್ಲಿ ಮೊದಲ ಬಾರಿಗೆ ಕೊವಿಡ್ ಸೋಂಕಿಗೆ ಒಳಗಾದರು. ಇತರರಲ್ಲಿ ಕೆಮ್ಮು, ಜ್ವರ , ವಾಂತಿ ಮುಮತಾದ ಲಕ್ಷಣಗಳಿದ್ದವು, ಅವು ಇದ್ದಕ್ಕಿದ್ದಂತೆ ಹದಗೆಟ್ಟು ಪ್ರಾಣ ಕಳಕೊಂಡರು.

ಇನ್ನೂ 56 ರೈಲ್ವೆ ಡಿವಿಜನ್ನುಗಳ 'ಮಾಹಿತಿ ಸಂಗ್ರಹವಾದರೆ ಈ ಸಂಖ್ಯೆ ಇನ್ನಷ್ಟು ಮೇಲೇರುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ.

ಕೊವಿಡ್‌ನಿಂದ ಪ್ರಾಣಕಳಕೊಂಡಿರುವ ವೈದ್ಯಕೀಯ ಸಿಬ್ಬಂದಿಯ ದತ್ತಾಂಶವೂ ಇಲ್ಲ!

ಸಪ್ಟಂಬರ್ 16ರಂದು ರಾಜ್ಯಸಭಾ ಸದಸ್ಯರಾದ ರವಿಪ್ರಕಾಶ್ ವರ್ಮ ಮತ್ತು ಬಿನೊಯ್ ವಿಶ್ವಂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯಕ್ಕೆ ಕೊರೊನ ವೈರಸ್‌ನಿಂದಾಗಿ ಬಾಧಿತರಾದ ಅಥವ ಸತ್ತಿರುವ ಡಾಕ್ಟರುಗಳು, ನರ್ಸ್‌ಗಳು, ಆಶಾ ಕಾರ್ಯಕರ್ತೆಯರು ಮತ್ತು ಇತರ ಆರೋಗ್ಯ ಪಾಲನೆ ಕಾರ್ಯಕರ್ತರ ಸಂಖ್ಯೆ ಎಷ್ಟು ಎಂದು ಕೇಳಿದರು.

ಇದಕ್ಕೂ 'ನ್ಯುಇಂಡಿಯಾ' ಸರಕಾರದ ಉತ್ತರ–

"ಆರೋಗ್ಯ ರಾಜ್ಯ ಪಟ್ಟಿಯಲ್ಲಿರುವ ವಿಷಯ. ಕೇಂದ್ರೀಯ ಮಟ್ಟದಲ್ಲಿ ಈ ಮಾಹಿತಿಗಳನ್ನು ಇಡುತ್ತಿಲ್ಲ."

ಅಂದರೆ ಈ ಮಾಹಿತಿಯೂ ಸರಕಾರದ ಬಳಿ ಇಲ್ಲ!

ಇಲ್ಲದಿರುವ ಬಗ್ಗೆ ಬೇಸರವೂ ಇಲ್ಲ!

ಭಾರತೀಯ ವೈದ್ಯಕೀಯ ಸಂಘ(ಐಎಂಎ) ಸರಕಾರದ ಈ ಉತ್ತರದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಇದು "ಕರ್ತವ್ಯಲೋಪವನ್ನು, ನಮ್ಮ ಜನತೆಯ ರಕ್ಷನೆಗೆ ಟೊಂಕ ಕಟ್ಟಿ ನಿಂತ ರಾಷ್ಟ್ರೀಯ ವೀರರನ್ನು ಕೈಬಿಟ್ಟಿರುವುದನ್ನು ತೋರಿಸುತ್ತದೆ " ಎಂದು ಅದು ಹೇಳಿದೆ.

ಐಎಂಎ ಬಳಿ ಇರುವ ಮಾಹಿತಿಯ ಪ್ರಕಾರ 2238 ಡಾಕ್ಟರುಗಳು ಸೋಂಕಿತರಾಗಿದ್ದಾರೆ, ಇವರಲ್ಲಿ 382 ಮಂದಿ ಪ್ರಾಣ ಕಳಕೊಂಡಿದ್ದಾರೆ.

"ಸರಕಾರ ಕೊವಿಡ್–19ರಿಂದ ಸೋಂಕಿತರಾದ ಡಾಕ್ಟರುಗಳು ಮತ್ತು ಆರೋಗ್ಯ ಸಿಬಂದಿಯ ಅಂಕಿ–ಅಂಶಗಳು ಇಲ್ಲವೆಂದಾದರೆ ಎಷ್ಟು ಮಂದಿ ಈ ಮಹಾಸೋಂಕಿನ ವಿರುದ್ದ ಸಮರದಲ್ಲಿ ಬಲಿದಾನ ಮಾಡಿದರು ಎಂದು ತಿಳಿದಿಲ್ಲವಾದರೆ ಅದು ಸಾಂಕ್ರಾಮಿಕಗಳ ಕಾಯ್ದೆ, 1897 ಮತ್ತು ವಿಪತ್ತು ನಿರ್ವಹಣಾ ಕಾಯ್ದೆಯನ್ನು ಬಳಸುವ ನೈತಿಕ ಹಕ್ಕನ್ನು ಕಳಕೊಳ್ಳುತ್ತದೆ" ಎಂದು ಐಎಂಎ ಖಾರವಾಗಿ ಹೇಳಿದೆ.

ಇದು ಇವರನ್ನೆಲ್ಲ ಕೊರೊನ ವಾರಿಯರ್ಸ್ ಎಂದು ಸಾರ್ವಜನಿಕವಾಗಿ ಹಾಡಿ ಹೊಗಳುವವರ ಗೋಸುಂಬೆತನವನ್ನು ಬಯಲಿಗೆ ತಂರುತ್ತದೆ ಎಂದೂ ಅದು ಖೇದ ವ್ಯಕ್ತಪಡಿಸಿದೆ.

ಸರಕಾರ ನರ್ಸ್‌ಗಳು ಮತ್ತು ಇತರ ಆರೋಗ್ಯ ಕಾರ್ಯಕರ್ತರ ಪ್ರತಿನಿಧಿಗಳಿಂದ ಇಂತಹ ಮಾಹಿತಿಗಳನ್ನು ಸಂಗ್ರಹಿಸಲು ಸಾಧ್ಯವಿದೆ, ಆಗ ಸರಕಾರಕ್ಕೆ ಎಷ್ಟು ಮಂದಿ ಮುಂಚೂಣಿ ಆರೋಗ್ಯ ಕಾರ್ಯಕರ್ತರು ತಮ್ಮ ಬಲಿದಾನ ನೀಡಿದ್ದಾರೆ ಎಂಬ ಚಿತ್ರ ಸಿಗುತ್ತದೆ ಎಂದು ಐಎಂಎ ಹೇಳಿದೆ.

ಆದರೆ ಇಲ್ಲಿರುವ ಪ್ರಶ್ನೆ– ನಿಜಕ್ಕೂ ಸರಕಾರಕ್ಕೆ ಇಂತಹ ಮಾಹಿತಿ ಸಂಗ್ರಹಿಸುವ ಯೋಚನೆಯೂ ಬರಲಿಲ್ಲವೇ, ಬರದಿದ್ದರೆ ಏಕೆ ಎಂಬುದು. ಇದು ವಲಸೆ ಕಾರ್ಮಿಕರಿಗೆ ಸಂಬಂಧಪಟ್ಟಂತೆಯೂ ಏಳುವ ಪ್ರಶ್ನೆ.




ಮೋದಿಯವರ 'ನ್ಯೂಇಂಡಿಯಾ'ದಲ್ಲಿ ಮತ್ತೊಂದು ರಾಷ್ಟ್ರೀಯ ದಿನಾಚರಣೆ


ಸಪ್ಟಂಬರ್ 17: ರಾಷ್ಟ್ರೀಯ ನಿರುದ್ಯೋಗ ದಿನಾಚರಣೆ!

ಈ ವರ್ಷದ ಸಪ್ಟಂಬರ್ 17ರಿಂದ ಅಂದರೆ, ಪ್ರಧಾನ ಮಂತ್ರಿಗಳು 70 ವರ್ಷಗಳನ್ನು ಪೂರೈಸಿದ ಜನ್ಮದಿನದಿಂದ ಹೊಸದೊಂದು ರಾಷ್ಟ್ರೀಯ ದಿನಾಚರಣೆ ಆರಂಭವಾಗಿದೆ. ದೇಶದ ಯುವ ಜನತೆ ಇದಕ್ಕೆ ರಾಷ್ಟ್ರೀಯ ನಿರುದ್ಯೋಗ ದಿನಾಚರಣೆ ಎಂದು ಹೆಸರಿಸಿದ್ದಾರೆ.


ಅಂದು ಹಲವು ಟ್ವಟರ್ ಹ್ಯಾಶ್‌ಟ್ಯಾಗ್‌ಗಳು ಟ್ರೆಂಡ್ ಆದವು. ಹಿಂದಿಯಲ್ಲಿ ರಾಷ್ಟ್ರೀಯ ಬೇರೋಜಗಾರ್ ದಿವಸ್ ನಲ್ಲಿ 17ಲಕ್ಷಕ್ಕಿಂತ ಹೆಚ್ಚು ಟ್ವೀಟ್‌ಗಳನ್ನು ಕಂಡಿದೆ ಎನ್ನಲಾಗಿದೆ.




ಪ್ರಾಣ ಕಳಕೊಂಡ ವಲಸೆ ಕಾರ್ಮಿಕರ ಸಾವುಗಳ ದತ್ತಾಂಶ ಇಲ್ಲ!
ಸತೀಶ್ ಆಚಾರ್ಯ, ನ್ಯೂಸ್ ಸ್ಟಿಂಗ್



ಪಿ.ಮಹಮ್ಮದ್, ಆಂದೋಲನ ಪತ್ರಿಕೆ



ಗಂಟೆ, ಜಾಗಟೆ, ನವಿಲು ನಡುವೆ ವಲಸೆ ಕಾರ್ಮಿಕರ ಸಾವುಗಳ ಮಾಹಿತಿ ಸಂಗ್ರಹಿಸಲಾಗಲಿಲ್ಲ
ಮುಂಜುಲ್, ಮುಂಬೈ ಮಿರರ್



ವಲಸೆ ಕಾರ್ಮಿಕರ ಸಾವಿಗೆ ಕಾರಣ ಪುಟ–0
ಮುಂಚೂಣಿ ಶುಶ್ರೂಷಕರ ಸಾವಿಗೆ ಕಾರಣ ಪುಟ–0
ಕಾರಣದ ಸಾವು ಪುಟಗಳು–11,00,000 ಪುಟಗಳು
ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ದೇವರ ಆಟವೂ, ಮಾನವರ ಹುಚ್ಚಾಟವೂ

ಮೊಘಲರನ್ನು ದೂಷಿಸುವ ಮೂಲಕ ದೂಷಣೆಯ ಆಟ ಆರಂಭವಾಗಿತ್ತು. ನಂತರ, ಬ್ರಿಟಿಷರನ್ನು, ತದನಂತರ ಗಾಂಧಿಗಳನ್ನು (ಬಡಪಾಯಿ ಮಹಾತ್ಮ ಗಾಂಧಿಯನ್ನೂ ಬಿಡಲಿಲ್ಲ), ಅಲ್ಲಿಂದ ಮನಮೋಹನ್ ಸಿಂಗ್, ಅಂತಿಮವಾಗಿ ಜವಾಹರಲಾಲ್ ನೆಹರೂ ಮೇಲೆ ಜಮಾಯಿಸಿದರು. ಆದರೆ ಅರ್ಧಶತಮಾನದ ಹಿಂದೆಯೇ ಸತ್ತಿರುವ ವ್ಯಕ್ತಿಯ ಮೇಲೆ ಎಷ್ಟೊಂದು ಮಣ್ಣು ಹಾಕಲು ಸಾಧ್ಯ? ಅದೂ ಫಜೀತಿಗಳು ತ್ವರಿತವಾಗಿ ರಾಶಿ ಬೀಳುತ್ತಿರುವಾಗ, ಮತ್ತೊಂದು ಬಲಿ ಪಶುವನ್ನು ಹುಡುಕಲೇ ಬೇಕು. ಯಾರನ್ನು ಆಯ್ಕೆ ಮಾಡಬೇಕು ಎಂಬ ಪ್ರಶ್ನೆ ಬಂದಾಗ, ಮೇಲೆ ಆಕಾಶದತ್ತ ಕೈತೋರಿಸುವುದಕ್ಕಿಂತ ಉತ್ತಮ ಆಯ್ಕೆ ಇದೆಯೇ? ಯಾವ ಪ್ರಶ್ನೋತ್ತರ ಕಾಲವೂ ಬಾಧಿಸದ, ಜೈಲು ಶಿಕ್ಷೆಯನ್ನು ತೋರಿಸಿ ನೋವುಂಟು ಮಾಡಲಾಗದ, ಸವಾಲೇ ಇಲ್ಲದ ದೈವತ್ವವನ್ನು ಹೊದ್ದ ಬಲಿಪಶುವೇ ಸಿಕ್ಕರೆ ಇನ್ನೇನು? ಹೌದು, ಸ್ವಾಮಿ, ಇದೆಲ್ಲವೂ ದೇವರ ಆಟ ಎಂದು ಹೇಳಿದರೆ ಆಯ್ತು. ಮತ್ತೆ, ಒಳ್ಳೆಯ ಕಾಲ (ಅಂದರೆ, ಜಿಡಿಪಿ ಬೆಳವಣಿಗೆ) ಮರಳಿದಾಗ, ಹಿಂದಿನ ಹೇಳಿಕೆಗೆ ಮರುರೂಪ ಕೊಟ್ಟು, ಆ ದೇವರನ್ನು ಒಬ್ಬ ವ್ಯಕ್ತಿಯೊಂದಿಗೆ ಸಮೀಕರಿಸಿ, "ನಾಯಕನಿಗೆ ಜಯವಾಗಲಿ" ಎಂದು ಘರ್ಜಿಸಿದರಾಯಿತು! ಆದರೆ, ಒಳ್ಳೆಯ ಸಮಯ ಬೇಗನೇ ಮರಳದಿದ್ದರೆ ಮಾಡುವುದೇನು?

ಎಂದು ಗಂಭೀರವಾಗಿ ಪ್ರಶ್ನಿಸುತ್ತಾರೆ ಅವಯ್ ಶುಕ್ಲ, ಹತ್ತುವರ್ಷಗಳ ಹಿಂದೆ ನಿವೃತ್ತರಾಗಿರುವ ಐಎಎಸ್ ಅಧಿಕಾರಿ

ಕೃಪೆ: ನ್ಯೂಸ್‌ಕ್ಲಿಕ್, ಸಪ್ಟೆಂಬರ್ 14, 2020 . ಅನು: ಕೆ.ಎಂ.ನಾಗರಾಜ್

"ಕಾನೂನು ಮಿಥ್ಯೆ" ಎಂಬುದು ಒಂದು ವಿಚಾರ ಅಥವ ಪರಿಕಲ್ಪನೆ. ಈ ಪರಿಕಲ್ಪನೆಯ ಪ್ರಕಾರ, ವಾಸ್ತವದಲ್ಲಿ ಒಂದು ಸಂಗತಿ ನಡೆಯದೇ ಇದ್ದರೂ ಸಹ ಕಾನೂನಿನ ದೃಷ್ಟಿಯಲ್ಲಿ ಅದು ನಡೆದಿದೆ ಎಂದು ಭಾವಿಸಲಾಗುತ್ತದೆ(ಉದಾ: ಒಬ್ಬನ ವಿಳಾಸ ತಿಳಿಯದಿರುವಾಗ ಅವನ ಮೇಲೆ ಜಾರಿಮಾಡಬೇಕಾದ ಸಮನ್ಸನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿ ಅದು ಜಾರಿಯಾದಂತೆ ಭಾವಿಸಲಾಗುತ್ತದೆ) ಕಾನೂನು ಅಥವಾ ಸಂಪ್ರದಾಯ ಅಥವಾ ನಂಬಿಕೆಯ ಪ್ರಕಾರ ಇದು ಮಾನವ ಕೋಟಿಯ ಒಳಿತಿಗೆ ಎನ್ನಲಾಗುತ್ತದೆ. ಈ ಕಾನೂನು ಮಿಥ್ಯೆಯ ಕೆಲವು ಮುಖ್ಯವಾದ ಉದಾಹರಣೆಗಳೆಂದರೆ: ನ್ಯಾಯ, ಮಾನವ ಹಕ್ಕುಗಳು, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಸಮಾನತೆ. ವಾಸ್ತವಿಕ ಜಗತ್ತಿನಲ್ಲಿ ಅವುಗಳ ನಿಜ ಅರ್ಥದಲ್ಲಿ ಅವು ಇಲ್ಲವೇ ಇಲ್ಲ. ಆದರೆ, ಅವು ಇವೆ ಎಂದು ನಮ್ಮನ್ನು ನಂಬಿಸಲಾಗಿದೆ. ಒಂದು ಸುವ್ಯವಸ್ಥಿತ ಮತ್ತು ಸ್ಥಿರ ಸಮಾಜಕ್ಕೆ ಕಾನೂನು, ಸಂಪ್ರದಾಯ ಮತ್ತು ನಂಬಿಕೆಗಳು ಅಗತ್ಯವಾಗುತ್ತವೆ. ಅವು ಇಲ್ಲದಿದ್ದರೆ ಸಮಾಜವು ಅವ್ಯವಸ್ಥೆಯ ಸ್ಥಿತಿಗೆ ಇಳಿಯುತ್ತದೆ.

ಇತ್ತೀಚಿನ ದಿನಗಳಲ್ಲಿ ಭಾರತದ ಸಂವಿಧಾನವೂ ಸಹ ಒಂದು "ಕಾನೂನು ಮಿಥ್ಯೆ" ಆಗಿಯೇ ಕಾಣುತ್ತದೆ. ದೇವರು ಎಂಬುದು ಕೂಡ. ವಾಸ್ತವವಾಗಿ ದೇವರು ಎಂಬುದು ಅಸ್ತಿತ್ವದಲ್ಲಿಲ್ಲ. ಕೊನೆಯ ಪಕ್ಷ ವಿಜ್ಞಾನವು ತೃಪ್ತಿಕರವಾಗಿ ಒಪ್ಪಿಕೊಳ್ಳುವ ಮಟ್ಟಿಗಂತೂ ಇಲ್ಲ. ಆದರೆ, ಶ್ರದ್ಧೆ, ಭಕ್ತಿ, ನಂಬಿಕೆಗಳ ದೃಷ್ಟಿಯಲ್ಲಿ ಮತ್ತು ಒಂದು ಸ್ಥಿರ ಸಮಾಜದ ಹಿತದೃಷ್ಟಿಯಲ್ಲಿ ದೇವರ ಅಸ್ತಿತ್ವವನ್ನು ಜನರು ನಂಬುವುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ, ಇದು ಅಧಿಕಾರ ಹಿಡಿಯಲು ಬಿಜೆಪಿ-ಆರ್‌ಎಸ್‌ಎಸ್ ಜೋಡಿಯು ಸಂಪೂರ್ಣವಾಗಿ ಬಳಸಿಕೊಂಡಿರುವ ಒಂದು ಮಿಥ್ಯೆ. ಅವರು ಇದನ್ನು ಎಷ್ಟೊಂದು ಲಾಭದಾಯಕವಾಗಿ ಉಪಯೋಗಿಸಿಕೊಂಡಿದ್ದಾರೆಂದರೆ ಆ ಮಟ್ಟಿಗೆ ಈ ಹಿಂದೆ ಯಾರೂ ಬಳಸಿಕೊಂಡಿಲ್ಲ ಮತ್ತು ಬಹುಷಃ ಮುಂದೆಯೂ ಸಹ ಯಾರಿಗೂ ಸಾಧ್ಯವಿಲ್ಲ. ಈ ವರೆಗೆ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸಲು ನಡೆಸಿದ ಚಳವಳಿ ಮತ್ತು ಈಗ ರಾಮಮಂದಿರ ನಿರ್ಮಾಣದ ಆರಂಭವು ಇದಕ್ಕೆ ಒಂದು ಉತ್ತಮ ಉದಾಹರಣೆ. ವಾಸ್ತವವಾಗಿ, ಇದು ದೇವರು ಮತ್ತು ನ್ಯಾಯ- ಈ ಎರಡು ಕಾನೂನು ಮಿಥ್ಯೆಗಳು ಕಲೆತು ಏಕೀಭವಿಸಿ ಬಿಜೆಪಿಯ ಉದ್ದೇಶವನ್ನು ಈಡೇರಿಸಿದ ನಿದರ್ಶನ. ಅದರಲ್ಲೂ ನ್ಯಾಯದ ಕಲ್ಪನೆಯಂತೂ ಸರ್ವೋಚ್ಚ ನ್ಯಾಯಾಲಯದ ವಿವರಿಸಲಾಗದ ತೀರ್ಪಿನ ರೂಪದಲ್ಲಿ ಒಂದು ಸಮುದಾಯದ ನಿರೀಕ್ಷೆಗಳನ್ನು ಹುಸಿಗೊಳಿಸಿತು, ಆದರೆ ಒಬ್ಬ ನ್ಯಾಯಾಧೀಶರನ್ನು ಸಂಸದೀಯ ಎತ್ತರಕ್ಕೆ ಕೊಂಡೊಯ್ದಿತು.

ಆದರೆ, ಮಿಥ್ಯೆ ಎಂದರೆ ಆಡಳಿತದಲ್ಲಿರುವ ಬಿಜೆಪಿಗೆ ಭಾರೀ ಹಿತವೆನಿಸುವ ಸಂಗತಿ. ಏಕೆಂದರೆ, ಅದು ಎದೆ ತಟ್ಟಿ ಹೇಳುವ ಸಾಧನೆಗಳು ಮತ್ತು ಆಶ್ವಾಸನೆಗಳು ಕಲ್ಪನಾವಿಹಾರಗಳಲ್ಲವೆಂದರೂ ಬಹುಪಾಲು ಮಿಥ್ಯೆಗಳಂತೂ ಹೌದು; ವೇಗದ ಆರ್ಥಿಕ ಬೆಳವಣಿಗೆ, ಐದು ಟ್ರಿಲಿಯನ್ ಡಾಲರ್ ಅರ್ಥವ್ಯವಸ್ಥೆ, 21 ದಿನಗಳಲ್ಲಿ ಕೊರೋನಾ ಸಾಂಕ್ರಾಮಿಕದ ನಿರ್ಮೂಲನೆ, ಭಾರತವನ್ನು 'ವಿಶ್ವಗುರು' ಮಾಡುವುದು, ಹವಾಮಾನ ಬದಲಾವಣೆ ಸುಧಾರಣೆಗಳಲ್ಲಿ ಜಗತ್ತಿಗೆ ಮುಂದಾಳತ್ವ, ವರ್ಷಕ್ಕೆ ಒಂದು ಕೋಟಿ ಹೊಸ ಉದ್ಯೋಗಗಳ ಸೃಷ್ಟಿ, ಕಪ್ಪು ಹಣ ನಿರ್ಮೂಲನೆ, ದೇಶವನ್ನು ಒಗ್ಗೂಡಿಸುವುದು ಮತ್ತು ಜಿಎಸ್‌ಟಿಯ ಮೂಲಕ ಇಡೀ ತೆರಿಗೆ ವ್ಯವಸ್ಥೆಯನ್ನು ಕ್ರಾಂತಿಕಾರಕವಾಗಿಸುವ ಕೆಲಸ.

ಇನ್ನೂ ಹಲವು ಸೃಜನಶೀಲ ಕಪೋಲ ಕಲ್ಪನೆಗಳಿವೆ. ಆದರೆ, ಪ್ರಸಕ್ತ ಆಡಳಿತವು ವಾಸ್ತವ ಮತ್ತು ಮಿಥ್ಯೆಯ ನಡುವಿನ ವ್ಯತ್ಯಾಸದ ಗೆರೆಗಳನ್ನು, ತನ್ನದೇ ಕ್ರಿಯೆಗಳು ಮತ್ತು "ದೇವರ ಆಟ"ದ ನಡುವಿನ ವ್ಯತ್ಯಾಸವನ್ನು ಅಳಿಸಿ ಹಾಕಿದೆ ಎಂದು ಉದಹರಿಸಲು ಇವಿಷ್ಟು ಸಾಕು. ನಮ್ಮ ಹಣಕಾಸು ಸಚಿವರ ಇತ್ತೀಚಿನ ಹೇಳಿಕೆ ಈ ಬಗ್ಗೆ ದೊರಕುವ ಒಂದು ಅಧಿಕೃತ ದೃಢೀಕರಣ. ನಮ್ಮ ಅರ್ಥವ್ಯವಸ್ಥೆಯು (–) 23.9% ದಷ್ಟು ಭಯಾನಕವಾಗಿ ಕುಸಿದಿರುವುದು ಒಂದು "ದೇವರ ಆಟ", ಆದ್ದರಿಂದ ರಾಜ್ಯಗಳಿಗೆ ಜಿಎಸ್‌ಟಿ ಬಾಕಿಯನ್ನು ಕೇಂದ್ರ ಸರ್ಕಾರ ಪಾವತಿಸಬೇಕಾಗಿಲ್ಲ. ವಾಸ್ತವವಾಗಿ, ಈ "ದೇವರ ಆಟ"ವೂ ಒಂದು ಕಾನೂನು ಮಿಥ್ಯೆಯೇ!

ನಿರ್ಮಲಾ ಸೀತಾರಾಮನ್ ಬಹಳ ಧಾರ್ಮಿಕ ಶ್ರದ್ಧೆಯ ವ್ಯಕ್ತಿ: ಅವರು ಈರುಳ್ಳಿ ತಿನ್ನುವುದಿಲ್ಲ. ಅವರು ಮಂಡಿಸುವ ಬಜೆಟ್ ಅಂಕಿ-ಅಂಶಗಳಿಗಿಂತಲೂ ಅವರು ಉದ್ಧರಿಸುವ ಪ್ರಾಚೀನ ಸಾಹಿತ್ಯದ ಶ್ರೇಷ್ಠ ಕೃತಿಗಳ ಅಣಿ ಮುತ್ತುಗಳೇ ಹೆಚ್ಚು ನೈಜವಾಗಿವೆ. ಸರಸ್ವತಿ ನದಿ ಎಂಬ ಒಂದು ಪುರಾಣದ ನದಿ ಹರಿಯುತ್ತಿದ್ದುದು ಸತ್ಯ ಎಂದು ಹೇಗೆ ಅವರು ನಂಬುತ್ತಾರೋ, ಆರ್ಥಿಕತೆಯ "ಹಸಿರು ಚಿಗುರು" ಗಳು ಮೂಡುತ್ತಿವೆ ಎಂಬ ಅವರ ನಂಬಿಕೆಯೂ ಅಷ್ಟೇ ನೈಜವಾಗಿದೆ. ಸಮಸ್ಯೆ ಎಂದರೆ, ಇವೆಲ್ಲ ನಿರ್ಮಲಾ ಸೀತಾರಾಮನ್ ಕಣ್ಣಿಗೆ ಮಾತ್ರ ಕಾಣುತ್ತವೆ. ಬೇರೆ ಯಾರಿಗೂ ಕಾಣುವುದಿಲ್ಲ. ಆದ್ದರಿಂದ, ಈ ಶ್ರದ್ಧಾವಂತೆಯಿಂದ ದೇವರ ದೂಷಣೆಯನ್ನು ಅರ್ಥಮಾಡಿಕೊಳ್ಳುವುದಾದರೂ ಹೇಗೆ? ಇವರಿಗೂ ಇನ್ನೊಬ್ಬ ಮಹಾನ್ ದೈವಭಕ್ತ ಅರ್ಜೆಂಟೈನಾದ ಖ್ಯಾತಿವೆತ್ತ ಫುಟ್ಬಾಲ್ ಆಟಗಾರ ಡಿಯಾಗೋ ಮರಡೋನಾಗೂ ಇರುವ ಸಾಮ್ಯತೆಗಳು ಬಹಳ ಕಡಿಮೆ. ಆದರೆ ಆತನೂ 'ದೇವರ ಕೈ' ಬಗ್ಗೆ ಮಾತನಾಡಿದ್ದ, ಆದರೆ ಅವನೇನೋ ಆ ಕೈಯಿಂದ ತನ್ನ ಫುಟ್ಬಾಲ್ ಪಂದ್ಯವನ್ನು ಗೆದ್ದ. ಆದರೆ, ನಮ್ಮ ಹಣಕಾಸು ಸಚಿವರು ತಮ್ಮ ಪಂದ್ಯವನ್ನು ಕಳೆದುಕೊಳ್ಳುತ್ತಿರುವಂತೆ ತೋರುತ್ತದೆ.

ನಿರ್ಮಲಾ ಸೀತಾರಾಮನ್ ಅವರ ಈ ನಿಗೂಢ ಹೇಳಿಕೆ ರಾಜಕೀಯ ವ್ಯಾಖ್ಯಾನಕಾರರು ಮತ್ತು ಅರ್ಥಶಾಸ್ತ್ರಜ್ಞರನ್ನು ಗೊಂದಲಕ್ಕೆ ತಳ್ಳಿದೆ. ನಿಜ, ಈ ಮಂದಿ ಸ್ಪಷ್ಟ ಆಲೋಚನೆಗೆ ಹೆಸರುವಾಸಿಯಾದವರೇನಲ್ಲ ಎಂಬುದು ಬೇರೆ ಮಾತು. ನಿರ್ಮಲಾ ಸೀತಾರಾಮನ್ ಅವರ ಈ ಮಾತಿನ ಅರ್ಥವನ್ನು ಗ್ರಹಿಸುವ ಸಲುವಾಗಿ, ಬೊಬ್ಬಿಡುವ ಟಿವಿ ಆಂಕರ್‌ಗಳು ಕೂಡ ರ್‍ಹಿಯಾ ಚಕ್ರವರ್ತಿ ಮತ್ತು ಕಂಗನಾ ರಣಾವತ್ ಅವರತ್ತ ನೆಟ್ಟಿದ್ದ ತಮ್ಮ ನೋಟವನ್ನು ಈ ಹೇಳಿಕೆಯತ್ತ ತಿರುಗಿಸಿದ್ದಾರೆ(ಅವರ ಮಟ್ಟಿಗೆ ನಿಜಕ್ಕೂ ಇದೊಂದು ಸಾಹಸ ಎಂದು ಒಪ್ಪಿಕೊಳ್ಳಲೇಬೇಕು). ಸರಿ. ನಿರ್ಮಲಾ ಸೀತಾರಾಮನ್ ಅವರ ಈ ಮಾತು, ಪ್ರಧಾನಿ ನರೇಂದ್ರ ಮೋದಿಯವರನ್ನು ಕೊನೆಗೂ ದೈವತ್ವಕ್ಕೆ ಏರಿಸಿದೆ ಎಂದರ್ಥವೇ? ಏಕೆಂದರೆ, ಹತಾಶೆಯ ಮತ್ತು ವಿನಾಶದ ಈ ವಾದ್ಯಗೋಷ್ಠಿಯನ್ನು ಮಹಾನಾಯಕನ ಕೈಗಳು ಮಾತ್ರವೇ ನಿರ್ದೇಶಿಸಬಲ್ಲವು. ಅಥವಾ, ನಮಗೆ ನಮ್ಮ ಹಕ್ಕಾಗಿ ಸಿಗಬೇಕಾದುದನ್ನು ತಪ್ಪಿಸಲು ಪ್ರಭುತ್ವವು ವಿಜಯ್ ಮಲ್ಯ ಮತ್ತು ನೀರವ್ ಮೋದಿ ಅವರ ಸಾಲಿನಲ್ಲಿ ನಿಂತಿದೆ ಎಂಬ ಸಾರ್ವಭೌಮ ಮೋಸದ ಅಂತಿಮ ತಪ್ಪೊಪ್ಪಿಗೆಯೇ?

ದೇವರ ಈ ಆಟದ ಬಗ್ಗೆ ಶ್ರೀಮತಿ ಸೀತಾರಾಮನ್ ಅವರು ತಮ್ಮ ಹೇಳಿಕೆಯಲ್ಲಿರುವ ಸ್ಪಷ್ಟ ವಿರೋಧಾಭಾಸವನ್ನು ವಿವರಿಸಲಿಲ್ಲ; ಒಬ್ಬ ಹಿಂದೂ ದೇವರು ತನ್ನ ಸ್ವಂತ ಭಕ್ತರಿಗೆ ಇಂತಹ ಘೋರ ಶಿಕ್ಷೆಯನ್ನು ವಿಧಿಸಿರುವುದಾದರೂ ಏಕೆ? ಅಥವಾ ಒಂದು ಹಿಂದೂ ರಾಷ್ಟ್ರವು ತನ್ನದೇ ದೇವರನ್ನು ದೂಷಿಸುವುದಾದರೂ ಏಕೆ? ಈ ತೊಡಕು ಅಮೆರಿಕನ್ ಕವಿ ಓಗ್ಡೆನ್ ನ್ಯಾಶ್ ಅವರ ಒಂದು ಅಮರ ಪದ್ಯವನ್ನು ನೆನಪಿಗೆ ತರುತ್ತದೆ:

"ದೇವರು ಯಹೂದಿಗಳನ್ನು
ಆಯ್ಕೆ ಮಾಡಿರುವುದು ಎಷ್ಟು ವಿಚಿತ್ರವಾಗಿದೆ.
ಆದರೆ, ಇನ್ನೂ ಹೆಚ್ಚು ವಿಚಿತ್ರವೆಂದರೆ,
ಯಹೂದಿ ದೇವರನ್ನು ಆಯ್ದುಕೊಂಡವರು
ಯಹೂದಿಗಳನ್ನು ಧಿಕ್ಕರಿಸುವುದು!"

ಇಲ್ಲಿ ಇದೇ ರೀತಿಯ ಇನ್ನೊಂದು ಗೊಂದಲದ ಕೈವೋಲಾಗಿರುವಂತೆ ಕಾಣುತ್ತದೆ. ಬಹುಶಃ ಸಂಸತ್ತಿನ ಹಾಲಿ ಅಧಿವೇಶನದಲ್ಲಿ ಅದರ ಬಗ್ಗೆ ಸ್ಪಷ್ಟನೆ ಸಿಗಬಹುದೇನೋ? ಹೌದು. ವಾಡಿಕೆಯ ಪ್ರಶ್ನೋತ್ತರ ಕಾಲ ಇರುವುದಿಲ್ಲ ಎಂದು ನನಗೆ ಗೊತ್ತು. ಏಕೆಂದರೆ, ಉತ್ತರಗಳೇ ಉಳಿದಿಲ್ಲವಲ್ಲ. ಆದರೂ, ಈ ವಿಷಯವನ್ನು ನಿಂದನೆಯ ಪ್ರಕರಣದ ರೀತಿಯಲ್ಲಿ, ಬಹುಶಃ, ತಾನಾಗಿಯೇ ಕೈಗೆತ್ತಿಕೊಳ್ಳಬಹುದು. ಅಷ್ಟಕ್ಕೂ, ಸರ್ಕಾರಕ್ಕೆ ಸಲಹೆ ಕೊಡಲು ಈಗ ಸಂಸತ್ತಿನಲ್ಲಿ ನಿವೃತ್ತ (ಅಥವಾ ಮರುರೂಪಿತ) ರಂಜನ್ ಗೊಗೊಯ್ (ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ) ಅವರೇ ಇದ್ದಾರೆ: ದೇವರನ್ನು ತೋರಿಸು, ನಾನು ನಿಯಮವನ್ನು ತೋರಿಸುತ್ತೇನೆ.

ಬಾಳೆಹಣ್ಣು ಗಣರಾಜ್ಯದ ವಾಹಿನಿಗಳನ್ನೇ ನೆಚ್ಚಿರುವವರನ್ನು ಬಿಟ್ಟು ಉಳಿದೆಲ್ಲರಿಗೂ ಶ್ರೀಮತಿ ಸೀತಾರಾಮನ್ ಮತ್ತು ಅವರ ಕ್ಯಾಪ್ಟನ್ ಇಡೀ ಭೂಮಿಕೆಯ ಮೇಲಿನ ನಿಯಂತ್ರಣವನ್ನು ವೇಗವಾಗಿ ಕಳೆದುಕೊಳ್ಳುತ್ತಿದ್ದಾರೆ ಎಂಬುದು ಕಾಣುತ್ತಿದೆ. ಅದು 'ದೇವರ ಆಟ'ಗಳಿಂದ ಅಲ್ಲ ದುರಹಂಕಾರದ ಕೃತ್ಯಗಳಿಂದ :ಸಿಎಎ, ಎನ್‌ಆರ್‌ಸಿ, ಎನ್‌ಐಎ, ಜಿಎಸ್‌ಟಿ, ಯುಎಪಿಎ, ನೋಟು ರದ್ದತಿ, 20,000 ಕೋಟಿ ರೂ.ಗಳ ವೆಚ್ಚದ ಹೊಸ ಪಾರ್ಲಿಮೆಂಟ್ ಕಟ್ಟಡ ಸಮೂಹ, 2021ರ ಕುಂಭಮೇಳಕ್ಕೆ 2,000 ಕೋಟಿ ಬಜೆಟ್ ಘೋಷಣೆ, ಈಗಾಗಲೇ ಬುಲೆಟ್ ಕಳೆದುಕೊಂಡಿರುವ ಬುಲೆಟ್ ರೈಲು – ಈ ಎಲ್ಲದರ ನಡುವೆ ನಮ್ಮ ಅರ್ಥವ್ಯವಸ್ಥೆಯ ತಳ ಕಿತ್ತುಕೊಂಡು ಹೋಗಿದೆ, ಅತ್ತ ನಮ್ಮ ಉತ್ತರದ ಗಡಿಗಳಲ್ಲಿ ಡ್ರ್ಯಾಗನ್ ಆರಾಮವಾಗಿ ತನ್ನ ಬಾಲವನ್ನು ಸುರುಳಿ ಸುತ್ತಿಕೊಳ್ಳುತ್ತಿದೆ, ನಾವಾದರೋ, ಕೊರೋನಾ ಸಾಂಕ್ರಾಮಿಕದ "ಸುಗಮ ಹರಡುವಿಕೆ"ಯಲ್ಲಿ ಅಮೇರಿಕಾವನ್ನು ಹಿಂದಿಕ್ಕಿ, ವಿಶ್ವದಲ್ಲೇ ಮೊದಲ ಸ್ಥಾನಕ್ಕೆ ಏರಿ ಮುಂಬರುವ ದೀಪಾವಳಿಯನ್ನು ಆಚರಿಸಲಿದ್ದೇವೆ.

ನಮ್ಮ ಆರ್ಥಿಕ ಪುನರುಜ್ಜೀವನವನ್ನು ಬಿಂಬಿಸಲು ಒಂದು ಹೊಸ ರೇಖಾಚಿತ್ರವನ್ನೇ ಅರ್ಥಶಾಸ್ತ್ರಜ್ಞರು ಕಂಡುಹಿಡಿಯಬೇಕಾಗಿ ಬಂದಿದೆ. ಏಕೆಂದರೆ, ಭಾರತದ ಅರ್ಥವ್ಯವಸ್ಥೆಯ ಚೇತರಿಕೆಯು ಇಂಗ್ಲಿಷ್ ವರ್ಣಮಾಲೆಯ K ಅಕ್ಷರ ಆಕಾರದಲ್ಲಿರುತ್ತದೆಯಂತೆ- ಒಂದು ಲಂಬ ರೇಖೆಯಿಂದ ಎರಡು ಕವಲುರೇಖೆಗಳಾಗಿ ಚಾಚಿಕೊಂಡು, ಬೃಹತ್ ಪ್ರಮಾಣದ ಅಸಮಾನತೆಗಳು ಉಂಟಾಗುವ ಸೂಚನೆಯನ್ನು ಕೊಡುತ್ತವೆ. ಬಹುಶಃ, ಇದನ್ನು ಮುಂದಿನ ದಿನಗಳಲ್ಲಿ, ಕೇದಾರನಾಥ ರೇಖೆ ಎಂದು ಕರೆಯಬಹುದು, ಸರ್ವೋಚ್ಚ ನಾಯಕನು ತನ್ನ ಜೋಳಿಗೆ ಸಮೇತ ಒಂದು ಹಿಮಾಲಯದ ಗುಹೆಯಲ್ಲಿ ತನ್ನ ಮೊದಲ ಪಟ್ಟಿಯ ಕಾರ್ಪೋರೇಟ್ ದೋಸ್ತುಗಳೊಂದಿಗೆ ಧ್ಯಾನಿಸುತ್ತಾ ಅತೀಂದ್ರೀಯ ಔನ್ನತ್ಯಕ್ಕೆ ಏರುವುದರ ಪ್ರತೀಕವಾಗಿ. K ಅಕ್ಷರದ ಕೆಳಗೆ ಚಾಚುವ ಕವಲುರೇಖೆಯಲ್ಲಿರುವ ನನ್ನ-ನಿಮ್ಮಂತಹ ಮೂರ್ಖರು , ದಿವಾಳಿಯ ಮತ್ತು ವಿನಾಶದ ಪಾತಾಳಕ್ಕೆ ಧುಮುಕುತ್ತೇವೆ. ಇದೀಗ K ಗ್ರಾಫಿನ ಸಾರಭೂತ ಅಂಶ.


ಆದರೆ, ಮುಂದೆಯೂ ಚುನಾವಣೆಗಳನ್ನು ಗೆಲ್ಲಲೇ ಬೇಕಾಗಿದೆ. ಅದು ನಾವೇ ಸಾಧಿಸಿದ್ದು ಎನ್ನುವ ಸಮಯವಲ್ಲ, ಹೊಣೆ ದಾಟಿಸುವ ಸಮಯ.

ಪುಟ 14 ನೋಡಿ



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೊಳ್ಳಿ

ಸುದರ್ಶನ ಟಿವಿಯ "ಉನ್ಮತ್ತ ಕಾರ್ಯಕ್ರಮ"
ಈಗ ಸುಪ್ರಿಂ ಕೋರ್ಟ್‌ನಿಂದಲೇ ತಡೆಯಾಜ್ಞೆ



ಆಗಸ್ಟ್ ಕೊನೆಯ ವಾರದಲ್ಲಿ ಸುದರ್ಶನ ಟಿವಿ ಎಂಬ ಒಂದು ವಾಹಿನಿ "ಯುಪಿಎಸ್‌ಸಿ ಜಿಹಾದ್' ಎಂಬುದನ್ನು ಬಯಲು ಮಾಡುವುದಾಗಿ ಭಾರೀ ಪ್ರಚಾರ ನಡೆಸಿತ್ತು. ಮುಸ್ಲಿಮರನ್ನು ದೊಡ್ಡ ಪ್ರಮಾಣದಲ್ಲಿ ಅಧಿಕಾರಶಾಹಿಯೊಳಕ್ಕೆ ನುಸುಳಿಸುವ ಸಂಚು ನಡೆಯುತ್ತಿದೆ, ಜಾಮಿಯ ಮಿಲಿಯ ವಿದ್ಯಾರ್ಥಿಗಳು ಯುಪಿಎಸ್‌ಸಿ ಪರೀಕ್ಷೆಗಳ ಮೂಲಕ ಅದನ್ನು ಕೈವಶ ಮಾಡಿಕೊಳ್ಳಲು ಎಂತಹ ಪ್ರಯತ್ನ ನಡೆಸಿದ್ದಾರೆ ಎಂದು ಸಾಕ್ಷ್ಯ ಸಮೇತ ಈ ಕಾರ್ಯಕ್ರಮ ಬಯಲಿಗೆಳೆಯುವುದಾಗಿ ಅದರ ಪ್ರಮೋ ಭಾರೀ ಪ್ರಚಾರ ನಡೆಸಿತು. ಮೇಲ್ನೋಟಕ್ಕೇ ಅದೊಂದು ದ್ವೇಷ ಪ್ರಚಾರದಂತೆ ಕಾಣುತ್ತಿದ್ದುದರಿಂದ ಅದರ ಪ್ರಸಾರವನ್ನು ತಡೆಯಬೇಕು ಎಂದು ಎನ್‌ಬಿಎಸ್‌ಎಗೆ ಮತ್ತು ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ಎನ್‌ಬಿಎಸ್‌ಎ ಅದನ್ನು ಕೇಂದ್ರ ಸುದ್ಧಿ ಮತ್ತು ಪ್ರಸಾರ ಮಂತ್ರಾಲಯಕ್ಕೆ ಕಳಿಸಿದ್ದರೆ, ಸುಪ್ರಿಂ ಕೋರ್ಟ್‌ಅದರ ಪ್ರಸಾರದ ಮೊದಲೇ ತಡೆಯುವುದು ಸರಿಯಾಗದು ಎಂದು ಹೇಳಿ ವಿಚಾರಣೆಯನ್ನು ಸಪ್ಟಂಬರ್ 15ಕ್ಕೆ ಮುಂದೂಡಿತು. ಆದರೆ ದಿಲ್ಲಿ ಹೈಕೋರ್ಟ್ ತಡೆಯಾಜ್ಞೆ ಕೊಟ್ಟಿತು.

ಕೇಂದ್ರ ಸುದ್ದಿ ಮತ್ತು ಪ್ರಸಾರ ಮಂತ್ರಾಲಯ ಯಾವುದೇ ನಿಯಮಗಳನ್ನು ಉಲ್ಲಂಘಿಸಬಾರದು ಎಂದಷ್ಟೇ ಹೇಳಿ ಅದರ ಪ್ರಸಾರಕ್ಕೆ ಅನುಮತಿ ನೀಡಿದ ನಂತರ ಈ ತಡೆಯಾಜ್ಞೆಯನ್ನು ಮುಂದುವರೆಸಲಿಲ್ಲ. ಸಪ್ಟಂಬರ್ 11ರಿಂದ 14 ರವರೆಗೆ ಅದರ ನಾಲ್ಕು ಕಂತುಗಳು ಪ್ರಸಾರಗೊಂಡಿವೆ. ಇನ್ನೂ ಸಪ್ಟಂಬರ್ 20 ರ ವರೆಗೆ ಅದು ಮುಂದುವರೆಯುವುದಾಗಿ ಹೇಳಲಾಗಿತ್ತು.

ಆದರೆ ಈಗ ಸಪ್ಟಂಬರ್ 15 ರಂದು ವಿಚಾರಣೆ ಮುಂದುವರೆಸಿದ ಸುಪ್ರಿಂ ಕೋರ್ಟ್ 'ಮೇಲ್ನೋಟಕ್ಕೇ ಈ ಕಾರ್ಯಕ್ರಮದ ಉದ್ದೇಶ, ಆಶಯ ಮತ್ತು ಗುರಿ ಮುಸ್ಲಿಂ ಸಮುದಾಯವನ್ನು ಅವಹೇಳನ ಮಾಡುವುದು, ನಾಗರಿಕ ಸೇವೆಗಳ ಒಳಕ್ಕೆ ನುಸುಳುವ ಒಂದು ಪಿತೂರಿಯ ಭಾಗ ಎಂದು ಚಿತ್ರಿಸುವ ಕಪಟ ಪ್ರಯತ್ನದಿಂದ ಕೂಡಿದೆ ಎಂದು ಕಂಡು ಬರುತ್ತದೆ" ಎನ್ನುತ್ತ ಅದರ ಪ್ರಸಾರಕ್ಕೆ ?ಗ ತಡೆಯಾಜ್ಞೆ ನೀಡಿದೆಯಲ್ಲದೆ, ಇದೊಂದು "ಉನ್ಮತ್ತ ಕಾರ್ಯಕ್ರಮ' ಎಂಬ ತೀಕ್ಷ್ಣ ಟೀಕೆಯನ್ನು ಮಾಡಿದೆ. ಈ ನ್ಯಾಯಪೀಠದ ಮುಖ್ಯಸ್ಥರಾದ ನ್ಯಾಯಮೂರ್ತಿ ಚಂದ್ರಚೂಡ್ " ಈ ಕಾರ್ಯಕ್ರಮವನ್ನು ನೋಡಿ, ಎಷ್ಟು ಹುಚ್ಚುತನದಿಂದ ಕೂಡಿದೆ, ಒಂದು ಸಮುದಾಯ ನಾಗರಿಕ ಸೇವೆಗಳೊಳಕ್ಕೆ ಪ್ರವೇಶುತ್ತಿದೆ ಎನ್ನುತ್ತಿದೆ" ಎಂದು ವಿಚಾರಣೆಯ ವೇಳೆಯಲ್ಲಿ ಹೇಳಿದರು. " ಈ ಕಾರ್ಯಕ್ರಮ ಎಷ್ಟೊಂದು ಕಪಟದಿಂದ ಕೂಡಿದೆ. ಒಂದು ನಿರ್ದಿಷ್ಟ ಸಮುದಾಯದ ನಾಗರಿಕರು ಅದೇ ಪರೀಕ್ಷೆಯ ಮೂಲಕ ಹಾದು ಬರುತ್ತಾರೆ, ಅದೇ ಸಂದರ್ಶನ ತಂಡ ಅವರ ಸಂದರ್ಶನ ನಡೆಸುತ್ತದೆ. ಇದು ಯುಪಿಎ?ಸ್‌ಸಿಯ ಬಗ್ಗೆಯೂ ಸಂದೇಹವನ್ನು ಉಂಟು ಮಾಡುತ್ತದೆ. ಇಂತಹ ಪ್ರಶ್ನೆಗಳನ್ನು ಹೇಗೆ ನಿಭಾಯಿಸುವುದು? ಇದನ್ನು ಸಹಿಸಲು ಸಾಧ್ಯವೇ?" ಎಂದೂ ನ್ಯಾಯಮೂರ್ತಿ ಚಂದ್ರಚೂಡ್ ಪ್ರಶ್ನಿಸಿರುವುದಾಗಿ ವರದಿಯಾಗಿದೆ.



ಬಿಜೆಪಿ ಸರಕಾರದ ಕೃಪಾಕಟಾಕ್ಷ

ಈ ವಾಹಿನಿಗೆ ಬಿಜೆಪಿ ಸರಕಾರದ ಕೃಪಾಕಟಾಕ್ಷ ಇದೆ ಎಂಬುದನ್ನು ಅದೇ ಪ್ರಮಾಣಿಸಿಕೊಂಡಿದೆ

ಸುದರ್ಶನ ಟಿವಿಯ ವಕೀಲರು ಮಾತ್ರವಲ್ಲ, ಕೇಂದ್ರ ಸರಕಾರದ ಸಾಲಿಸಿಟರ್ ಜನರಲ್ ಕೂಡ ಈ ಪ್ರಸಾರವನ್ನು ತಡೆಯುವುದು 'ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸಿದಂತಾಗುತ್ತದೆ ಎಂದು ವಾದಿಸಲು ಪ್ರಯತ್ನಿಸಿದರು ಎಂಬುದು ಗಮನಾರ್ಹ.

"ಕೇಂದ್ರ ಸರಕಾರ ಸಪ್ಟಂಬರ್ 9ರಂದು ಇದರ ಪ್ರಸಾರದ ಆದೇಶ ನೀಡಿತು. ನಂತರ ಸಪ್ಟಂಬರ್ 11,12,13 ಮತ್ತು 14ರಂದು ಇದು ಪ್ರಸಾರಗೊಂಡಿದೆ. ಮಂತ್ರಾಲಯದಿಂದ ಯಾರಾದರೂ ಇದನ್ನು ನೋಡಿ ಈ ಬಗ್ಗೆ ಯೋಚಿಸಿದ್ದಾರೆಯೇ?" ಎಂದು ಸಾಲಿಸಿಟರ್ ಜನರಲ್‌ರವರನ್ನು ನ್ಯಾಯಪೀಠ ಪ್ರಶ್ನಿಸಿದಾಗ, ಈ ಬಗ್ಗೆ ಸರಕಾರದಿಂದ ಸೂಚನೆಗಳನ್ನು ಪಡೆಯುವದಾಗಿ ಅವರು ಹೇಳಬೇಕಾಗಿ ಬಂತು.

ಸುಪ್ರಿಂ ಕೋರ್ಟ್‌ನ ಈ ಮೂವರು ನ್ಯಾಯಾಧೀಶರ ಪೀಠ ನೀಡಿದ ಆದೇಶದಲ್ಲಿ "ಸಂವಿಧಾನಿಕ ಹಕ್ಕುಗಳು ಮತ್ತು ಮೌಲ್ಯಗಳ ಒಂದು ವ್ಯವಸ್ಥೆಯ ಅಡಿಯಲ್ಲಿ ಒಂದು ಸ್ಥಿರ ಪ್ರಜಾಪ್ರಭುತ್ವ ಸಮಾಜದ ಸೌಧ ಸಮುದಾಯಗಳ ಸಹ–ಅಸ್ತಿತ್ವ ದ ಬುನಾದಿಯ ಮೇಲೆ ನಿಂತಿರುತ್ತದೆ. ಭಾರತ ನಾಗರಿಕತೆಗಳ, ಸಂಸ್ಕೃತಿಗಳ ಮತ್ತು ಮೌಲ್ಯಗಳ ಒಂದು ಮೂಸೆ" ಎಂದು ಟಿಪ್ಪಣಿ ಮಾಡುತ್ತ "ಒಂದು ಸಮುದಾಯವನ್ನು ಅವಹೇಳನ ಮಾಡುವ ಯಾವುದೇ ಪ್ರಯತ್ನವನ್ನು ಸಂವಿಧಾನಿಕ ಹಕ್ಕುಗಳ ರಕ್ಷಕನಾದ ಈ ನ್ಯಾಯಾಲಯ ಅನಾದರದಿಂದ ಕಾಣುತ್ತದೆ" ಎಂದು ಖಾರವಾಗಿಯೇ ಹೇಳಿದೆ.

ಅಲ್ಲದೆ, ಇದರ ಪ್ರಸಾರವನ್ನು ಯಾವುದೇ ರೀತಿಯಲ್ಲಿ ಮುಂದುವರೆಸಬಾರದು ಎಂದು ಆದೇಶ ನೀಡಿದ ನಂತರ ನ್ಯಾಯಮೂರ್ತಿ ಚಂದ್ರಚೂಡ್ ಅವರು ಇಲ್ಕ್ಯಾನಿ??? ಮಾಧ್ಯಮಕ್ಕೆ ಕೆಲವು ನಿರ್ದಿಷ್ಠ ಮಾನಕಗಳನ್ನು ರೂಪಿಸಬಲ್ಲ ?ವರು ಪ್ರತಿಷ್ಠಿತ ನಾಗರಿಕರ ಒಂದು ಸಮಿತಿಯನ್ನು ನೇಮಿಸುವ ಬಗ್ಗೆ ಯೋಚಿಸುತ್ತಿರುವುದಾಗಿ ಹೇಳಿದರೆಂದು 'ಲಿವ್‌ಲಾ' ವರದಿ ಮಾಡಿದೆ.

ವಿಚಾರಣೆ ಮುಂದು ವರೆಯಲಿದೆ.

ಈ ನಡುವೆ ಐವರು ನಿವೃತ್ತ ಐಎಎಸ್ ಅಧಿಕಾರಿಗಳು ಮತ್ತು ಇಬ್ಬರು ಐಎಫ್‌ಎಸ್ ಅಧಿಕಾರಿಗಳು ಈ ಕೇಸಿನಲ್ಲಿ ಮಧ್ಯಪ್ರವೇಶಿಸಲು ಅರ್ಜಿ ಹಾಕಿರುವುದಾಗಿ ವರದಿಯಾಗಿದೆ. ನ್ಯಾಯಾಲಯ 'ದ್ವೇಷ ಭಾಷಣ' ಎಂಬ ಪದದ ವ್ಯಾಪ್ತಿ ಮತ್ತು ಅರ್ಥವನ್ನು ವಿಷದಪಡಿಸಬೇಕು, ಈ ಮೂಲಕ ನಾಗರಿಕರು, ಅನುಷ್ಠಾನ ಅಧಿಕಾರಿಗಳು, ಮತ್ತು ನ್ಯಾಯಲಯಗಳಲ್ಲಿ ಯಾವ ಭಾಷಣಕ್ಕೆ ರಕ್ಷಣೆಯಿದೆ, ಯಾವುದು ಇದರ ವ್ಯಾಪ್ತಿಯ ಹೊರಕ್ಕೆ ಹೋಗುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಸಿಗುವಂತಾಗಬೇಕು ಎಂಬುದು ತಮ್ಮ ಆಶಯ ಎಂದು ಇವರು ಹೇಳಿದ್ದಾರೆ.

ಗಮನಿಸಬೇಕಾದ ಸಂಗತಿಯೆಂದರೆ ಈ ಬಾರಿಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಪಾಸಾದ ಮುಸ್ಲಿಮ್ ಅಭ್ಯರ್ಥಿಗಳ ಪ್ರಮಾಣ 4.22ಶೇ., ಆದರೆ ಭಾರತದ ಜನಸಂಖ್ಯೆಯಲ್ಲಿ ಮುಸ್ಲಿಮ್ ಸಮುದಾಯದ ಪ್ರಮಾಣ 14.2ಶೇ.!



ವ್ಯಂಗ್ಯಚಿತ್ರಕೃಪೆ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ದೇವರ ಆಟವೂ, ಮಾನವರ ಹುಚ್ಚಾಟವೂ

ಪುಟ 13 ರಿಂದ

ದೇವರನ್ನು ಸಂತುಷ್ಟಗೊಳಿಸುವ ಕೆಲಸವನ್ನು ಆಮೇಲೆ ಮಾಡಬಹುದು, ಬಹುಶಃ, ರಾಮ ಮಂದಿರದ ಪ್ರತಿಷ್ಠಾಪನೆಯ ಸಮಯದಲ್ಲಿ, ಅಥವ ಕಾಶಿ ಮತ್ತು ಮಥುರಾ ದೇವಸ್ಥಾನಗಳ ವಿವಾದವನ್ನು ಮುನ್ನೆಲೆಗೆ ತಂದಾಗ. ಈಗಂತೂ ದೂಷಣೆಯ ಸಮಯವೇ. 40 ಲಕ್ಷ ಕೋಟಿ ರೂ.ಗಳ ಸಾಲ ವಸೂಲಿ ಮುಂದೂಡಿಕೆಯಿಂದ ಬ್ಯಾಂಕಿಂಗ್ ವ್ಯವಸ್ಥೆಯು ಕುಸಿದು ಬೀಳುವ ಹಂತದಲ್ಲಿದೆ. ರಾಜ್ಯ ಸರ್ಕಾರಗಳು ಆದಾಯಗಳು ಕುಸಿದಿರುವ ಹಿನ್ನೆಲೆಯಲ್ಲಿ ತಮ್ಮ ನೌಕರರನ್ನು ಮನೆಗೆ ಕಳಿಸಲು, ಉಳಿಯುವವರ ವೇತನವನ್ನು ಮತ್ತು ನಿವೃತ್ತ ನೌಕರರ ಪಿಂಚಣಿಯನ್ನು ಕಡಿತಗೊಳಿಸಲು ಆರಂಭಿಸಲಿವೆ. ಈಗಾಗಲೇ 2 ಕೋಟಿ 30 ಲಕ್ಷ ಸಂಬಳದಾರ ಉದ್ಯೋಗಗಳು ನಾಶವಾಗಿವೆ. ಬಿಹಾರ ಮತ್ತು ಬಂಗಾಳದಲ್ಲಿ ಚುನಾವಣೆಗಳು ಹತ್ತಿರದಲ್ಲೇ ಇವೆ. ಯಾರಾದರೂ ಡಬ್ಬ ಹಿಡಿದು ಸಾಗಬೇಕಾಗಿದೆ.

ಸರ್ಕಾರ ಮತ್ತು ಬಿಜೆಪಿ ದೂಷಣೆಯ ಆಟವನ್ನು ಆರಂಭಿಸುತ್ತವೆ. ಇದನ್ನು ಮೊಘಲರನ್ನು ದೂಷಿಸುವ ಮೂಲಕ ಆರಂಭಿಸಿದ್ದರು. ನಂತರ, ಬ್ರಿಟಿಷರನ್ನು, ತದನಂತರ ಗಾಂಧಿಗಳನ್ನು (ಬಡಪಾಯಿ ಮಹಾತ್ಮ ಗಾಂಧಿಯನ್ನೂ ಬಿಡಲಿಲ್ಲ), ಅಲ್ಲಿಂದ ಮನಮೋಹನ್ ಸಿಂಗ್, ಅಂತಿಮವಾಗಿ ಜವಾಹರಲಾಲ್ ನೆಹರೂ ಮೇಲೆ ಜಮಾಯಿಸಿದರು. ಆದರೆ ಅರ್ಧಶತಮಾನದ ಹಿಂದೆಯೇ ಸತ್ತಿರುವ ವ್ಯಕ್ತಿಯ ಮೇಲೆ ಎಷ್ಟೊಂದು ಮಣ್ಣು ಹಾಕಲು ಸಾಧ್ಯ? ಅದೂ ಫಜೀತಿಗಳು ತ್ವರಿತವಾಗಿ ರಾಶಿ ಬೀಳುತ್ತಿರುವಾಗ, ಮತ್ತೊಂದು ಬಲಿ ಪಶುವನ್ನು ಹುಡುಕಲೇ ಬೇಕು. ಯಾರನ್ನು ಆಯ್ಕೆ ಮಾಡಬೇಕು ಎಂಬ ಪ್ರಶ್ನೆ ಬಂದಾಗ, ಮೇಲೆ ಆಕಾಶದತ್ತ ಕೈತೋರಿಸುವುದಕ್ಕಿಂತ ಉತ್ತಮ ಆಯ್ಕೆ ಇದೆಯೇ? ಯಾವ ಪ್ರಶ್ನೋತ್ತರ ಕಾಲವೂ ಬಾಧಿಸದ, ನೋವಿನ ಬಗ್ಗೆ, ಜೈಲು ಶಿಕ್ಷೆಯನ್ನು ತೋರಿಸಿ ನೋವುಂಟು ಮಾಡಲಾಗದ, ಸವಾಲೇ ಇಲ್ಲದ ದೈವತ್ವವನ್ನು ಹೊದ್ದ ಬಲಿಪಶುವೇ ಸಿಕ್ಕರೆ ಇನ್ನೇನು? ಹೌದು, ಸ್ವಾಮಿ, ಇದೆಲ್ಲವೂ ದೇವರ ಆಟ ಎಂದು ಹೇಳಿದರೆ ಆಯ್ತು. ಮತ್ತೆ, ಒಳ್ಳೆಯ ಕಾಲ (ಅಂದರೆ, ಜಿಡಿಪಿ ಬೆಳವಣಿಗೆ) ಮರಳಿದಾಗ, ಹಿಂದಿನ ಹೇಳಿಕೆಗೆ ಮರುರೂಪ ಕೊಟ್ಟು, ಆ ದೇವರನ್ನು ಒಬ್ಬ ವ್ಯಕ್ತಿಯೊಂದಿಗೆ ಸಮೀಕರಿಸಿ, "ನಾಯಕನಿಗೆ ಜಯವಾಗಲಿ" ಎಂದು ಘರ್ಜಿಸಿದರಾಯಿತು! ಆದರೆ, ಒಳ್ಳೆಯ ಸಮಯ ಬೇಗನೇ ಮರಳದಿದ್ದರೆ ಮಾಡುವುದೇನು? ಆಗ, ಗೂಬೆ ಕೂರಿಸುವುದು ಯಾರ ಮೇಲೆ? ಅದಕ್ಕೇನಂತೆ, ಹೇಗೂ ಇದ್ದೇ ಇದ್ದಾನಲ್ಲಾ ಆ ಪವಿತ್ರಾತ್ಮ!

ಕಾರ್ಮಿಕ ಸಂಘಗಳಲ್ಲಿ ಪಕ್ಷದ ಕೆಲಸ ಕುರಿತು

ಪುಟ 11 ರಿಂದ

ಜನಸಮೂಹದ ದಿನನತ್ಯದ ಬೇಡಿಕೆಗಳ ಬಗ್ಗೆ ಅವರ ಪ್ರತಿಕ್ರಿಯೆಗಳೇನು, ಅವರ ಮನಸ್ಸಿನಲ್ಲಿ ಏನದೆ ಎನ್ನುವುದನ್ನು ಕಾರ್ಯಕರ್ತರು ಜಾಡು ಹಿಡಿಯಬೇಕು.

"ಪ್ರತಿಯೊಂದು ಉದ್ಯಮ ಮತ್ತು ಕೈಗಾರಿಕೆಗಳಲ್ಲಿನ ಬೇಡಿಕೆಗಳನ್ನು ಜಾಗರೂಕತೆಯಿಂದ ರೂಪಿಸಬೇಕು. ತರ್ಕಬದ್ಧವಲ್ಲದ ಮಿತಿ ಮೀರಿದ ಬೇಡಿಕೆಗಳ ಪ್ರತಿಪಾದನೆಯನ್ನು ದೂರವಿಡಬೇಕು.

"ಹೋರಾಟವನ್ನು ಆರಂಭಿಸುವ ಮೊದಲು ಮತ್ತು ನಂತರ ನಮ್ಮ ಪರವಾಗಿ ಜನಾಭಿಪ್ರಾಯವನ್ನು –ಕಾರ್ಮಿಕೇತರ ಜನಗಳ ಅಭಿಪ್ರಾಯವನ್ನು– ಮೂಡಿಸಬೇಕು. ಇದನ್ನು ವಿಶೇಷವಾಗಿ ಮುನಿಸಿಪಲ್ ಸೇವೆಗಳು, ಸಾರಿಗೆ, ಸ್ಥಳೀಯ, ದೀಪವ್ಯವಸ್ಥೆ ಮುಂತಾದವುಗಳಲ್ಲಿ ಬಹಳ ಎಚ್ಚರಿಕೆಯಿಂದ ಮಾಡಬೇಕು. ಮುಷ್ಕರವು ಅರ್ಧ ದಿನವೋ ಅಥವಾ ಒಂದು ದಿನವೋ ಅಥವಾ ದೀರ್ಘಕಾಲದ್ದೋ ಎನ್ನುವುದು ಕಾರ್ಮಿಕರ ಸಿದ್ಧತೆ ಮತ್ತು ನಾಯಕತ್ವದ ಐಕ್ಯತೆಯನ್ನು ಅವಲಂಬಿಸುತ್ತದೆ. . . .ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸುವುದು ಎಂದರೆ ಅದರಲ್ಲಿ ಪೋಲಿಸರ ಭಯೋತ್ಪಾದನೆ ಮತ್ತು ಮಾಲೀಕರ ಗುಂಪುಗಳ ಹಿಂಸೆಗಳಿಂದ ರಕ್ಷಣೆಯೂ ಒಳಗೊಂಡಿರುತ್ತವೆ. ಅದನ್ನು ಹೇಗೆ ಮಾಡುವುದು ಎನ್ನುವುದು ನಿರ್ದಿಷ್ಟ ಸನ್ನಿವೇಶ, ಅನುಭವಿಸಲು ಮತ್ತು ಕಾರ್ಯಾಚರಣೆ ಮಾಡಲು ಜನರ ಸಿದ್ಧತೆಯನ್ನು ಅವಲಂಬಿಸಿರುತ್ತದೆ.

"ಕಾರ್ಮಿಕರ ಹೋರಾಟಗಳನ್ನು ರೈತರ ಹೋರಾಟಗಳೊಂದಿಗೆ ಹೇಗೆ ಜೋಡಿಸಬೇಕೆಂಬ ಪ್ರಶ್ನೆಯು ಪ್ರದೇಶ ಹಾಗೂ ಕೈಗಾರಿಕೆ ಮತ್ತು ಸಂಬಂಧಪಟ್ಟ ಕಾರ್ಮಿಕರ ಹಾಗೂ ರೈತರ ಸಂಘಟನಾತ್ಮಕ ಹಾಗೂ ಸೈದ್ಧಾಂತಿಕ ಸಿದ್ಧತೆಯ ಸ್ಥಿತಿಯನ್ನು ಅವಲಂಬಿಸಿರುತ್ತದೆ.

"ಎಷ್ಟೇ ಪ್ರಮಾಣದ ವಿವರವಾದ ನಿರ್ದೇಶನಗಳನ್ನು ಕೊಟ್ಟರೂ, ಅವು ಸಾಮೂಹಿಕ ಅನುಭವ ಮತ್ತು ಅದನ್ನು ಕಾರ್ಮಿಕ ಸಂಘಗಳನ್ನು ಕಟ್ಟುವಲ್ಲಿ ಮತ್ತು ಕಾರ್ಮಿಕ ವರ್ಗದ ಬೇಡಿಕೆಗಳನ್ನು ಸಮರ್ಥಿಸಿಕೊಳ್ಳುವಲ್ಲಿ ಬಳಸಿಕೊಳ್ಳುವ ಸಾಮರ್ಥ್ಯ ಹಾಗೂ ಕೌಶಲ್ಯಗಳ ಸ್ಥಾನವನ್ನು ಎಂದಿಗೂ ಪಡೆಯಲು ಸಾಧ್ಯವಿಲ್ಲ ಎನ್ನುವುದನ್ನು ನೆನಪಿನಲ್ಲಿಡಬೇಕು."

ಇಸ್ರೇಲ್ ನೊಂದಿಗೆ ಯು.ಎ.ಇ ಮತ್ತು ಬಹ್ರೇನ್ ಒಪ್ಪಂದ: ಪ್ಯಾಲೇಸ್ಟಿನಿಯನ್ ಪ್ರತಿಭಟನೆ

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ಇಸ್ರೇಲ್ ನೊಂದಿಗೆ ಯುನೈಟೆಡ್ ಅರಬ್ಬೀ ಎಮಿರೇಟ್ಸ್ (ಯು.ಎ.ಇ) ಮತ್ತು ಬಹ್ರೇನ್ ದೇಶಗಳು, ತಮ್ಮ ಸಂಬಂಧಗಳನ್ನು "ಸಾಮಾನ್ಯೀಕರಿಸುವ" ಒಪ್ಪಂದಕ್ಕೆ ಇಸ್ರೇಲ್ ನೊಂದಿಗೆ ಸಹಿ ಮಾಡಿವೆ. ಯು.ಎಸ್ ನ ಮಧ್ಯಸ್ತಿಕೆಯಿಂದ ಈ ಎರಡು ದೇಶಗಳು 'ಅಬ್ರಹಾಂ ಒಪ್ಪಂದ' ಎಂದು ಕರೆಯಲಾಗುವ ಈ ಒಪ್ಪಂದಕ್ಕೆ ಸಹಿ ಹಾಕಿವೆ. ಇದರ ವಿರುದ್ಧ ಇಸ್ರೇಲ್ ಆಕ್ರಮಿತ ಭೂ ಪ್ರದೇಶಗಳಲ್ಲಿ ನೂರಾರು ಪ್ಯಾಲೇಸ್ಟಿನಿಯನ್ ರು ಪ್ರತಿಭಟನೆ ನಡೆಸಿದ್ದಾರೆ. ಪ್ಯಾಲೇಸ್ಟಿನಿಯನ್ ಭೂ ಪ್ರದೇಶಗಳನ್ನು ಅತಿಕ್ರಮಣ ಮಾಡಿ ಕೊಂಡಿರುವ ಇಸ್ರೇಲಿನ ಜತೆ, ಈ ಸಮಸ್ಯೆ ಬಗೆಹರಿಸುವವರೆಗೆ ಸಂಬಂಧ ಇಟ್ಟುಕೊಳ್ಳದಿರುವ ಅರಬ್ ದೇಶಗಳ ಸಾಮಾನ್ಯ ನೀತಿಯನ್ನು ಇದು ಉಲ್ಲಂಘಿಸಿದೆ ಎಂಬುದು ಅವರ ಆಪಾದನೆ. ಜೋರ್ಡಾನ್ ಮತ್ತು ಈಜಿಪ್ಟ್ ಬಿಟ್ಟರೆ ಎಲ್ಲ ಅರಬ್ ದೇಶಗಳು ಇಸ್ರೇಲಿನ ಜತೆ ಸಂಬಂಧ ಇಟ್ಟುಕೊಂಡಿಲ್ಲ.

ಇದೊಂದು ನಾಚಿಕೆಗೇಡಿನ ಒಪ್ಪಂದ ಎಂದಿರುವ ಪ್ಯಾಲೇಸ್ಟಿನಿಯನ್ ಪ್ರತಿಭಟನಾಕಾರರು. ಅಮೆರಿಕಾದ ಅಧ್ಯಕ್ಷರ ಶ್ವೇತ ಭವನದ ಮುಂದೆ ಒಪ್ಪಂದದ ವಿರುದ್ಧ ಪ್ರತಿಭಟನೆ ನೆಡೆಸಿದ್ದಾರೆ. 'ನಿಜವಾದ ಯಹೂದಿಗಳು ನೋಡಿ ನಾವು ಇಲ್ಲಿದ್ದೇವೆ' 'ಇಸ್ರೇಲ್ ನಮ್ಮನ್ನು ಪ್ರತಿನಿಧಿಸುವುದನ್ನು ನಾವೆಂದು ಒಪ್ಪುವುದಿಲ್ಲ' 'ನಾವೆಲ್ಲಾ ಪ್ಯಾಲೇಸ್ಟಿನಿಯನ್ ರು', 'ನಮ್ಮನ್ನು ಯು.ಎ.ಇ ಮತ್ತು ಬಹ್ರೇನ್ ಒಪ್ಪಂದಕ್ಕೆ ಸೇರಿಸುವುದನ್ನು ನಾವು ವಿರೋದಿಸುತ್ತೇವೆ' (No To Normalisation) ಎಂದಿದ್ದಾರೆ ಅವರು.

ಇಸ್ರೇಲ್ ಆಕ್ರಮಿತ ಪಶ್ಚಿಮ ದಂಡೆ ಮತ್ತು ಗಾಜಾದ ಪ್ರಮುಖ ನಗರಗಳಾದ ರಮಲ್ಲಾ, ನಬ್ಲುಸ್ ಮತ್ತು ಹೆಬ್ರಾನ್ ಗಳಲ್ಲಿ ಪ್ರತಿಭಟನಾಕಾರರು ದೊಡ್ಡ ಸಂಖ್ಯೆಯಲ್ಲಿ ಒಟ್ಟುಗೂಡಿದ್ದರು. ಅವರ ಪ್ರಮುಖ ಘೋಷಣೆ "ಪ್ಯಾಲೇಸ್ಟಿನಿಯಾದ ಧ್ವಜಗಳನ್ನು ಮತ್ತು ಬ್ಯಾನರ್ ಗಳನ್ನು ಇಸ್ರೇಲ್ ಆಕ್ರಮಣಕಾರರೊಂದಿಗೆ ಸಾಮಾನ್ಯೀಕರಣ ಮಾಡಬೇಡಿ" ಎಂಬುದಾಗಿತ್ತು. ಅವುಗಳಲ್ಲಿ ಕೆಲವು ಬ್ಯಾನರುಗಳು "ಯುಎಇ ಮತ್ತು ಬಹ್ರೇನ್ ಸಹಿ ಮಾಡಿದ್ದ ಒಪ್ಪಂದಗಳನ್ನು" ಅವಮಾನದ ಮತ್ತು ನಾಚಿಕೆಗೇಡಿನ ಒಪ್ಪಂದ "ಗಳು ಮತ್ತು ಇವು "ದೇಶದ್ರೋಹ"ದ ಒಪ್ಪಂದಗಳು ಎಂಬುದಾಗಿ ಬ್ಯಾನರ್ ಗಳ ಮೇಲೆ ಬರೆದಿತ್ತು

ಕೇಂದ್ರ ಪ್ರದೇಶವಾದ ರಮಲ್ಲಾ" ನಗರದ ಇಸ್ರೇಲ್ ಆಕ್ರಮಿತ ಪ್ರದೇಶದಲ್ಲಿ ಅಯೋಜಿಸಿದ್ದ ಪ್ರಮುಖ ಪ್ರತಿಭಟನೆಯಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚಾಗಿದ್ದರೂ ಸಹಾ, ಹೆಚ್ಚಿನ ಸಂಖ್ಯೆಯಲ್ಲಿ ಮನೆಗಳಿಂದ ಹೊರ ಬಂದು ಒಪ್ಪಂದದ ವಿರುದ್ದ ಪ್ರತಿಭಟನೆ ವ್ಯಕ್ತ ಪಡಿಸಿದರು. ಸೆಪ್ಟೆಂಬರ್ 15 ರಂದು, ಪಶ್ಚಿಮ ದಂಡೆ ಮತ್ತು ಪೂರ್ವ ಜೆರುಸಲೆಂ ನಲ್ಲಿ 1118 ಕ್ಕೂ ಹೆಚ್ಚು ಕೋವಿಡ್–19 ಸೊಂಕುಗಳು ದಾಖಲಾಗಿವೆ. ಈ ಎರಡು ಪ್ರಾಂತ್ಯಗಳಲ್ಲಿ ಒಟ್ಟು ಕೋವಿಡ್–19 ಸೋಂಕಿತರ ಸಂಖ್ಯೆ 2,5 ಲಕ್ಷಕ್ಕೂ ಹೆಚ್ಚು, ಇದರಲ್ಲಿ 40 ಸಾವಿರಕ್ಕಿಂತ ಹೆಚ್ಚು ಸಾವುಗಳು ಸಂಭವಿಸಿವೆ. ಪ್ರತಿಭಟನೆಯಲ್ಲಿ ಭಾಗವಹಿಸಲು, ಇವರನ್ನು ಕೋವಿಡ್–19 ಸೋಂಕು ಹರಡುವಿಕೆಯ ಅಪಾಯ ಸ್ವಲ್ಪವು ಎದೆಗುಂದಿಸಲಿಲ್ಲ. ಇಸ್ರೇಲ್ ಆಕ್ರಮಣದ ವಿರುದ್ಧ ಮತ್ತು ಪ್ಯಾಲೇಸ್ಟಿನಿಯನ್ ರ ಹಕ್ಕುಗಳಿಗಾಗಿ ಮತ್ತು ಸಾರ್ವಭೌಮತ್ವದ ರಕ್ಷಣೆಗಾಗಿ ಹೋರಾಡುವ ಸಂಕಲ್ಪವನ್ನು ಇವರು ವ್ಯಕ್ತಪಡಿಸಿದ ಪರಿ ಗಮನಾರ್ಹವಾದದ್ದು.

ಈ ಒಪ್ಪಂದಕ್ಕೆ ಸಹಿ ಹಾಕಲು ಅರಬ್ ದೇಶಗಳ ಮೇಲೆ ಯು.ಎಸ್ ಅಧ್ಯಕ್ಷ ಟ್ರಂಪ್ ಸಾಕಷ್ಟು ಒತ್ತಡ ಹಾಕಿದ್ದರು. ಆದರೂ ಈ ಎರಡು ಸಣ್ಣ ದೇಶಗಳು ಮಾತ್ರ ಸಹಿ ಹಾಕಿವೆ. ಈ ಒಪ್ಪಂದ ಟ್ರಂಪ್ ಅವರ 'ವಿದೇಶಾಂಗ ನೀತಿಯ ವಿಜಯ' ಎಂದು ಬಿಸಿ ಏರುತ್ತಿರುವ ಯು.ಎಸ್ ಅಧ್ಯಕ್ಷೀಯ ಚುನಾವಣಾ ಪ್ರಚಾರದಲ್ಲಿ ಬಿಂಬಿಸಲು ಅವರು ಕಾತುರರಾಗಿದ್ದಾರೆ. ಅದಕ್ಕಾಗಿ ಈ ಒಪ್ಪಂದಕ್ಕೆ ಸಹಿ ಹಾಕುವ ಸಮಾರಂಭದಲ್ಲಿ ಅವರು ಸ್ವತಃ ಹಾಜರಿದ್ದರು. ಇದನ್ನು ಅವರು ಈ (ಪಶ್ಚಿಮ ಏಶ್ಯಾ) ಪ್ರದೇಶದಲ್ಲಿ ಹಾಗಬಿಸ್ರೇಲ್ ಮತ್ತು ಅರಬ್ ದೇಶಗಳ ನಡುವೆ ಶಾಂತಿ ತರುವ ಒಪ್ಪಂದ ಎಂದು ಬಣ್ಣಿಸಿದ್ದರು. ಇದು ಅತಿಶಯೋಕ್ತಿ ಎಂಬುದು ಸ್ವಯಂವಿದಿತ. ಏಕೆಂದರೆ ಇಸ್ರೇಲಿನ ಜತೆ ಗಡಿ ಹಂಚಿಕೊಂಡಿರುವ ಅರಬ್ ದೇಶಗಳು ಯಾವುದೂ ಇಂತಹ ಒಪ್ಪಂದ ಮಾಡಿಕೊಂಡಿಲ್ಲ. ಆದ್ದರಿಂದ ಪ್ಯಾಲೆಸ್ಟೀನ್ ಸಮಸ್ಯೆ ಬಗೆಹರಿಸುವವರೆಗೆ ಈ ಪ್ರದೇಶದಲ್ಲಿ ಶಾಂತಿ ನೆಲೆಸುವ ಸಂಭವ ಇಲ್ಲ. ಮಾತ್ರವಲ್ಲ, ಯೆಮೆನ್, ಸಿರಿಯಾ ಗಳಲ್ಲಿ ಘರ್ಷಣೆ ಮುಂದುವರೆದಿದೆ. ಮಾತ್ರವಲ್ಲ, ಇಡೀ ಪ್ರದೇಶದಲ್ಲಿ ಸುನ್ನಿ–ಶಿಯಾ ಘರ್ಷಣೆ ಹೆಚ್ಚಿದೆ.

ಆದರೆ ಇದರರ್ಥ ಇದು ಈ ಪ್ರದೇಶದ ಮಿಲಿಟರಿ ವ್ಯೂಹಾತ್ಮಕ ಮತ್ತು ರಾಜಕೀಯ ದೃಷ್ಟಿಯಿಂದ ಅಮುಖ್ಯ ಒಪ್ಪಂದವೇನಲ್ಲ. ಈ ಪ್ರದೇಶದಲ್ಲಿ ಅಮೆರಿಕದ ಪ್ರಭಾವ ಯಜಮಾನಿಕೆ ಕಡಿಮೆಯಾಗುತ್ತಿದ್ಧಂತೆ, ತುರ್ಕಿ ಮತ್ತು ಇರಾನ್ ಪ್ರಾದೇಶಿಕ ಶಕ್ತಿಕೇಂದ್ರಗಳಾಗಿ ಬೆಳೆಯುತ್ತಿದ್ದಂತೆ, ಅಮೆರಿಕದ ಮಿಲಿಟರಿ–ಆರ್ಥಿಕ ಬಲದ ಮೇಲೆ ಇರುವ ಸುನ್ನಿ ಅರಬ್ ದೇಶಗಳು ಅಮೆರಿಕ ಬೆಂಬಲಿತ ಇಸ್ರೇಲ್ ಜತೆ ಒಪ್ಪಂದ ಮಾಡಿಕೊಂಡು ಮೂರನೇ ಗುಂಪಾಗಿ ಈ ಪ್ರದೇಶದಲ್ಲಿ ತಮ್ಮ ಹಿತಾಸಕ್ತಿ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿವೆ. ಇದಕ್ಕಾಗಿ 2002 ರಲ್ಲಿ ಅರಬ್ ದೇಶಗಳು ಮಾಡಿಕೊಂಡಿದ್ದ ಪ್ಯಾಲೆಸ್ಟೀನ್ ಕುರಿತ ಒಪ್ಪಂದವನ್ನು ನಿರ್ಲಕ್ಷ ಮಾಡಲು ತಯಾರಾಗುತ್ತಿವೆ. ಈ ಒಪ್ಪಂದ ಅಂತಹ ಟ್ರೆಂಡ್ ನ್ನು ತೋರಿಸುತ್ತಿದೆ. ಒಮನ್, ಕತಾರ್ ಮುಂತಾದ ಇತರ ಕೊಲ್ಲಿ ಪ್ರದೇಶದ ಸಣ್ಣ ಅರಬ್ ದೇಶಗಳು ಇದನ್ನು ಅನುಸರಿಸಬಹುದು.

ಯು.ಎಸ್ ಗೆ ಜೂಲಿಯನ್ ಅಸ್ಸಾಂಜೆ ಹಸ್ತಾಂತರಕ್ಕೆ ವಿರೋಧ

ಜುಲಿಯನ್ ಪೌಲ್ ಅಸ್ಸಾಂಜೆ ಆಸ್ಟೇಲಿಯಾದ ಒಬ್ಬ ಪ್ರಜೆ, 2006 ರಲ್ಲಿ ವಿಕಿಲೀಕ್ಸ್‌ನ ಅನ್ನು ಸಂಸ್ಥಾಪನೆ ಮಾಡಿದವರು, ಇವರೊಬ್ಬ ಸಂಪಾದಕರು, ಪತ್ರಕರ್ತರು ಹಾಗೂ ಸಕ್ರೀಯ ಪ್ರಸಾರಕರು. 2010 ರಲ್ಲಿ ಯು.ಎಸ್ ಸೈನ್ಯ ದ ಗುಪ್ತಚರ ವಿಶ್ಲೇಷಕ ಚೆಲ್ಸಿಯಾ ಮ್ಯಾನಿಂಗ್ ರವರು ಒದಗಿಸಿದ ಸರಣಿ ವರದಿಗಳನ್ನು ತಮ್ಮ ವಿಕಿಲೀಕ್ಸ್ ಮೂಲಕ ಸೋರಿಕೆ ಮಾಡಿದ ಎಂಬ ಆರೋಪದ ಮೇಲೆ ಅಸ್ಸಾಂಜೆ ಬಂಧನಕ್ಕೆ ಒಳಪಟ್ಟಿದ್ದಾರೆ.

ಇದು "ವಿಕಿಲೀಕ್ಸ್ ಫೈಲ್ಸ್" ಎಂದೇ ಪ್ರಸಿದ್ಧಿಯಾಗಿದೆ. ಇದರಲ್ಲಿ ಪ್ರಮುಖವಾಗಿ ಸಾಮ್ರಾಜ್ಯಶಾಹಿ ಯು. ಎಸ್ ತನ್ನ ಯಜಮಾನಿಕೆಯ ಹೆಸರಿನಲ್ಲಿ ಮತ್ತು ತನ್ನ ಮಿಲಿಟರಿ ಬಲವನ್ನು ಬಳಸಿಕೊಂಡು ಹಲವಾರು ದೇಶಗಳ ಮೇಲೆ ಎಸಗಿದ ಯುದ್ದಗಳ ಹಿಂದಿರುವ ವ್ಯೂಹವನ್ನು ತನ್ನ ವಿಕಿಲೀಕ್ಸ್ ಫೈಲ್ಸ್ ನಲ್ಲಿ ಕ್ರೋಡಿಕರಿಸಿ ಪ್ರಸಾರ ಮಾಡಿದ್ದರು. ಯುಎಸ್ ನ ಅಮಾನವೀಯ ಯುದ್ದಗಳ ದುರುದ್ದೇಶಗಳನ್ನು ಬಯಲಿಗೆಳೆದಿದ್ದರು. ಈ ಕಾರಣಗಳಿಂದಾಗಿಯೇ ಅಸ್ಸಾಂಜೆ ಬಂಧನದಲ್ಲಿ ಇರುವುದು. ಇದರೊಂದಿಗೆ ಇನ್ನೂ 18 ಆರೋಪಗಳನ್ನು ಎದುರಿಸುತ್ತಿದ್ದಾರೆ. ಅವುಗಳಲ್ಲಿ 17 ಬೇಹುಗಾರಿಕೆ ಕಾಯಿದೆಯಡಿಯಲ್ಲಿ ದಾಖಲಾಗಿವೆ.

ಇದೀಗ ಲಂಡನ್ನಿನ ಸೆರೆಮನೆಯ ವಾಸದಲ್ಕಿ ಅಸ್ಸಾಂಜೆ ಇದ್ದಾರೆ. ವಿಚಾರಣೆಗಾಗಿ ಯು.ಎಸ್ ಗೆ ಹಸ್ತಾಂತರ ಮಾಡಬೇಕೆಂದು ಯು.ಎಸ್ ಸರಕಾರ ಒತ್ತಾಯಿಸುತ್ತಿದೆ. ಯು.ಎಸ್ ನ ಹಸ್ತಾಂತರದ ಕೋರಿಕೆಯನ್ನು ಅಸ್ಸಾಂಜೆ ನಿರಾಕರಿಸಿದ್ದಾರೆ. ಇವರ ಬಂಧನವನ್ನು ಮತ್ತು ವಿಚಾರಣೆಯ ಹಸ್ತಾಂತರವನ್ನು ಜಗತ್ತಿನ ಪತ್ರಿಕಾ ಉದ್ಯಮ ಬಲವಾಗಿ ಟೀಕಿಸಿದೆ. ಇದು ಪತ್ರಿಕಾ ಸ್ವಾತಂತ್ರ್ಯದ ಹರಣವೆಂದು ಹಲವರು ಕರೆದಿದ್ದಾರೆ. ಮಾನವ ಹಕ್ಕುಗಳ ಉಲಂಘನೆಯೆಂದು ಅನೇಕರು ದೂಷಿಸಿದ್ದಾರೆ.

ಫ್ಯಾಷನ್ ಡಿಸೈನರ್ ವಿವಿಯನ್ ವೆಸ್ಟ್ ವುಡ್ ಮತ್ತು ಅಸ್ಸಾಂಜೆ ಯ ಪಾಲುದಾರ ಸ್ಟೆಲ್ಲಾ ಮೋರಿಸ್ ಸೇರಿದಂತೆ ಹಲವಾರು ಡಜನ್ ಬೆಂಬಲಿಗರು ನ್ಯಾಯಾಲಯದ ಹೊರಗಡೆ ಜಮಾಯಿಸಿ, ಪ್ರತಿಭಟಿಸಿದ್ದಾರೆ. ಹಸ್ತಾತಂತರ ವಿಚಾರಣೆಯ ನೆಪದಲ್ಲಿ ಪತ್ರಿಕಾ ಸ್ವಾತಂತ್ರ್ಯ ಕ್ಕೆ ನೀಡುತ್ತಿರುವ ಬೆದರಿಕೆ ಮತ್ತು ಕಿರುಕುಳವೆಂದು ಅಪಾದಿಸಿದ್ದಾರೆ.

ಜೂಲಿಯನ್ ಅಸ್ಸಾಂಜೆ ಒಬ್ಬ ಪತ್ರಿಕಾ ಸಂಪಾದಕ ಹಾಗೂ ಪ್ರಸಾರಕ, ಅವರು ವಿಶ್ವದ ಎಲ್ಲಾ ಭ್ರಷ್ಟಾಚಾರ ಮತ್ತು ಯುಎಸ್ ನ ಯುದ್ದಗಳ ಹಿಂದಿರುವ ಸಂಚು ಮತ್ತು ದುರುದ್ದೇಶಗಳ ಮೇಲೆ ಬೆಳಕು ಚೆಲ್ಲುತ್ತಿದ್ದಾರೆ ಎಂದು ಪ್ರತಿಭಟನೆಕಾರರಲ್ಲಿ ಪ್ರಮುಖರಾದ ವೆಸ್ಟ್ ವುಡ್ ಹೇಳಿದ್ದಾರೆ.

ಆದರೆ, ಯು.ಎಸ್ ನ ಪ್ರಾಸಿಕ್ಯೂಟರ್ ಗಳು 49 ವರ್ಷದ ಅಸ್ಸಾಂಜೆಯ ವಿರುದ್ದ ಇದಕ್ಕೆ ವ್ಯತಿರಿಕ್ತವಾದ ಆರೋಪಗಳನ್ನು ಮಂಡಿಸಿದ್ದಾರೆ. ಗೂಢಚರ್ಯೆ ಮತ್ತು ಕಂಪ್ಯೂಟರ್ ದುರುಪಯೋಗ ಹಾಗೂ ದಶಕದ ಹಿಂದೆ ವಿಕಿಲೀಕ್ಸ್ ಯುಎಸ್ ನ ರಹಸ್ಯ ಮಿಲಿಟರಿ ದಾಖಲೆಗಳನ್ನು ಪ್ರಕಟಿಸಿದ್ದು ಅಪರಾಧ ಎಂದಿದ್ದಾರೆ.

ಪೆಂಟಗನ್ ಕಂಪ್ಯೂಟರ್ ಅನ್ನು ಹ್ಯಾಕ್ ಮಾಡಿ ಮತ್ತು ಇರಾಕ್ ಮತ್ತು ಅಫ್ಘಾನಿಸ್ತಾನ ಯುದ್ದಗಳ ಬಗ್ಗೆ ಲಕ್ಷಾಂತರ ರಹಸ್ಯ ರಾಜತಾಂತ್ರಿಕ ಕೇಬಲ್ ಗಳನ್ನು ಮತ್ತು ಮಿಲಿಟರಿ ಫೈಲ್ ಗಳನ್ನು ಬಿಡುಗಡೆ ಮಾಡಲು ಅಸ್ಸಾಂಜೆ ಯುಎಸ್ ಸೈನ್ಯ ಗುಪ್ತಚರ ವಿಶ್ಲೇಷಕ ಚೆಲ್ಸಿಯಾ ಮ್ಯಾನಿಂಗ್ ಅವರೊಂದಿಗೆ ಸಂಚು ಹೂಡಿದ್ದಾರೆ ಎಂದು ಯು. ಎಸ್ ನ ಪ್ರಾಸಿಕ್ಯೂಟರ್ ಗಳು ಅಸ್ಸಾಂಜೆ ಮೇಲೆ ಆರೋಪಗಳನ್ನು ಹೊರಿಸಿದ್ದಾರೆ. ಈ ಆರೋಪಗಳು ಸಾಬೀತಾದರೆ, ಅಸ್ಸಾಂಜೆ ಯವರಿಗೆ 175 ವರ್ಷಗಳ ಕಾಲ ಶಿಕ್ಷೆ ವಿಧಿಸಲಾಗುತ್ತದೆ.



ಪ್ರಾಸಿಕ್ಯೂಸನ್ ಆರೋಪಗಳು ರಾಜಕೀಯ ಪ್ರೇರಿತ ಮತ್ತು ಅಧಿಕಾರ ದುರುಪಯೋಗ ವಾಗಿದೆ ಎಂದು ಅಸ್ಸಾಂಜೆ ಯ ಪರ ವಕೀಲರು ವಾದಿಸಿದ್ದಾರೆ. ಅಸ್ಸಾಂಜೆಯವರ ವಿಕಿಲೀಕ್ಸ್ ಪ್ರಕಟಣೆ ಮತ್ತು ಪ್ರಸಾರಗಳು ಪತ್ರಿಕಾ ಸ್ವಾತಂತ್ರ್ಯ ವನ್ನು ಗಟ್ಟಿಗೊಳಿಸುತ್ತವೆಯೇ ಹೊರೆತು, ಇವುಗಳು ಆರೋಪವಾಗಲಾರವು ಎಂದು ವಕೀಲರು ವಾದಿಸಿದ್ದಾರೆ.. ವಿಕಿಲೀಕ್ಸ್ ಮೂಲಕ ಸೋರಿಕೆಯಾದ ಗೂಢಚರ್ಯೆ ದಾಖಲೆಗಳು ಯುಎಸ್ ಮಿಲಿಟರಿ ತೆಗೆದುಕೊಂಡ ತಪ್ಪು ನಿರ್ಧಾರಗಳನ್ನು ಬಹಿರಂಗ ಪಡಿಸಿವೆ. ಇದರಲ್ಲಿ ಪತ್ರಿಕಾ ಸ್ವಾತಂತ್ರ್ಯ ಅಡಗಿದೆ. ವಿಕಿಲೀಕ್ಸ್ ಬಿಡುಗಡೆ ಮಾಡಿದ ವಿಡಿಯೋ ಚಿತ್ತಗಳ ಫೈಲ್ ಗಳಲ್ಲಿ 2007 ರಲ್ಲಿ ಬಾಗ್ದಾದ್ ನಲ್ಲಿ ಅಮೆರಿಕದ ಪಡೆಗಳು ನಡೆಸಿದ ಹೆಲಿಕಾಪ್ಟರ್ ದಾಳಿಯಲ್ಲಿ ಇಬ್ಬರು ರಾಯಿಟರ್ಸ್ ಪತ್ರಕರ್ತರು ಸೇರಿದಂತೆ 11 ಜನರು ಕೊಲ್ಲಲ್ಪಟ್ಟರು.

ಹಾಗಾಗಿ, ಅಸ್ಸಾಂಜೆ ಯವರ ಬಂಧನ ಕಾನೂನು ಬಾಹಿರ. ಪತ್ರಿಕಾ ಸ್ವಾತಂತ್ರ್ಯ ಕ್ಕೆ ಅಪಾಯದ ಸೂಚನೆ. ಆದ್ದರಿಂದ ಇವರನ್ನು ಬಿಡುಗಡೆ ಗೊಳಿಸಬೇಕೆಂದು ಇವರ ಪರ ವಕೀಲ ಜೆನ್ನಿಫರ್ ರಾಬಿನ್ಸನ್ ವಿಚಾರಣೆಯಲ್ಲಿ ಕೇಳಿ ಕೊಂಡಿದ್ದಾರೆ. ಜೈಲು ಶಿಕ್ಷೆ ಇವರನ್ನು ಮಾನಸಿಕ ಮತ್ತು ದೈಹಿಕ ಆರೋಗ್ಯವನ್ನು ಹಾನಿ ಮಾಡಿದೆ. ಇದರಿಂದಾಗಿ, ಖಿನ್ನತೆ ಹಲ್ಲಿನ ತೊಂದರೆ ಮತ್ತು ಭುಜಗಳ ಗಂಭೀರ ಕಾಯಿಲೆಗಳು ಹೆಚ್ಚಾಗಿವೆ.

ಈ ಹಸ್ತಾಂತರ ಪ್ರಕ್ರಿಯೆಯು ಫೆಬ್ರವರಿ ತಿಂಗಳಲ್ಲಿ ಆರಂಭವಾಯಿತು. ಆದರೆ, ಕರೋನಾ ವೈರಸ್ ಹರಡುವುದನ್ನು ತಡೆಹಿಡಿಯಲು, ಮಾರ್ಚ್ ನಲ್ಲಿ ಲಾಕ್ ಡೌನ್ ಮಾಡಿದ ಪರಿಣಾಮ ವಿಚಾರಣೆಯನ್ನು ಮುಂದೂಡಲಾಗಿತ್ತು. ಮತ್ತೆ ವಿಚಾರಣೆ ಸೆಪ್ಟೆಂಬರ್ 6 ರಿಂದ ಶುರುವಾಗಿದೆ. ಈ ಪ್ರಕ್ರಿಯೆ ಅಕ್ಟೋಬರ್ ವರೆಗೆ ನಡೆಯಲಿದೆ. ಜಿಲ್ಲಾ ನ್ಯಾಯಾಧೀಶರಾದ ವನೆಸ್ಸಾ ಬ್ಯಾರಿಸ್ಟರ್ ಅವರು ತೀರ್ಪನ್ನು ಪರಿಗಣಿಸಲು ವಾರಗಳು ಅಥವಾ ತಿಂಗಳುಗಳ ಕಾಲ ತೆಗೆದು ಕೊಳ್ಳುವ ನಿರೀಕ್ಷೆಯಿದೆ. ಸೋತ ಕಡೆಯವರು ಮೇಲ್ಮನವಿ ಸಲ್ಲಿಸಲು ಅವಕಾಶವಿದೆ.

JANASHAKTHI KANNADA VARA PATRIKE September 21-27, 2020 Price: Rs. 10/- Date of Publication: 18 September 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ರೈತ ಹಾಗೂ ಕಾರ್ಮಿಕ ವಿರೋಧಿ ಸುಗ್ರೀವಾಜ್ಞೆಗಳನ್ನು ಕಾನೂನು ಮಾಡದಂತೆ ರಾಜ್ಯದಾದ್ಯಂತ ಪ್ರತಿಭಟನೆ

ಕರ್ನಾಟಕ ರಾಜ್ಯ ಸರ್ಕಾರ ಮೂರು ಸುಗ್ರೀವಾಜ್ಞೆಗಳನ್ನು ಹೊರಡಿಸಿದೆ ಹಾಗೂ ಸೆಪ್ಟೆಂಬರ್ 21 ರಿಂದ ನಡೆಯಲಿರುವ ವಿಧಾನ ಸಭೆ ಅಧಿವೇಶನದಲ್ಲಿ ಶಾಸನ ಸಭೆಯ ಅಂಗೀಕಾರ ಪಡೆಯುವುದಕ್ಕಾಗಿ ಅಜೆಂಡಾ ಪಟ್ಟಿಯಲ್ಲಿ ಇಟ್ಟಿದೆ.

ಕರ್ನಾಟಕ ಭೂ ಸುಧಾರಣಾ ತಿದ್ದುಪಡಿ ಸುಗ್ರಿವಾಜ್ಞೆ 2020, ಎಪಿಎಂಸಿ ಕಾಯ್ದೆ ತಿದ್ದುಪಡಿ ಸುಗ್ರಿವಾಜ್ಞೆ 2020, ಕೈಗಾರಿಕಾ ವ್ಯಾಜ್ಯಗಳು ಮತ್ತು ಇತರ ಕಾಯ್ದೆ ತಿದ್ದುಪಡಿ ಸುಗ್ರಿವಾಜ್ಞೆ 2020, ಈ ಮೂರು ಸುಗ್ರಿವಾಜ್ಞೆಗಳು ರಾಜ್ಯದ ರೈತಾಪಿ ಹಾಗೂ ಕಾರ್ಮಿಕ ಜನ ಸಮೂಹಗಳ ಮೇಲೆ ಅತ್ಯಂತ ಗಂಭೀರ ದುಷ್ಪರಿಣಾಮಗಳನ್ನು ಉಂಟು ಮಾಡಬಲ್ಲ ಸುಗ್ರಿವಾಜ್ಞೆಗಳಾಗಿವೆ.

ಈ ಸುಗ್ರಿವಾಜ್ಞೆಗಳು ಆರ್ಥಿಕ ಅಸಮಾನತೆಯನ್ನು ತೀವ್ರಗೊಳಿಸುವುದಲ್ಲದೇ ರೈತ, ಕಾರ್ಮಿಕ, ದಲಿತ, ಅಲ್ಪಸಂಖ್ಯಾತ, ಮಹಿಳೆ ಹೀಗೆ ವಿವಿಧ ಸಾಮಾಜಿಕ ಜನ ಸಮೂಹಗಳನ್ನು ಮತ್ತಷ್ಟು ಸಂಕಷ್ಟಕ್ಕೀಡು ಮಾಡುವಂತಹ ಪರಿಣಾಮಗಳನ್ನು ಉಂಟುಮಾಡುತ್ತವೆ. ಈಗಾಗಲೇ ಕರೋನಾ ಸಾಂಕ್ರಾಮಿಕ ರೋಗದ ದಾಳಿಗೆ ನಲುಗಿ ಹೋಗಿರುವ ಜನ ಸಾಮಾನ್ಯರು ತಮ್ಮ ಪ್ರಜಾಸತ್ತಾತ್ಮಕ ವಿರೋಧವನ್ನು ದಾಖಲಿಸಲಾಗದ ಬಿಕ್ಕಟ್ಟಿನ ಸಮಯದಲ್ಲಿ ಇಂತಹ ಸುಗ್ರೀವಾಜ್ಞೆಗಳನ್ನು ತರುವುದು ಅಪ್ರಜಾಸತ್ತಾತ್ಮಕವಾಗುತ್ತದೆ. ಒಟ್ಟಾರೆಯಾಗಿ ಸಾರ್ವಭೌಮತ್ವ, ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ, ಒಕ್ಕೂಟ ತತ್ವ, ಪ್ರಜಾಪ್ರಭುತ್ವ ಮುಂತಾದ ನಮ್ಮ ಸಂವಿಧಾನದ ಮೂಲಭೂತ ಆಶಯ ಹಾಗೂ ತತ್ವಗಳಿಗೂ ಈ ಸುಗ್ರೀವಾಜ್ಞೆಗಳು ವಿರುದ್ಧವಾಗಿವೆ.

ಕೇಂದ್ರ ಸರ್ಕಾರವು ಇಡೀ ಕೃಷಿ ಕ್ಷೇತ್ರವನ್ನು ಕಾರ್ಪೊರೇಟ್ ಕಂಪನಿಗಳ ಸುಪರ್ದಿಗೆ ಒಪ್ಪಿಸುವ ಗುರಿ – ಉದ್ದೇಶವುಳ್ಳ ರೈತ ವಿರೋಧಿ, ಕಾರ್ಪೊರೇಟ್ ಪರ ಮೂರು ಸುಗ್ರಿವಾಜ್ಞೆಗಳಾದ ಕೃಷಿ ಉತ್ಪನ್ನ ಮಾರಾಟ ಮತ್ತು ವಾಣಿಜ್ಯ (ಉತ್ತೇಜನ ಹಾಗೂ ಬೆಂಬಲ) ಸುಗ್ರಿವಾಜ್ಞೆ 2020, ಬೆಲೆ ಭರವಸೆ ಹಾಗೂ ಕೃಷಿ ಸೇವೆಗಳ ಕುರಿತ ರೈತ (ಸಶಕ್ತೀಕರಣ ಮತ್ತು ರಕ್ಷಣೆ) ಒಪ್ಪಂದ ಸುಗ್ರಿವಾಜ್ಞೆ 2020, ಅಗತ್ಯ ವಸ್ತುಗಳ ತಿದ್ದುಪಡಿ ಕಾಯ್ದೆ ಸುಗ್ರಿವಾಜ್ಞೆ 2020 ಗಳನ್ನು ಹೊರಡಿಸಿ ವಿದ್ಯುತ್ ಕಾಯ್ದೆ 2020 ಅನ್ನು ರೂಪಿಸಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ವಿಧಾನಸಭೆಯ ಅಂಗೀಕಾರಕ್ಕೆ ಚರ್ಚೆಗೆ ಬರುತ್ತಿರುವ ಈ ಮೇಲಿನ ಸುಗ್ರಿವಾಜ್ಞೆಗಳನ್ನು ಸಂಪೂರ್ಣವಾಗಿ ವಿರೋಧಿಸಿ ರಾಜ್ಯದ ರೈತ ಸಂಘಟನೆಗಳ ಜಂಟಿ ವೇದಿಕೆ ಪ್ರತಿಭಟನೆಯನ್ನು ನಡೆಸಿತು.



















ದೆಹಲಿ ಹಿಂಸಾಚಾರ ಪ್ರಕರಣಗಳಲ್ಲಿ ಕಾಮ್ರೇಡ್ ಸೀತಾರಾಂ ಯೆಚೂರಿ, ಅಕಾಡೆಮಿಕ್ಸ್ ಮತ್ತು ಕಾರ್ಯಕರ್ತರ ಹೆಸರು ಸೇರ್ಪಡೆ ವಿರೋಧಿಸಿ ಸಿಪಿಐ (ಎಂ) ಕರ್ನಾಟಕದ ಬಹುತೇಕ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಯಿತು.









JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**